
ಸಂಪುಟ 23 ಸಂಚಿಕೆ 48-49
ಡಿಸೆಂಬರ್ 9, 2001 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ



ರೇಷನ್ ಕಾರ್ಡ್: ಭುಗಿಲೆದ್ದ ಚಳುವಳಿ



ಗ್ರಾಮೀಣ ಕೃಪಾಂಕ ಮುಂದೇನು?

ತಾಲಿಬಾನ್ ಪತನ ರೂಪುಗೊಳ್ಳದ ಸರ್ಕಾರ!

ಕೊಡಗು ಕಾಂಗ್ರೆಸ್ ಕಚ್ಚಾಟ

ಹಷ್ಮಿ ಕಗ್ಗೊಲೆ-ಬೋಫೋರ್ಸ್ ಹಗರಣ-ಕೋಲಾಹಲ, ರಾಜೀವ್ ರಾಜಿನಾಮೆಗೆ ಆಗ್ರಹ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 81

ಕಳೆದ ಸಂಚಿಕೆಯಲ್ಲಿ ರಾಜೀವಗಾಂಧಿ ಸರ್ಕಾರದ ವಿರುದ್ಧ 1988 ಮಾರ್ಚ್ 15 ರ ಭಾರತ್‌ಬಂದ್, ಪ.ಬಂಗಾಳದ ಲೋಕೋಪಯೋಗಿ ಸಚಿವರ ರಾಜನೆ, ಬೆಂಗಾಲ್ಸ್ ಲ್ಯಾಂಪ್ಸ್‌ನ ಅಪಪ್ರಚಾರ, ಬಿಕ್ರೇಶ್ವರ ವಿದ್ಯುತ್ ಯೋಜನೆ, ಪಕ್ಷದ 13ನೇ ಮಹಾಧಿವೇಶನ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ರಾಜೀವಗಾಂಧಿ ಸರ್ಕಾರದ ವಿರುದ್ಧ ಎಡ ಮತ್ತು ಜಾತ್ಯಾತೀತ ಪಕ್ಷಗಳ ವೇದಿಕೆ, ಸಫ್ದರ್ ಹಶ್ಮಿ ಕಗ್ಗೊಲೆ, 1989 ರ ಜುಲೈ 24 ರಂದು ಪ್ರತಿಪಕ್ಷಗಳ ಸಂಸತ್ ಸದಸ್ಯರ ಸಾಮೂಹಿಕ ರಾಜಿನಾಮೆ, ಮತ್ತೇ ಭಾರತ್ ಬಂದ್ ಮತ್ತು ಕೋಮುವಾದದ ಕ್ಯಾನ್ಸರ್ ಈ ಬಗ್ಗೆ ಓದಿ

ರಾಜೀವ್‌ಗಾಂಧಿ ಸರಕಾರವನ್ನು ಕಿತ್ತೊಗೆಯಲು ಎಡ ಮತ್ತು ಜಾತ್ಯಾತೀತ ಶಕ್ತಿಗಳ ವಿಶಾಲವೇದಿಕೆ ಅಗತ್ಯ ಎಂದು ನಮ್ಮ ಕೇಂದ್ರ ಸಮಿತಿ 1987 ಆಗಸ್ಟ್ 17 ರಂದು ಪ್ರತಿಪಾದಿಸಿತು. ನಮ್ಮ ಪಕ್ಷ ರಾಜೀವ್‌ಗಾಂಧಿ ಸರಕಾರದ ಮುಖ್ಯ ಗುರಿಯಾಯಿತು. ಅದಕ್ಕೂ ಮುನ್ನ ಅದು ಕೇರಳದ ಎಲ್‌ಡಿಎಫ್ ಸರಕಾರವನ್ನು ತುಳಿಯಲು ಹೊರಟಿತ್ತು. ಆ ಪುಟ್ಟ ರಾಜ್ಯದಲ್ಲಿ ನ್ಯಾಯಸಮ್ಮತವಲ್ಲದ ಕಾಂಗ್ರೆಸ್ ಆಡಳಿತ ನಡೆಯುತ್ತಿರುವುದು ರಾಜೀವ್‌ಗಾಂಧಿ ಸರಕಾರದ ನಿಜಉದ್ದೇಶ ಏನು ಎಂಬುದಕ್ಕೆ ಸ್ಪಷ್ಟ ಪುರಾವೆಯಾಗಿತ್ತು.

ಎಡಪಕ್ಷಗಳಲ್ಲಿ ಕೆಲವು ಭಿನ್ನಮತಗಳು ಇದ್ದಾಗ್ಯೂ ಏಕತೆಯ ಅವಶ್ಯಕತೆಯ ಬಗ್ಗೆ ಒಂದು ನಿರ್ದಿಷ್ಟಮಟ್ಟದ ಪ್ರಜ್ಞೆ ಕಾಲಿಟ್ಟಿದೆ ಎಂಬುದನ್ನು ನಾವು ಮನವರಿಕೆ ಮಾಡಿಕೊಂಡೆವು. ಈ ನಿರ್ಣಾಯಕ ಕಾಲಘಟ್ಟದಲ್ಲಿ ತತ್ವಬದ್ಧ ನಿಲುವನ್ನು ತಳೆಯುವುದು ಅಗತ್ಯ ಎಂದು ಮಹಾಧಿವೇಶನ ಹೇಳಿತು.

"ರಾಜಕೀಯ ಚರ್ಚೆ ಅಗತ್ಯ ಹಾಗೂ ಸಂಯುಕ್ತ ರಂಗವೊಂದರ ರಚನೆಯನ್ನು ಸಾಧಿಸಬೇಕಾದರೆ ತಪ್ಪು ನೀತಿಗಳಿಂದ ದೂರ ಸರಿಯಲು ಪ್ರಯತ್ನಿಸಬೇಕು". ಭವಿಷ್ಯದ ಕಾರ್ಯಾಚರಣೆಗೆ ಹಾದಿ ತೋರಿಸಿದ್ದರಲ್ಲಿ ಈ ಮಹಾಧಿವೇಶನದ ಯಶಸ್ಸು ಅಡಗಿದೆ.

ಸಫ್ದರ್ ಹಷ್ಮಿ ಹತ್ಯೆ

ಸ್ವಲ್ಪ ಕೆಟ್ಟ ಸುದ್ದಿ ಹೇಳುವ ಸಮಯ ಬಂದಿದೆ ಎಂದು ಭಾರವಾದ ಮನಸ್ಸಿನಿಂದ ಹೇಳಬೇಕಾಗಿದೆ. ಪಕ್ಷದ ಮಹಾಧಿವೇಶನ ಮುಕ್ತಾಯವಾದ ನಂತರ ಜನವರಿ 1 ರಂದು ಕಾಂಗ್ರೆಸ್ ಗೂಂಡಾಗಳು ಸಫ್ದರ್ ಹಷ್ಮಿಯನ್ನು ಅಮಾನುಷವಾಗಿ ಕೊಂದು ಹಾಕಿದರು. ನಾನು ತಿರುವನಂತಪುರದಲ್ಲಿದ್ದೆ. ಇಂಥ ಒಂದು ಘಟನ ನಡೆದೀತು ಎಂಬುದನ್ನು ಮೊದಲನೆದಾಗಿ ನನಗೆ ನಂಬಲು ಆಗಲಿಲ್ಲ. ನಾನು ಹಷ್ಮಿಯನ್ನು ಬಲ್ಲೆ, ದೆಹಲಿಯಲ್ಲಿದ್ದ ನಮ್ಮ ಸರಕಾರದ ವಾರ್ತೆ ಮತ್ತು ಸಂಸ್ಕೃತಿ ಇಲಾಖೆ ಕಚೇರಿಯಲ್ಲಿ ಅವರು ಕೆಲಸ ಮಾಡುತ್ತಿದ್ದರು. ಆದರೆ ಅವರಿಗೆ ಇನ್ನೊಂದು ಮುಖ್ಯ ಅಸ್ತಿತ್ವವಿತ್ತು. ತನ್ನ ಬೀದಿ ನಾಟಕಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅವರು ಯಾವಾಗಲೂ ಜನತೆಯ ಜತೆ ಇರುತ್ತಿದ್ದರು. ನಾವು ಬಂಗಾಳದಲ್ಲಿ ಪಕ್ಷದ ಗಣನಾಟ್ಯ ಮಂಚದ ಮೂಲಕ ಇಂಥ ಚಟುವಟಿಕೆಗಳನ್ನು ಕಂಡಿದ್ದೇವೆ. ಒಂದು ಆರೋಗ್ಯಕರ ಹಾಗೂ ಸ್ವಚ್ಛ ಸಂಸ್ಕೃತಿಯನ್ನು ಜನತೆಯು ಬಳಿ ಕೊಂಡೊಯ್ಯುವಲ್ಲಿ ಈ ಸಂಗಾತಿಗಳು ಎದುರಿಸಬೇಕಾದ ಕಷ್ಟಕೋಟಲೆಗಳು ಏನು ಎಂಬುದನ್ನು ನಾನು ವೈಯುಕ್ತಿಕವಾಗಿ ಅರಿತಿದ್ದೇನೆ. ಆದರೆ ದೆಹಲಿಯಲ್ಲಿ ಇಂಥ ಚಟುವಟಿಕೆಗಳು ಹೊಸದಾಗಿತ್ತು. ಕೋಮುವಾದಿ ಹಾಗೂ ಬಂಡವಾಳಶಾಹಿ ಗೂಂಡಾಗಳು ಹಷ್ಮಿಯುವರ ಚಟುವಟಿಕೆಗಳನ್ನು ಒಂದು ಸವಾಲನ್ನಾಗಿ ಸ್ವೀಕರಿಸುತ್ತಾರೆ ಎನ್ನುವುದು ಆಶ್ಚರ್ಯದ ಸಂಗತಿಯಾಗಿರಲಿಲ್ಲ.

ಹಷ್ಮಿ ಹತ್ಯೆಯ ವಿರುದ್ಧ ದೇಶಾದ್ಯಂತ ಚಿಂತನಶೀಲ ವಿಭಾಗಗಳು ನಡೆಸಿದ ಪ್ರತಿಭಟನೆ ಅಭೂತಪೂರ್ವವಾಗಿತ್ತು. ದೆಹಲಿಯಲ್ಲಿ ಅಂತರ್ರಾಷ್ಟ್ರೀಯ ಚಲನ ಚಿತ್ರೋತ್ಸವದ ಉದ್ಘಾಟನೆ ವೇಳೆ ನಟಿ ಶಭಾನಾ ಆಜ್ಮಿ ಈ ಪ್ರಕರಣವನ್ನು ನೆರೆದಿದ್ದ ಜನಸಮೂಹದ ಮುಂದೆ ಪ್ರಸ್ತಾವಿಸಿ ಗಮನ ಸೆಳೆದರು.

ಪ್ರತಿಪಕ್ಷ ಸಂಸತ್ ಸದಸ್ಯರ ರಾಜಿನಾಮೆ

ಪ್ರತಿಪಕ್ಷಗಳ ಲೋಕಸಭೆ ಸದಸ್ಯರು ಬೋಫೋರ್ಸ್ ಪ್ರಕರಣ ಸಂಬಂಧ 1989 ಜುಲೈ 24ರಂದು ಸಾಮೂಹಿಕವಾಗಿ ರಾಜಿನಾಮೆ ನೀಡಿದರು. ಇದು ಐತಿಹಾಸಿಕ ಕ್ರಮವಾಗಿತ್ತು. ಆ ರೀತಿ ಮಾಡುವುದು ಅಗತ್ಯವಾಗಿತ್ತು.



ರಾಜೀವ್‌ಗಾಂಧಿ ಸರಕಾರ ಸಂಸತ್ತಿನ ಘನತೆಯನ್ನು ತುಚ್ಛೀಕರಿಸುತ್ತಿದ್ದುದರಿಂದ ಉಳಿದದ್ದು ಅದೊಂದೇ ಮಾರ್ಗವಾಗಿತ್ತು. ರಾಜೀವ್‌ಗಾಂಧಿ ರಾಜಿನಾಮೆ ನೀಡಬೇಕೆಂದು ಜುಲೈ 18 ರಂದು ಲೋಕಸಭೆಯಲ್ಲಿ ಒತ್ತಾಯಿಸಲಾಗಿತ್ತು. ಪ್ರಧಾನಿ ಮರುದಿನ ಈ ಬೇಡಿಕೆಯನ್ನು ಲೇವಡಿ ಮಾಡಿದ್ದರು. ಬೋಫೋರ್ಸ್ ಒಪ್ಪಂದವನ್ನು ಟೀಕಿಸಿದ್ದ ಮಹಾಲೆಕ್ಕ ಪರಿಶೋಧಕರ (ಸಿಎಜಿ) ವರದಿಯನ್ನು ವಿರೋಧಿಸಲು ಕಾಂಗ್ರೆಸಿನ ಆರು ಸಂಸತ್‌ಸದಸ್ಯರು ಮುಂದಾದರು. ಸಿಎಜಿ ನಮ್ಮ ಸಂಸದೀಯ ವ್ಯವಸ್ಥೆಯ ಒಂದು ಪ್ರಮುಖ ಕಂಬವಾಗಿದೆ. ಅದರ ವರದಿಯ ಅಂಶಗಳು ಕೆಲವರಿಗೆ ಇಷ್ಟವಾಗಿರಲಿಕ್ಕಿಲ್ಲ. ಆದರೆ ಇದು ಪ್ರತಿಭಟನೆ ಸೂಚಿಸುವ ಮಾರ್ಗ ಖಂಡಿತಕ್ಕೂ ಅಲ್ಲ. ನಿಜ ಹೇಳಬೇಕೆಂದರೆ, ಅವರಿಗೆ ಅಪಾಯದ ವಾಸನೆ ಬಡಿದಿತ್ತು. ನಿಯಮಗಳ ಪ್ರಕಾರ ಸಿಎಜಿ ವರದಿ ಸಾರ್ವಜನಿಕ ಲೆಕ್ಕ ಸಮಿತಿಗೆ (ಪಿ.ಎ.ಸಿ) ಹೋಗಬೇಕು. ಪಿ.ಎ.ಸಿ. ವರದಿಯ ಆಧಾರದಲ್ಲಿ ಎ.ಬಿ.ಎ ಘನಿಖಾನ್ ಚೌಧರಿ ಕೇಂದ್ರ ಸಚಿವಸ್ಥಾನವನ್ನು ಕಳೆದುಕೊಂಡ ಉದಾಹರಣೆ ಇದೆ. ಆದರೆ ಈ ಬಾರಿ ಪ್ರಧಾನಿಯ ಕುರ್ಚಿಯ ಬುಡಕ್ಕೆ ಅಪಾಯ ಬರಲಿತ್ತು. ಸಿಪಿಐ(ಎಂ)ನ ಅಮಲ್ ದತ್ತರನ್ನು ಪಿಎಸಿ ಅಧ್ಯಕ್ಷ ಸ್ಥಾನದಿಂದ ತೆಗೆದು ಹಾಕಿ ಕಾಂಗ್ರೆಸ್ ಮಿತ್ರಪಕ್ಷ ಎಐಎಡಿಎಂಕೆಗೆ ಅದನ್ನು ನೀಡಲಾಯಿತು. ಪರಂಪರಾಗತವಾಗಿ ಈ ಹುದ್ದೆಗಳು ಪ್ರತಿಪಕ್ಷಗಳಿಗೆ ಸೇರಬೇಕಾದ್ದರಿಂದ ಜನತಾದಳದ ಎಸ್. ಜೈಪಾಲರೆಡ್ಡಿಯವರಿಗೆ ಈ ಹುದ್ದೆ ಸಿಗಬೇಕಿತ್ತು. ಆದರೆ ಅದನ್ನು ಜೀರ್ಣಿಸಿಕೊಳ್ಳುವ ಶಕ್ತಿ ಕಾಂಗ್ರೆಸ್‌ಗೆ ಇರಲಿಲ್ಲ.

1989 ರ ಜುಲೈ 20 ಅನೇಕ ದಾಖಲೆಗಳ ದಿನವಾಗಿ ದಾಖಲಾಗುತ್ತದೆ. ಲೋಕಸಭೆಯನ್ನು ಒಂಬತ್ತು ಬಾರಿ ಹಾಗೂ ರಾಜ್ಯಸಭೆಯನ್ನು ಐದು ಬಾರಿ ಮುಂದೂಡಲಾಯಿತು. ಸಿಎಜಿ ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಎಲ್.ಭಗತ್ ಪ್ರತಿಪಕ್ಷ ಸದಸ್ಯರಿಲ್ಲದ ಸದನದಲ್ಲಿ ಹೇಳಿದರು. ಪಶ್ಚಿಮ ದೇಶಗಳಲ್ಲಿ ಎಲ್ಲೂ ಇಂಥ ಘಟನೆಗಳು ನಡೆದಿರಲಿಲ್ಲ. ಯಾವುದೇ ಪ್ರತಿಪಕ್ಷವಿಲ್ಲದ ಸಂಸತ್ತಿನಲ್ಲಿ, ಸಚಿವರೊಬ್ಬರು ಕೊನೆಮೊದಲಿಲ್ಲದೆ ಒಂದು ವಿಷಯದ ಬಗ್ಗೆ ಮಾತನಾಡುವುದು, ಅದೂ ತನ್ನ ಖಾತೆಯ ವ್ಯಾಪ್ತಿಗೆ ಮೀರಿದ ವಿಚಾರದ ಕುರಿತು ಮಾತನಾಡುವುದು .... ಈ ರೀತಿಯಾಗಿ ಹಲವು ವಿಚಿತ್ರಗಳು ನಡೆದವು.

ಅದು ಜುಲೈ 23 ರ ಭಾನುವಾರ. ಸಿಪಿಐ(ಎಂ)ನ ಪಾಲಿಟ್‌ಬ್ಯೂರೋ ಸಭೆ ಮುಕ್ತಾಯಗೊಂಡಿತು. ಇಡೀ ಪ್ರತಿಪಕ್ಷದ ನಾಯಕತ್ವ ದೆಹಲಿಯ ಆಂಧ್ರಭವನದಲ್ಲಿ ಸಭೆ ಸೇರಿತು. ರಾಜೀವ್‌ಗಾಂಧಿಯನ್ನು ತೆಗೆದುಹಾಕಬೇಕೆಂದು ಬೇಡಿಕೆಯನ್ನು ಹೆಚ್ಚು ಬಲಯುತವಾಗಿ ಮಂಡಿಸಲು ಒಂದು ನಿರ್ಧಾರವನ್ನು ಕೈಗೊಳ್ಳಲಾಯಿತು. ಪ್ರಧಾನಮಂತ್ರಿ ಸುಳ್ಳು ಹೇಳುವುದನ್ನೇ ಹವ್ಯಾಸ ಮಾಡಿಕೊಂಡಿರುವುದರಿಂದ ಸಂಸತ್ತಿನಲ್ಲಿ ಇರುವುದು ನಿಷ್ಪ್ರಯೋಜಕ ಎಂದು ಆ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ವಿ.ಪಿ.ಸಿಂಗ್ ಹೇಳಿದರು. ಎಂಥದೇ ಸಂದರ್ಭದಲ್ಲಿ ಯಾವ ಪ್ರಧಾನಿಯೂ ಈ ರೀತಿ ಕೆಟ್ಟ ಹೆಸರು ಗಳಿಸಿರಲಿಲ್ಲ.

ಜುಲೈ 24 ರಂದು ಒಟ್ಟು 104 ಸಂಸತ್ ಸದಸ್ಯರು ರಾಜಿನಾಮೆ ನೀಡಿದರು. ಬೇರೆಯೇ ಕಾರಣಗಳಿಗೆ ನಾಲ್ವರು ಕಾಂಗ್ರೆಸ್ ಸದಸ್ಯರೂ ರಾಜಿನಾಮೆ ಕೊಟ್ಟರು. ಆಗಸ್ಟ್ 9 ರಂದು 'ಭಾರತ್ ಬಚಾವೋ ದಿನ'ವನ್ನು ಆಚರಿಸಲಾಯಿತು. ಆಗಸ್ಟ್ 30 ರ ಸಂಪೂರ್ಣ ಭಾರತ್ ಬಂದ್ ನಮ್ಮ ನಿಲುವನ್ನು ಪುಷ್ಟೀಕರಿಸಿತು.

ಜನರು ತಮ್ಮ ಹಕ್ಕುಗಳ ಬಗ್ಗೆ ಹೆಚ್ಚು ಪ್ರಜ್ಞಾವಂತರಾಗಿದ್ದರು. ಬೀದಿ ಬೀದಿಗಳಲ್ಲಿ ರಾಜಕೀಯದ ಬಗ್ಗೆ ಮಾತುಕತೆ ನಡೆಯತೊಡಗಿತು. ರಾಜೀವಗಾಂಧಿ ಸರಕಾರ ಅಧಿಕಾರದಲ್ಲಿ ಮುಂದುವರಿಯುವುದನ್ನು ಬಹಿರಂಗವಾಗಿಯೇ ಪ್ರಶ್ನಿಸಲಾಯಿತು. ಆಗಸ್ಟ್ 20 ರಂದು ಕೊಲ್ಕತ್ತಾದಲ್ಲಿ ನಡೆದ ರ್‍ಯಾಲಿ ಉದ್ದೇಶಿಸಿ ವಿ.ಪಿ.ಸಿಂಗ್ ಮಾತನಾಡಿದರು. ಪ್ರಧಾನಿ ಪದತ್ಯಾಗ ಮಾಡಬೇಕು ಎಂದು ಅವರು ಹೇಳಿದರು. ಅನೇಕ ಆರೋಪಗಳನ್ನು ಎದುರಿಸುತ್ತಿರುವ ರಾಜೀವ್ ಅಧಿಕಾರದಲ್ಲಿ ಮುಂದುವರಿಯುವುದು ಸೂಕ್ತವಲ್ಲ ಎಂದು ನಾನು ಹೇಳಿದೆ. ಜಗತ್ತಿನ ಮುಂದೆ ಪ್ರಧಾನಿ ನಮ್ಮ ದೇಶದ ಮಾನವನ್ನು ಹರಾಜು ಮಾಡುತ್ತಿದ್ದಾರೆ ಎಂದೂ ನಾನು ಹೇಳಿದೆ.

ಮತ್ತೆ ಭಾರತ್ ಬಂದ್

ಸರಕಾರದ ವಿರುದ್ಧ ಜನರಲ್ಲಿ ಆಗಲೇ ಬೆಳೆಯುತ್ತಿದ್ದ ಕೋಪದ ಬೆಂಕಿಗೆ ಪೆಟ್ರೋಲ್ ಸುರಿಯಲು ಬೋಫೋರ್ಸ್ ಹಗರಣ ಇನ್ನಷ್ಟು ನೆರವಾಯಿತು. ವಿ.ಪಿ.ಸಿಂಗ್ ರಾಜಿನಾಮೆ ನೀಡಿ ಜನತಾದಳವನ್ನು ರಚಿಸುವ ಮೂಲಕ ಒಂದು ಪರ್ಯಾಯವನ್ನು ಒದಗಿಸಿದರು. ಡಿಸೆಂಬರ್ 9 ರ ದೆಹಲಿ ರ್‍ಯಾಲಿ ಕೂಡ ಸಂದೇಶವನ್ನು ಹರಡಲು ಸಹಾಯಕವಾಯಿತು. ಇದರ ಜತೆಯಲ್ಲಿ ಪ್ರತಿಪಕ್ಷಗಳು ಸಾಮೂಹಿಕವಾಗಿ ರಾಜಿನಾಮೆ ಕೊಟ್ಟಿದ್ದು ಸೇರಿತು. ಆಗಸ್ಟ್ 30 ರ ಭಾರತ ಬಂದ್‌ಗೆ ಜನರು ಸ್ವಯಂ ಪ್ರೇರಣೆಯಿಂದ ಬೆಂಬಲ ನೀಡಿದರು. ಆಗಲೂ ರಾಜಿನಾಮೆ ನೀಡಲು ರಾಜೀವ್ ಗಾಂಧಿ ನಿರಾಕರಿಸಿದರು. ಬದಲಿಗೆ ಅವರ ಸರ್ವಾಧಿಕಾರಿ ಪ್ರವೃತ್ತಿ ಈಗ ಹೆಚ್ಚೆಚ್ಚಾಗಿ ಕಾಣತೊಡಗಿತು.

ಕೋಮುವಾದದ ಭೀಕರತೆ

ಕೋಮುವಾದ ಒಂದು ದೊಡ್ಡ ಕ್ಯಾನ್ಸರ್ ಆಗಿ ದೇಶವನ್ನು ಕಾಡತೊಡಗಿತು. ಕಾಶ್ಮೀರ ಮತ್ತು ಪಂಜಾಬ್ ನಮ್ಮಿಂದ ಪ್ರತ್ಯೇಕವಾಗಿ ಹೋಗುವುದನ್ನು ತಡೆಯಲು ನಾವು ಸಮರ್ಥರಾಗುತ್ತೇವೋ ಇಲ್ಲವೋ ಎಂಬ ಬಗ್ಗೆಯೂ ಚರ್ಚೆ ನಡೆದಿತ್ತೆಂದರೆ ಪರಿಸ್ಥಿತಿ ಎಷ್ಟು ಭೀಕರವಾಗಿತ್ತು ಎನ್ನುವುದನ್ನು ಕಲ್ಪಿಸಿಕೊಳ್ಳಬಹುದು. ಮೀರತ್, ಭೀವಂಡಿ, ಉಜ್ಜಯಿನಿ, ಅಹಮದಾಬಾದ್, ಕೋಟಾ ಮತ್ತು ಬಾಗಲ್ಪುರಗಳಲ್ಲಿ ಗಲಭೆಗಳು ನಡೆದವು. ಎಲ್ಲೆಲ್ಲೂ ಗಾಬರಿಯ ವಾತಾವರಣ ನೆಲೆಸಿತ್ತು. ಇವೆಲ್ಲದರ ಮೇಲೆ 1989 ರ ನವೆಂಬರ್ 9 ರಂದು ಅಯೋಧ್ಯೆಯಲ್ಲಿ ತಥಾಕಥಿತ ರಾಮ ಜನ್ಮಭೂಮಿ ಕಾಮಗಾರಿ ಆರಂಭವಾಯಿತು. ಅಲ್ಪಸಂಖ್ಯಾತರ ಮೇಲೆ ಹಲ್ಲೆಗಳು ನಡೆದವು. ರಾಜೀವ್ ಗಾಂಧಿ ಇದನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ಹಾಗೂ ಸಮುದಾಯಗಳನ್ನು ಒಡೆಯಲು ಯತ್ನಿಸಿದರು. ಸರಕಾರ ಒಂದೆಡೆ ಆರ್‌ಎಸ್‌ಎಸ್ ಮತ್ತು ವಿಶ್ವಹಿಂದೂ ಪರಿಷತ್ ಅನ್ನು ಸಂತೋಷವಾಗಿರಿಸಲು ಯತ್ನಿಸಿತು. ಇನ್ನೊಂದೆಡೆ, ಯಾವುದೇ ಬೆಲೆ ತೆತ್ತಾದರೂ ಬಾಬರಿ ಮಸೀದಿಯನ್ನು ರಕ್ಷಿಸುವುದಾಗಿ ಹೇಳಿತು. ರಾಜೀವ್‌ಗಾಂಧಿಯವರ ದ್ವಂದ್ವ ರಾಜಕಾರಣ ಇದಾಗಿತ್ತು. ಕಾಂಗ್ರೆಸ್ ಪಕ್ಷಕ್ಕೆ ನಿಯಂತ್ರಣವಿರುವ ರಾಜ್ಯಗಳಲ್ಲಿನ ಗಲಭೆಗಳಲ್ಲಿ ಕಾಂಗ್ರೆಸ್ಸಿಗರು ಸಕ್ರಿಯವಾಗಿ ಭಾಗವಹಿಸಿದರು.

(ಮುಂದುವರಿಯುವುದು)

ಗ್ರಾಮೀಣ ಕೃಪಾಂಕ ರದ್ದತಿ ಸಂವಿಧಾನದ ತಿದ್ದುಪಡಿಯೊಂದೇ ಉಳಿದ ದಾರಿ.

ಗ್ರಾಮೀಣ ಕೃಪಾಂಕದ ಆಧಾರದಲ್ಲಿ ಸರ್ಕಾರದ ಹಲವು ಹುದ್ದೆಗಳಿಗೆ ನೇಮಕಾತಿ ಹೊಂದಿದ್ದವರೀಗ ಬರಸಿಡಿದ ಬಡಿದಂತೆ ಬಸವಳಿದಿದ್ದಾರೆ. ಆತಂಕದ ಸ್ಥಿತಿಯಲ್ಲಿದ್ದಾರೆ. ಒಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ನೇಮಕಾತಿಗಳನ್ನು 'ಅಸಿಂಧು' ಎಂದು ಸಾರಿರುವ ಸುಪ್ರಿಂಕೋರ್ಟ್, ಕೆಳ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದಿರುವುದಲ್ಲದೆ, ಕರ್ನಾಟಕ ಸರ್ಕಾರ ಮತ್ತು ಕೆಲವರು ಹಾಕಿದ್ದ ಮರು ಪರಿಶೀಲನಾ ಮನವಿಗಳನ್ನು ತಿರಸ್ಕರಿಸಿದೆ. ಅದರಂತೆ 1998ರ ನವೆಂಬರ್ 11 ರಿಂದ 1999ರ ನವೆಂಬರ್ 26ರ ಅವಧಿಯಲ್ಲಿ ಕೃಪಾಂಕದ ಆಧಾರದಲ್ಲಿ ಸರ್ಕಾರಿ ಹುದ್ದೆಗಳಿಗೆ ನೇಮಕ ಹೊಂದಿದ್ದವರೆಲ್ಲಾ ಹುದ್ದೆ ಕಳೆದುಕೊಳ್ಳಬೇಕಾಗುತ್ತದೆ.

ಬಿಡುಗಡೆ ಪ್ರಕ್ರಿಯೆ ಆರಂಭ :

ಈಗಾಗಲೇ ಈ ತೀರ್ಪನ್ನು ಅನುಸರಿಸಿಯೇ ರಾಜ್ಯದ ನ್ಯಾಯಾಲಯಗಳಲ್ಲಿ ನೇಮಕಗೊಂಡ ಮುನ್ಸೀಫ್ ಮುಂತಾದ ನ್ಯಾಯಾಧೀಶರನ್ನು ಹೈಕೋರ್ಟ್ ನಿರ್ದೇಶನ ನೀಡಿ ಅವರನ್ನು ಬಿಡುಗಡೆಗೊಳಿಸಿದೆ. ಈಗ ಮುಂದಿನ ಸರದಿ ಸರಿಸುಮಾರು 13,500 ಜನರದ್ದು, ಇದರಲ್ಲಿ 10,700 ಶಿಕ್ಷಕರೇ ಇರುವುದು ವಿಶೇಷ. ಅಲ್ಲದೇ 250 ಸಬ್ ಇನ್ಸ್‌ಪೆಕ್ಟರರು, 5 ವೈದ್ಯರು, 150 ಮಂದಿ ಪ್ರಾಸಿಕ್ಯೂಟರ್‌ಗಳು ಹಾಗೂ ಇತರರು.

ಕೃಪಾಂಕ ಆರಂಭವಾದ್ದು

ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಕೃಪಾಂಕದ ಮೂಲಕ ನೇಮಕಾತಿ ಪ್ರಕ್ರಿಯೆ ಆರಂಭಿಸಿದ್ದು 1993ರಲ್ಲಿ ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದಾಗ ಮತ್ತು ಗುಂಪಿನ ನೌಕರರಿಗೆ ಇದ್ದ ಈ ನೇಮಕಾತಿ ಅವಕಾಶವನ್ನು ಜೆ.ಹೆಚ್. ಪಟೇಲರು ಪ್ರಥಮ ಮತ್ತು ದ್ವಿತೀಯ ದರ್ಜೆಯ ನೇಮಕಾತಿಗೂ ವಿಸ್ತರಿಸಿದರು. ಈ ಕೃಪಾಂಕ ಮೊದಲಿನ ಶೇ. 5 ರಿಂದ ಅದನ್ನು ಶೇ. 10ಕ್ಕೆ ಹೆಚ್ಚಿಸಲಾಗಿತ್ತು.

'ಅಸಿಂಧು' ಎಂದ ನ್ಯಾಯಾಲಯ

ಇದರ ವಿರುದ್ಧ ಕೆಲವು ಅಭ್ಯರ್ಥಿಗಳು ತಮಗೆ 'ಅರ್ಹತೆ' ಇದ್ದರೂ 'ಅನ್ಯಾಯಕ್ಕೆ ಒಳಗಾಗಿರುವುದಾಗಿ ಹೈಕೋರ್ಟ್‌ಗೆ ಅರ್ಜಿಹಾಕಿದ್ದರು. ಇದನ್ನು ಪರಿಗಣಿಸಿದ ನ್ಯಾಯಾಲಯ 1998ರ ನವೆಂಬರ್‌ನಲ್ಲಿ 'ನೇಮಕಾತಿ ಅಸಿಂಧು' ಎಂದು ತೀರ್ಪು ನೀಡಿತ್ತು. ಇನ್ನುಮುಂದೆ ನೇಮಕಾತಿ ಮಾಡಿಕೊಳ್ಳದಂತೆ, ಮತ್ತು ಈ ತೀರ್ಪು ಹಿಂದಿನ ನೇಮಕಾತಿಗಳಿಗೆ ಅನ್ವಯಿಸುವುದಿಲ್ಲ ಎಂದೂ ತಿಳಿಸಿತ್ತು.

ಈ ತೀರ್ಪಿನಿಂದಾಗಿ ಉಂಟಾದ ಗಂಬೀರ ಸಮಸ್ಯೆ ಬಗ್ಗೆ ರಾಜ್ಯದಾದ್ಯಂತ ವಿದ್ಯಾರ್ಥಿ ಯುವಜನರ ಬೃಹತ್ ಚಳುವಳಿ ನಡೆದಿದ್ದು ಗಜೇಂದ್ರ ಗಡದಲ್ಲಿ ಜೈಲ್ ಸೇರಿದ್ದು ರಾಜ್ಯ ಮಟ್ಟದ ರ್‍ಯಾಲಿಗಳು (ಎಸ್.ಎಫ್.ಐ, ಡಿ.ವೈಎಫ್.ಐ) ಗಮನಾರ್ಹ.

ಕರ್ನಾಟಕ ಈ ವಾರ ಒಂದು ನೋಟ

ಎಸ್.ವೈ. ಗುರುಶಾಂತ್

ಅನಂತರ ಕೃಷ್ಣರ ಸರ್ಕಾರ ನ್ಯಾ. ರಾಮಕೃಷ್ಣ ಸಮಿತಿ ನೇಮಿಸಿ, ಬಳಿಕ ಕೃಪಾಂಕ ಪದ್ಧತಿ ಬದಲಿಗೆ ಗ್ರಾಮೀಣ ಮೀಸಲಾತಿಯ ಶಾಸನವನ್ನು ರೂಪಿಸಿತ್ತು. ಕೆಲ ನೇಮಕಾತಿಗಳೂ ಆದವು.

ಸಂವಿದಾನ ತಿದ್ದುಪಡಿ ಸರ್ಕಾರದ ನಿರ್ಲಕ್ಷ್ಯ

ಆ ಸಂದರ್ಭದಲ್ಲಿ ರಾಜ್ಯಪಾಲರ ಸುಗ್ರೀವಾಜ್ಞೆ, ಅಥವಾ ಸುಪ್ರಿಂಕೋರ್ಟಿಗೆ ಮನವಿ, ಅಥವಾ ಹೈಕೋರ್ಟ್‌ಗೆ ಮರುಪರಿಶೀಲನಾ ಅರ್ಜಿ ಸಲ್ಲಿಸುವ (ಹಿಂದಿನ ನೇಮಕಾತಿಗಳಿಗೆ) ಸಲಹೆಗಳು ಬಂದವು. ಆದರೆ ಇವೆಲ್ಲಾ ಕೇವಲ ಕಾಲಹರಣ'ದ ಸಲಹೆಗಳಾಗಿದ್ದವು. ಕಾರಣ ಈ ಸರ್ಕಾರಕ್ಕೆ ಶಾಸನಾತ್ಮಕ ಬಲ ಇರಲಿಲ್ಲ. ಗ್ರಾಮೀಣ ಕೃಪಾಂಕ ಅವಕಾಶ ದಕ್ಕಬೇಕಾದರೆ 'ಭಾರತದ ಸಂವಿಧಾನಕ್ಕೆ ತಿದ್ದುಪಡಿಯೊಂದೇ ಸಾಧ್ಯವಿರುವ ಪರಿಹಾರ. ಇದನ್ನು 2/3ರ ಬಹುಮತದಲ್ಲಿ ಪಾರ್ಲಿಮೆಂಟ್ ತಿದ್ದುಪಡಿಯನ್ನು ಮಾಡಿ ರಾಷ್ಟ್ರಪತಿಗಳು ಅಂಕಿತ ಹಾಕಿಸಬೇಕಾಗಿತ್ತು.

ತುರ್ತು ಕ್ರಮ ಬದಲು ಕಾಲ ಹರಣ

ಈ ಸಂವಿಧಾನ ತಿದ್ದುಪಡಿ ಮಾಡಬೇಕಾದ ಅನಿವಾರ್ಯತೆ ಹಾಗೂ ರಾಜ್ಯ ಸರ್ಕಾರ ಆ ಕೂಡಲೇ ಕೈಗೊಳ್ಳಬೇಕಾದ ತುರ್ತು ಆಡಳಿತಾತ್ಮಕ ಹಾಗೂ ರಾಜಕೀಯ ಕ್ರಮಗಳ ಬಗ್ಗೆ ಸ್ಪಷ್ಟವಾಗಿ ಮಾನ್ಯ ಮುಖ್ಯ ಮಂತ್ರಿಗಳಿಗೂ, ರಾಜ್ಯಪಾಲರಿಗೂ ವಿದ್ಯಾರ್ಥಿ ಯುವಜನ ನಿಯೋಗದಿಂದ ಆಗ್ರಹಿಸಿದೆವು. ಸಹ ತಾತ್ಕಾಲಿಕ ಪರಿಹಾರ ಅಗತ್ಯವಾದರೂ ಸಂವಿಧಾನ ತಿದ್ದುಪಡಿಯಂತೆ ಕ್ರಮವೊಂದೇ ಮಾರ್ಗ ಎಂದು ಸಿಪಿಐ(ಎಂ) ಆಗ್ರಹಿಸಿತ್ತು. ಆದರೆ ಕೃಷ್ಣರ ಸರ್ಕಾರ ಆ ದಿಕ್ಕಿನತ್ತ ಕ್ರಮವಹಿಸಲಿಲ್ಲ. ಗಂಭೀರ ಕಾಳಜಿಯನ್ನು ತೋರಿಸಲಿಲ್ಲ. ಪರಿಶೀಲನಾ, ಅರ್ಜಿ, ಮಾನವತೆ-ಕರುಣಾ ಅರ್ಜಿಗಳೆಂದು ವೃಥಾ ಕಾಲಹರಣದ ಕಾಳಜಿಯಲ್ಲೇ ತೊಡಗಿತ್ತು. ಹೀಗಾಗಿ ಇವರ ಮನಸ್ಸಿನಲ್ಲಿ ಏನಿತ್ತು ಎಂಬುದು ತಿಳಿಯಬೇಕಷ್ಟೆ.

ಈ ತೀರ್ಪಿನ ನಂತರವೂ ಕೆಲವರು ರಾಷ್ಟ್ರಪತಿಗೆ ಮೊರೆ ಹೋಗುವ, ಕರುಣಾ ಅರ್ಜಿ' ಹಾಕುವ ಅಥವಾ ಈ ತೀರ್ಪು ಕೇವಲ 36 ಜನ ಅರ್ಜಿ ಹಾಕಿದ್ದವರಿಗೇ ಮಾತ್ರ ಎಂದು ಹೇಳುತ್ತಿದ್ದಾರೆ. ನ್ಯಾಯಾಲಯದಲ್ಲಿ ವಾದ ಹೂಡಲು ಕೆಲವರಂತೂ ಕಂಗಾಲಾಗಿರುವ ಅಭ್ಯರ್ಥಿಗಳಿಂದ ತಲಾ ಸಾವಿರ ರೂಪಾಯಿಗಳಿಂದ ಕೋಟ್ಯಾಂತರ ಕಲೆಕ್ಷನ್ ಮಾಡಿದ್ದು 'ಅಗಾಧ ದುಃಖ'ವನ್ನೂ ಹೋರಾಡುವ ಇಚ್ಛೆಯನ್ನು ತೋರಿಸುತ್ತಿದ್ದಾರೆ. ಇವೆಲ್ಲಾ ಮತ್ತೇ ಆ ಅಭ್ಯರ್ಥಿಗಳನ್ನು ವಂಚಿಸುವ ಕ್ರಮಗಳಲ್ಲದೇ ಬೇರೇನೂ ಅಲ್ಲ. ಸಂವಿಧಾನದ ತಿದ್ದುಪಡಿಯನ್ನು ಹೊರತುಪಡಿಸಿ ಈ ಅಭ್ಯರ್ಥಿಗಳನ್ನು ರಕ್ಷಿಸಲು ಸಾಧ್ಯವಿಲ್ಲ.

ಆತ್ಮವಿಶ್ವಾಸದ ಹೋರಾಟ

ಆದ್ದರಿಂದ ಕೂಡಲೇ ಕೃಷ್ಣರ ಸರ್ಕಾರ ಮಾತಿನ ಸಾಂತ್ವನದಲ್ಲಿ ಕಾಲಹರಣ ಮಾಡದೇ ಕಾನೂನುತಜ್ಞರೊಂದಿಗೂ ಭಾದಿತರು ಆತ್ಮಹತ್ಯೆಯ ಮಾರ್ಗ ಹಿಡಿಯದೇ ಆತ್ಮವಿಶ್ವಾಸದ ಹೋರಾಟಕ್ಕೆ ಇಳಿಯಲಿ. ಸಂವಿಧಾನದ ತಿದ್ದುಪಡಿಯತ್ತ ತುರ್ತು ಕ್ರಮವಹಿಸಲಿ.

ರೈತರ ಸಮಾಧಿ ಮೇಲೆ ಕೃಷ್ಣರ ರ್‍ಯಾಲಿ

ರೈತರನ್ನು ಬಲಿ ತೆಗೆದುಕೊಂಡ ಕೃಷ್ಣರವರು ಈಗ ರೈತರ ರ್‍ಯಾಲಿ ನಡೆಸಿ 'ಕಾಳಜಿ' ತೋರುತ್ತಿದ್ದಾರೆ. ಇದು ರೈತರ ಮೇಲಿನ ಸೇಡಿನ ರಾಜಕೀಯವಲ್ಲದೇ ಮತ್ತೇನು?

ರಾಜ್ಯದ ಉದ್ದಗಲಕ್ಕೂ ರೈತರ ಆತ್ಮಹತ್ಯೆ ನಡೆದಿವೆ. ಪ್ರತಿಯೊಂದು ಬೆಲೆ ಬೆಳೆಯುವ ರೈತರು ಸಂಕಷ್ಟದಲ್ಲಿದ್ದಾರೆ. ಬೆಲೆ ಕುಸಿತ ಎಲ್ಲಾ ರೈತರನ್ನು ಬಾಧಿಸುತ್ತಿದೆ. ತೆಂಗು ಬೆಳೆಯುವ ರೈತರು, ಬೆಲೆ ಕುಸಿತದೊಂದಿಗೆ, ತೆಂಗಿನ ತೋಟಗಳಿಗೆ ಅಂಟಿರುವ 'ನುಸಿ' ಪೀಡೆಯಿಂದ ಕಂಗಾಲಾಗಿದ್ದಾರೆ. ನುಸಿ ಪೀಡೆಗೆ ವೈಜ್ಞಾನಿಕವಾಗಿ ಔಷಧಿ ನೀಡುವ ಬಗೆಗೆ ಸರ್ಕಾರ ತೋರಿದ ದಿವ್ಯ ನಿರ್ಲಕ್ಷ್ಯದ ವಿರುದ್ಧ ರಾಜ್ಯಾದ್ಯಂತ ಭುಗಿಲೆದ್ದ ರೈತರ 'ನೀರಾ' ಇಳಿಸುವ ಕಾಯಕ ಒಂದೆಡೆ ಇನ್ನೊಂದೆಡೆ ಬೆಲೆ ಕುಸಿತಕ್ಕೆ ಪರಿಹಾರವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ನೀರಾ ಚಳುವಳಿಯನ್ನೆ ನಡೆಸಿದ್ದಾರೆ. ಆದರೆ ಕೃಷ್ಣರ ಕಾಂಗ್ರೆಸ್ ಸರ್ಕಾರ ನೀರಾ ಇಳಿಸಲು ಅನುಮತಿ ನೀಡದೇ 'ನೀರಾ' ಚಳುವಳಿಯನ್ನು ಪೊಲೀಸರ ಮೂಲಕ ಬಗ್ಗು ಬಡಿಯಲು ಯತ್ನಿಸಿತು. ಈ ಯತ್ನದ ಭಾಗವಾಗಿ ರಾಜ್ಯದ ವಿವಿದೆಡೆ ನೀರಾ ಚಳುವಳಿಗಾರರ ಮೇಲೆ ಪೊಲೀಸರ ಲಾಠಿ ಪ್ರಹಾರ, ಬಂಧನ, ಮೊಕದ್ದಮೆ, ಗೋಲಿಬಾರ್‌ಗಳನ್ನು ನಡೆಸಿದೆ.

ರೈತರ ಬಲಿ - ರ್‍ಯಾಲಿ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ವಿಠಲೇನಹಳ್ಳಿ ನೀರಾ ಚಳುವಳಿಕಾರರ ಮೇಲೆ ಗೋಲಿಬಾರ್ ನಡೆಸಿ, 2 ರೈತರ ಸಾವಿಗೆ ಸರ್ಕಾರ ಕಾರಣೀಭೂತವಾಗಿದೆ. ರೈತರ ಮೇಲೆ ನಡೆದ ಗೋಲಿಬಾರ್ ಖಂಡಿಸಿ, ನೀರಾಗೆ ಅನುಮತಿಗೆ ಒತ್ತಾಯಿಸಿ ಮಾಜಿ ಪ್ರಧಾನಿ, ಜಾತ್ಯಾತೀತ ಜನತಾದಳದ ನೇತಾರರು ಆದ ದೇವೇಗೌಡರು ವಿಠಲೇನಹಳ್ಳಿಯಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಿದ್ದಾರೆ. ಪಾದಯಾತ್ರೆ ಪ್ರಾರಂಭದ ಮುನ್ನಾದಿನ ಸರ್ಕಾರ ನೀರಾ ಇಳಿಸಲು ಅನುಮತಿ ನೀಡಿದೆ. ಪಾದಯಾತ್ರೆ ಸಂದರ್ಭದಲ್ಲಿ, ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾದ ಕೆ.ಹೆಚ್. ಶ್ರೀನಿವಾಸ್ ಸವಾಲಿಗೆ, ಪ್ರತಿಯಾಗಿ ನವೆಂಬರ್ 19 ರಂದು ಚನ್ನಪಟ್ಟಣದಲ್ಲಿ ಬೃಹತ್ ರೈತರ ಸಮಾವೇಶವನ್ನು ಮಾಡಿ ಪ್ರಧಾನಿ ಶ್ರೀಮತಿ. ಇಂದಿರಾಗಾಂಧಿಯವರ ಜನ್ಮದಿನದಂದು ನಡೆಸಿದ್ದಾರೆ. ರಾಜ್ಯದ ಉದ್ದಗಲಕ್ಕೂ ಜನತೆ ಹಾಗೂ ಮಾಧ್ಯಮಗಳಲ್ಲಿ ಈ ಸಮಾವೇಶ ವ್ಯಾಪಕ ಚರ್ಚೆಗೆ ಒಳಪಟ್ಟಿದೆ.

ಬೆಲೆ ತಾರತಮ್ಯ

ವಿಶ್ವವ್ಯಾಪಾರ ಸಂಘಟನೆ(WTO) ನೀತಿಗಳ ಜಾರಿ-ಮುಕ್ತ ಆಮದು ನೀತಿಗನುಸಾರ ಕೇಂದ್ರದ ಬಿ.ಜೆ.ಪಿ. ನೇತೃತ್ವದ ಎನ್.ಡಿ.ಎ. ಸರ್ಕಾರದ ನೀತಿಗಳು ರೂಪಿತವಾಗುತ್ತಿವೆ. ಪ್ರಮಾಣಾತ್ಮಕ ನಿರ್ಬಂಧದ (QRS)ತೆಗೆದುಹಾಕುವಿಕೆಯಿಂದಾಗಿ ವಿದೇಶದಿಂದ ಆಮದಾಗುತ್ತಿರುವ ಕೃಷಿ ಉತ್ಪನ್ನಗಳು ಹೇರಳವಾಗಿರುವಾಗ, ರಾಷ್ಟ್ರದ ಇತರೆ ರೈತರ ಬೆಲೆ ಕುಸಿತದಂತೆ, ರಾಜ್ಯದ ರೈತರ ಕೃಷಿ ಉತ್ಪನ್ನಗಳ ಬೆಲೆ ಕುಸಿತ ತೀವ್ರವಾಗಿದೆ. ತೊಗರಿ ಬೆಳೆಯ ರೈತ, ಬೆಳೆಗೆ ಸಿಂಪಡಿಸಲು ಬಳಸುವ ಮಾನೋಕ್ರೋಟೋಪಾಸ್ ಅಥವಾ ಮಾನೋಸ್ಪೈಕಲ್ ಕೀಟನಾಶಕಕ್ಕೆ 2 ಲೀಟರ್‌ಗೆ ರೂ. 1500 ಗಳನ್ನು ತೆತ್ತಬೇಕಿದೆ. ಆದರೆ ಆತ ಬೆಳೆಯುವ 1 ಕ್ವಿಂಟಾಲ್ ತೊಗರಿ ಬೆಳೆಗೆ ಬೆಲೆ ಮಾತ್ರ ಕೇವಲ ರೂ. 1400 ರಿಂದ ರೂ. 1500 ಆಗಿದೆ. ಅಂತೆಯೆ ಸೂರ್ಯಕಾಂತಿ ಬೆಳೆಯಲು ರೈತ ಬಳಸುವ ಸೂರೇಪಾನ ಬಿತ್ತನೆ ಬಿಜಗಳ 2 ಪಾಕೆಟಿಗೆ (4 ಕೆ.ಜಿ) ರೂ. 1000 ತೆತ್ತಬೇಕಾದರೆ, ಆತ 1 ಕ್ವಿಂಟಾಲ್ ಸೂರ್ಯಕಾಂತಿ ಬೀಜಕ್ಕೆ ಸಿಗುವ ಹಣ ಕೇವಲ ರೂ. 1000 ಆಗಿದೆ. ಈ ರೀತಿ ರೈತ ಬೆಲೆ ಬೆಲೆಯಲು ಬಳಸುವ ಸಾಮಾಗ್ರಿಗಳ ಬೆಲೆ ವಿಪರೀತ ಏರಿದ್ದು, ಆತ ಬೆಳೆದ ಬೆಳೆಗಳ ಬೆಲೆ ಮಾತ್ರ ತೀವ್ರ ಕುಸಿತಕ್ಕೆ ಒಳಪಟ್ಟಿದೆ. ರೈತರು ಬಳಸುವ ಔಷಧಿ, ಬಿತ್ತನೆ ಬೀಜಗಳನ್ನು ಕೊಳ್ಳಲು, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ವಿಪರೀತ ಬೆಲೆ ತೆತ್ತುವಾಗಲೇ, ವಿದೇಶದಿಂದ ಮುಕ್ತವಾಗಿ ಆಮದಾಗುತ್ತಿರುವ ರೈತರ ಉತ್ಪನ್ನಗಳು, ನಮ್ಮ ರೈತರ ಬೆಳೆಗಳ ಬೆಲೆ ಕುಸಿತಕ್ಕೆ ಕಾರಣೀಭೂತವಾಗಿವೆ. ಈ ರೈತ ವಿರೋಧಿ ನೀತಿಗಳ ಕೇಂದ್ರ ಸರ್ಕಾರದ ಬಗ್ಗೆ ಚಕಾರ ವೆತ್ತದ ರಾಜ್ಯದ ಕೃಷ್ಣರ ಕಾಂಗ್ರೆಸ್ ಸರ್ಕಾರ, ತನ್ನ ಐಟಿ (ಮಾಹಿತಿ ತಂತ್ರಜ್ಞಾನ) ಸಾಧನೆಗಾಗಿ, ಪ್ರಧಾನಿ ವಾಜಪೇಯಿಯವರ ಮೆಚ್ಚುಗೆಗೆ ಪಾತ್ರವಾಗಿದೆ.

ಆತ್ಮಹತ್ಯೆಗೆ ಪ್ರೇರಣೆ

ರೈತರು ಬೆಳೆ ಕುಸಿತದಿಂದ, ಕಂಗಾಲಾಗಿರುವಾಗಲೇ, ಸಾಲ ಮರುಪಾವತಿಗೆ ಸರ್ಕಾರ ಒತ್ತಾಯಿಸುತ್ತಿದೆ. ರೈತರು ಬೆಲೆ ಬೆಳೆಯಲು ಉಪಯೋಗಿಸುವ ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಿ, ಅನೇಕ



ವರ್ಷಗಳ ಬಾಕಿಯನ್ನು ಸಾವಿರಾರು ರೂಪಾಯಿಗಳಲ್ಲಿ ವಸೂಲಿ ಮಾಡಲು ಮುಂದಾಗಿದೆ. ಮತ್ತೆ ವಿದ್ಯುತ್ ದರ ಏರಿಸುವ ಮಾತುಗಳನ್ನಾಡುತ್ತಿದೆ. ಬೆಳೆ ಕುಸಿತದಿಂದ, ಸಂಸಾರ ನಡೆಸುವುದೇ ದುಸ್ತರವಾಗಿದ್ದರೆ, ಸಾಲ ಮರುಪಾವತಿಸಲಾಗದೆ, ಸಾಲದ ಶೂಲ ರೈತರ ಆತ್ಮಹತ್ಯೆಗೆ ಪ್ರೇರಣೆಯಾಗಿದೆ.

ಬೀದರ್‌ನ ಬಾಲ್ಕಿಯಲ್ಲಿ ರೈತರ ರ್‍ಯಾಲಿಯನ್ನು ಉದ್ದೇಶಿಸಿ ಕಾಂಗ್ರೆಸ್‌ನ ಅಖಿಲ ಭಾರತ ಅಧ್ಯಕ್ಷರು ಕೃಷ್ಣರ ಹೈಕಮಾಂಡ್ ಆಗಿರುವ ಸೋನಿಯಾಗಾಂಧಿ, ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಕುಟುಂಬಗಳಿಗೆ 1 ಲಕ್ಷ ಪರಿಹಾರ ಕೊಡುತ್ತೇವೆ ಎಂದು ಘೋಷಿಸಿದರು. ಆದರೆ ಅವರ ಆಜ್ಞಾಪಾಲಕರಾದ ಕೃಷ್ಣರವರು, ರೈತರ ಆತ್ಮಹತ್ಯೆಯ ಬಗ್ಗೆ ಅವರ ಮಾನಸಿಕ ಸ್ಥಿತಿಯ ಬಗ್ಗೆ ತನಿಖೆ ಮಾಡಿ ವರದಿ ನೀಡಲು ಮನೋವಿಜ್ಞಾನಿಗಳನ್ನೊಳಗೊಂಡ ಟಾಸ್ಕ್ ಫೋರ್ಸ್ ರಚಿಸಿದೆ. ಬದುಕುವ ಸಲುವಾಗಿ ಮನುಷ್ಯ ತನ್ನದೆಲ್ಲವನ್ನು ಮಾರಲು ಸಿದ್ಧವಿರುವಾಗ, ಆಸ್ತಿ-ಪಾಸ್ತಿ ಮಾರಿಯಾದರೂ, ತನ್ನ ದೇಹದ ಅಂಗಾಂಗಗಳನ್ನು ಮಾರಿಯಾದರೂ ಬದುಕಬೇಕೆಂದು ಹಂಬಲಿಸುವ ಜೀವಿ, ಆತ್ಮಹತ್ಯೆ ಮಾಡಿಕೊಳ್ಳುವಂತಹ ಮನಸ್ಥಿತಿಗೆ ತಲುಪುತ್ತಾನೆಂದರೆ, ಆತನಲ್ಲಿ ವ್ಯವಸ್ಥೆ ಉಂಟುಮಾಡಿರುವ ಹತಾಶೆ ಎಂತಹದೆಂದು ಅರಿಯಬೇಕಿದೆ. ಆದರೆ ಈ ಸರ್ಕಾರ ಆ ಪ್ರಯತ್ನ ನಡೆಸದೆ, ಟಾಸ್ಕ್ ಫೋರ್ಸ್ ರಚಿಸಿ ತನಿಖೆ ನಡೆಸುತ್ತದೆಂದರೆ, ಇವರಿಗೆ ರೈತರ ಸಂಕಷ್ಟದ ಬಗ್ಗೆ ಇರುವ ಗಂಬೀರ ಎಂತಹದೆಂದು ಜನತೆ ಅರಿಯಬೇಕಿದೆ.

ಎಲ್ಲಿದೆ ಕಾಳಜಿ

ಹಾಲು ಉತ್ಪಾದಿಸುವವರಿಗೆ ಒಂದು ಲೀಟರ್ ಹಾಲಿಗೆ ರೂ. 8 ರಿಂದ 9 ರೂಪಾಯಿಗಳನ್ನು ನೀಡುತ್ತಿರುವಾಗಲೇ, ಒಂದು ಲೀಟರ್ ಮಿನರಲ್ ವಾಟರ್ (ಬಿಸಲರಿಗೆ) ರೂ. 12 ರಿಂದ 15 ರೂಪಾಯಿ ನಿಗದಿಯಾಗಿ ಮಾರಾಟವಾಗುತ್ತಿದೆ. ಹಾಲು ಖರೀದಿಸುವುದಿಲ್ಲ, ಖರೀದಿಸುವ ಹಾಲಿಗೆ ಬೆಲೆ ಹೆಚ್ಚಿಸಲು ಸಾಧ್ಯವಿಲ್ಲ, ಬೆಲೆ ಹೆಚ್ಚಿಸಲು, ಹಾಲು ಉತ್ಪಾದಕರು ಹೋರಾಟ ನಡೆಸಿದರೆ, ಅವರ ಮೇಲೆ ಲಾಠಿ ಪ್ರಹಾರ ನಡೆಸುವ ರಾಜ್ಯ ಸರ್ಕಾರದ ಧೋರಣೆಯು ಜನವಿರೋಧಿ


ಪುಟ 7 ಕ್ಕೆ

ಬಾಗಲಕೋಟೆ ನಗರದ ಮುಳುಗಡೆ : ದುರಂತ ಕಥೆ

ಆಲಮಟ್ಟಿ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಈ ಯೋಜನೆಯಿಂದಾಗಿ ಮುಳುಗಡೆಯಾಗುವ ಜನರಿಗೆ ಪುನರ್ವಸತಿ ಒದಗಿಸುವಲ್ಲಿ, ಅವರಿಗೆ ಪರಿಹಾರ ಕೊಡುವಲ್ಲಿ ಹಾಗೆಯೇ ಬಾಗಲಕೋಟೆ ಇಡೀ ನಗರವನ್ನು ಸ್ಥಳಾಂತರಿಸುವಲ್ಲಿ ಕಳೆದ ೩೮ ವರ್ಷಗಳಿಂದ ಎಂಥ ಅಸಮರ್ಪಕ ನೀತಿಯನ್ನನುಸರಿಸುತ್ತಿದೆ, ಆ ಮೂಲಕ ಎಂಥ ಗಂಭೀರ ಸಮಸ್ಯೆಗಳನ್ನು ಸಾರ್ವಜನಿಕರು ಎದುರಿಸಬೇಕಾಗಿ ಬಂದಿದೆಂಬ ಕಠೋರ ಚಿತ್ರ ಇಲ್ಲಿದೆ.

ಎನ್.ಕೆ.ಉಪಾಧ್ಯಾಯ

ಕಾಂಗ್ರೆಸ್ ಸರಕಾರದ ದೃಢ ರಾಜಕೀಯ ನಿಲುಮೆಯ ಅಭಾವ, ಸ್ವಾರ್ಥ ರಾಜಕೀಯ ಮುಖಂಡರ ದೊಂಬರಾಟದಿಂದಾಗಿ ಲಕ್ಷ ಜನರಿಗೆ ಮುಳಗಡೆ ಕತ್ತಿಯ ಭಯ, ಜೀವನ ಅಸ್ಥಿರ, ಅಸ್ತವ್ಯಸ್ಥ.



ಹೋಗುವುದೆಲ್ಲಿಗೆ?

ಬಾಗಲಕೋಟೆ ನಗರದ ಒಂದು ಲಕ್ಷ ಜನ ಮುಳುಗಡೆ ಕತ್ತಿಯ ತೂಗುಯ್ಯಾಲೆಯಡಿಯಲ್ಲಿ ಅಸ್ಥಿರ ಜೀವನ ನಡೆಸುತ್ತಿದ್ದಾರೆ. ಯೋಜನೆ, ಅದರಿಂದುಂಟಾಗಬಹುದಾದ ಪರಿಣಾಮಗಳ ಕುರಿತು ಸರಿಯಾದ ನಿರ್ದಿಷ್ಟ ನಿರ್ಧಾರ ಕೈಗೊಳ್ಳುವಲ್ಲಿ ವಿಫಲಗೊಂಡ ಸರಕಾರದ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ.

ಆತಂಕದಲ್ಲಿ ಜನತೆ

ಬಿಜಾಪುರ ಜಿಲ್ಲೆಯ ಎರಡನೇ ದೊಡ್ಡ ನಗರವಾಗಿದ್ದು, ಈಗ ಹೊಸ ಜಿಲ್ಲೆಯಾಗಿರುವ ಬಾಗಲಕೋಟೆ ಜನ 'ಮುಳುಗಡೆ', 'ಪುನರ್ವಸತಿ' ಅನಿಶ್ಚಿತತೆಯಿಂದಾಗಿ ನಿದ್ದೆ ಕೆಡಿಸಿಕೊಂಡಿದ್ದಾರೆ. ಘಟಪ್ರಭಾ ನದಿಯ ದಂಡೆಯಲ್ಲಿರುವ ನಗರ ಇದಾಗಿದೆ. ಆದರೆ ಕೃಷ್ಣಾ ನದಿಗೆ ಆಲಮಟ್ಟಿಯಲ್ಲಿ ಜಲಾಶಯ ಕಟ್ಟಿರುವುದರಿಂದ ಅದರ ಹಿನ್ನೀರಿನಿಂದ ಬಾಗಲಕೋಟೆಯ ಹೆಚ್ಚಿನ ಭಾಗ ಮುಳುಗಡೆಯಾಗುತ್ತದೆ. ಘಟಪ್ರಭಾ ನದಿ ಸಂಗಮ ಎಂಬಲ್ಲಿ ಕೃಷ್ಣೆಯನ್ನು ಸೇರಿಕೊಳ್ಳುತ್ತದೆ.

ಮುಳುಗಡೆ ಖಚಿತತೆ

1964 ರಲ್ಲಿ ಕೃಷ್ಣಾ ನದಿಗೆ ಆಲಮಟ್ಟಿ ಆಣೆಕಟ್ಟಿಗಾಗಿ ಅಡಿಗಲ್ಲು ಇರಿಸಿದಾಗಲ್ಲೇ ಬಾಗಲಕೋಟೆ ಮುಳುಗಡೆ ಖಚಿತವಾಗಿತ್ತು. ಆಲಮಟ್ಟಿಯೋಜನೆಗಾಗಿ ಹೋರಾಟ ಮಾಡುತ್ತಿದ್ದ ನಾವು ಬಾಗಲಕೋಟೆ ಮುಳುಗುವುದನ್ನು ತಪ್ಪಿಸಲು ಕೇಂದ್ರ ಸರಕಾರದ ಬೃಹತ್ ನೀರಾವರಿ ಮಂತ್ರಿ ಡಿ.ರಾವ್ ಅವರಿಗೆ ಎರಡು ಸೂಚನೆಗಳನ್ನು ಮುಂದಿಟ್ಟಿದ್ದೆವು. 1. ಬಾಗಲಕೋಟೆಯ ಮೇಲ್ಭಾಗದಲ್ಲಿರುವ ಹೆರಕಲ್ ಗ್ರಾಮದ ಹತ್ತಿರ ಘಟಪ್ರಭಾ ನದಿ ನೀರನ್ನು ಕಾಲುವೆ ಮೂಲಕ ಕೃಷ್ಣ ನದಿ ದಂಡೆಗೆ ಗೋಡೆ ಕಟ್ಟುವುದು, ಆಲಮಟ್ಟಿ ಆಣೆಕಟ್ಟೆಯ ಹಿನ್ನೀರು ಮತ್ತು ಮಳೆಕಾಲದಲ್ಲಿ ನೆರೆ ನೀರನ್ನು ಈ ಮೂಲಕ ತಡೆದು ಬಾಗಲಕೋಟೆ ನಗರಕ್ಕೆ ಉಂಟಾಗಬಹುದಾದ ಮುಳುಗಡೆ ಪ್ರಶ್ನೆಗೆ ಪರಿಹಾರ ಒದಗಿಸಿದಂತಾಗುತ್ತದೆ. ನಮ್ಮ ಹೋರಾಟದ ಫಲವಾಗಿ ಡಾ. ರಾವ್ 1964 ರಲ್ಲಿ ಬಿಜಾಪುರಕ್ಕೆ ಬಂದಾಗ ಅವರಿಗೆ ಈ ವಿಷಯ ಮನದಟ್ಟು ಮಾಡಿ ಒಪ್ಪಿಸಿದೆವು.

ಆದರೆ ರಾಜ್ಯ ಸರಕಾರ ಮತ್ತು ಬಾಗಲಕೋಟೆಯ ಶ್ರೀಮಂತ ರಾಜಕೀಯ ಮುಖಂಡರು ಆಲಮಟ್ಟಿ ಈ ಯೋಜನೆ ಪೂರ್ಣಗೊಳ್ಳಲು ಸಾಧ್ಯವಿಲ್ಲವೆಂದು ಭಾವಿಸಿ ಇದರ ಕುರಿತು ಒತ್ತಡ ತರಲಿಲ್ಲ. ಈಗ ಅದರ ಪ್ರತಿಫಲ ಬಾಗಲಕೋಟೆ ಬಡಜನರಿಗೆ ಉಣಿಸುತ್ತಿದ್ದಾರೆ.

ನಲ್ವತ್ತು ವರ್ಷಗಳ ನಿರಂತರ ಹೋರಾಟದ ನಂತರ ಆಲಮಟ್ಟಿ ಆಣೆಕಟ್ಟಿನ ಕೆಲಸ ಮುಗಿದು ಬಾಗಲಕೋಟೆ ನಗರಮುಳುಗಡೆಯ ಪ್ರಶ್ನೆ ಎದುರಾಗಿದೆ. ಆಲಮಟ್ಟಿ ಯೋಜನೆ ಆಗಿಯೇ ತೀರುತ್ತದೆ, ಬಾಗಲಕೋಟೆ ನಗರ ಮುಳುಗುತ್ತದೆಂಬ ನಿಜಾಂಶವನ್ನು ಕಾಂಗ್ರೆಸ್ ಪಕ್ಷವಾಗಲಿ, ಬಾಗಲಕೋಟೆಯ ರಾಜಕೀಯ ಮುಖಂಡರಾಗಲೀ ಕನಸು ಮನಸ್ಸಿನಲ್ಲಿಯೂ ನಂಬಿರಲಿಲ್ಲ. ಕಮ್ಯುನಿಸ್ಟ್ ಪಾರ್ಟಿ ಮತ್ತು ಇತರ ವಿಚಾರವಂತ ಜನ, ಬಿಜಾಪುರ ಜಿಲ್ಲೆಯ ಬರದ ಸ್ಥಿತಿಗೆ ಆಲಮಟ್ಟಿ ಜಲಾಶಯ ರಾಮಬಾಣವೆಂದೇ ಅತ್ಯಗತ್ಯ ಯೋಜನೆಯನ್ನು ಪೂರ್ಣಗೊಳಿಸಲು ಶ್ರಮಪಟ್ಟರು. ದಿ.ನಿಜಲಿಂಗಪ್ಪನವರನ್ನು ಬಾಗಲಕೋಟೆಯಿಂದ ಆಯ್ಕೆ ಮಾಡಿ ಮುಖ್ಯಮಂತ್ರಿ ಮಾಡಿದ, ವೀರೇಂದ್ರ ಪಾಟೀಲರನ್ನು ಲೋಕಸಭೆಗೆ ಆಯ್ಕೆ ಮಾಡಿ ಕೇಂದ್ರ ಸಚಿವ ಹುದ್ದೆ ದೊರಕಿಸಿದರೂ ಯೋಜನೆಯ ಕಾರ್ಯಗತಕ್ಕೆ ಹಾಗೂ ಜನರಿಗೆ ಪುನರ್ವಸತಿ ನಿರ್ಮಿಸತ್ತೇವೆ ಎಂಬ ದೃಢ ನಿರ್ಧಾರವನ್ನು ಈ ಮಹಾಶಯರು ಹೊಂದಿರಲಿಲ್ಲ. ಬಾಗಲಕೋಟೆಯ ರಾಜಕೀಯ ಮುಖಂಡರಿಗೆ, ಆರಿಸಲ್ಪಟ್ಟ ಶಾಸಕರಿಗೆ ಮಾತ್ರವಲ್ಲ ಊರ ಹಿರಿಯರಿಗೂ ಇದರ ಅವಶ್ಯಕತೆ ಕಂಡುಬರಲಿಲ್ಲವೆಂಬ ಸಂಗತಿ ಆಶ್ಚರ್ಯಕರವಾಗಿದೆ.

1994 ರಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಇಡೀ ನಗರವನ್ನು ಸ್ಥಳಾಂತರಿಸಬೇಕೆಂದು ನಿರ್ಧರಿಸಿ, ಬಾಗಲಕೋಟೆಯಿಂದ 6 ಕಿ.ಮಿ. ದೂರದಲ್ಲಿ ರಾಜ್ಯ ಸರ್ಕಾರ 4500 ಎಕ್ರೆ ಭೂಮಿ ಸ್ವಾಧನಪಡಿಸಿ ಕೊಂಡಿತು. ಮೂಲಭೂತ ಸೌಕರ್ಯಗಳೊಂದಿಗೆ ಚಂಡೀಗಡ ಮಾದರಿಯ ನವನಗರ ನಿರ್ಮಾಣಕ್ಕೆ ನೀಲಿ ನಕ್ಷೆ ತಯಾರಿಸಲು ಚಾರ್ಲ್ಸ್ ಕೊರಿಯಾ ಎಂಬುವರಿಗೊಪ್ಪಿಸಿ (ಅದಕ್ಕೆ ರೂ. 2 ಕೋಟಿ ಖರ್ಚು) ಅದರ ಅನುಷ್ಠಾನಕ್ಕೆ ಬಾಗಲಕೋಟೆ ಅಭಿವೃದ್ಧಿ ಪ್ರಾಧಿಕಾರ ರಚನೆ ಆಯಿತು. ಆದರೆ ಸರಕಾರ ನಿಶ್ಚಿತ ಧೋರಣೆಯನ್ನನುಸರಿಸದೆ ಈ ಕೆಲಸ ಆಮೆಗತಿಯಲ್ಲಿ ನಡೆದಿದೆ.

ಹಿನ್ನೀರಿನಿಂದಾಗಿ ನಗರಕ್ಕೆ ಹಾನಿಯಾಗದ ರೀತಿಯಲ್ಲಿ ಗೋಡೆ ಕಟ್ಟುವ, ನೀರನ್ನು ಕೃಷ್ಣ ನದಿಗೆ ಜೋಡಿಸುವ ಸೂಚನೆಗೆ ಪುರಸ್ಕಾರ ಕೊಡಬಹುದಿತ್ತು. ಆದಾಗದಿದ್ದಾಗ ಕೃಷ್ಣಾ ನದಿಯ ನಮ್ಮ ಪಾಲಿನ ನೀರನ್ನುಳಿಸಲು ವಿದ್ಯುತ್ ಉತ್ಪಾದಿಸಲು ಆಲಮಟ್ಟಿ ಆಣೆಕಟ್ಟೆಯ ಎತ್ತರ 524 ಮೀಟರ್ ಆಗಲೇಬೇಕೆಂದು ನಿರ್ಧರಿಸಿದ ನಂತರವಾದರೂ ಚಾರ್ಲ್ಸ್ ಕೋರಿಯವರ ನೀಲಿನಕ್ಷೆಯಂತೆ ಗಂಭೀರವಾಗಿಯೇ ನವನಗರ ನಿರ್ಮಾಣದ ಕಾರ್ಯ ಕೈಗೊಳ್ಳಬಹುದಿತ್ತು.

ಕೃಷ್ಣಾ ಮೇಲ್ದಂಡೆ ಯೋಜನೆಯ ಮೂಲಕ ಬಿಜಾಪುರ-ಗುಲ್ಬರ್ಗಾ ಜಿಲ್ಲೆಗಳನ್ನು ಸತತವಾಗಿ ಬಾಧಿಸುತ್ತಿರುವ ಭೀಕರ ಬರಗಾಲಕ್ಕೆ ಕಾಯಂ ಪರಿಹಾರವಾಗಿ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದು ತಿಳಿದೇ ಕಮ್ಯುನಿಸ್ಟ್ ಪಕ್ಷ ಇತರ ಪುರೋಗಾಮಿ ಜನರ ಜತೆ ಸೇರಿ ಚಳುವಳಿ ನಡೆಸಿತು. ಬಿಜಾಪುರ ಜಿಲ್ಲೆಯ ಜನತೆ ಹಾಗೆಯೇ ಸರಕಾರ ಕೂಡ ಯೋಜನೆಯ ಮಹತ್ವವನ್ನರಿತಿತ್ತು. ನೀರಾವರಿ ವಿಷಯದಲ್ಲಿ ಆಂಧ್ರ ಸರಕಾರಕ್ಕಿರುವಷ್ಟು ಕಾಳಜಿ ನಮ್ಮ ಸರಕಾರಕ್ಕಿರದ ಕಾರಣ ಈ ಯೋಜನೆ ಕುಂಟುತ್ತಾ ನಡೆಯಿತು.

ಗೊಂದಲ-ಮರುಗೊಂದಲ

ಈ ಮಧ್ಯೆ ಆಂಧ್ರ ಸರಕಾರ ಆಲಮಟ್ಟಿ ಆಣೆಕಟ್ಟೆಯ ಎತ್ತರದ ಕುರಿತು ಹಲವಾರು ಸಲ ಕೇಂದ್ರ ಸರಕಾರ ಮತ್ತು ಸುಪ್ರೀಂ ಕೋರ್ಟು ಕಟ್ಟೆ ಹತ್ತಿದ ಪರಿಣಾಮವಾಗಿ ಆಣೆಕಟ್ಟೆಯ ಎತ್ತರದ ಕುರಿತು ಗೊಂದಲ ಉಂಟಾಯಿತು. ಆಲಮಟ್ಟಿ ಆಣೆಕಟ್ಟೆಯ ನೀರು ನೀರಾವರಿಗೆ ಮಾತ್ರವಲ್ಲ, ಅದರ ಎತ್ತರವನ್ನು 524 ಮಿ.ವರೆಗೆ ಎತ್ತರಿಸಿದರೆ ವಿದ್ಯುಚ್ಛಕ್ತಿ ಉತ್ಪಾದಿಸಬಹುದೆಂಬ ವಿಚಾರದಿಂದ ಮೊದಲನೆ ಯೋಜನೆಯಂತೆ 519 ಮಿ.ವರೆಗೆ ನೀರು ನಿಲ್ಲಿಸದೆ 524 ಮೀ. ವರೆಗೆ ನೀರು ನಿಲ್ಲಿಸುವ ನಿರ್ಣಯವಾಯಿತು. ಈಗ 519 ಮಿ.ವರೆಗೆ ಮುಂದೆ 524 ಮಿ. ಎತ್ತರ ನೀರು ನಿಲ್ಲಿಸುವ ನಿರ್ಧಾರವಾಗಿರುವ ಹಿನ್ನೆಲೆಯಲ್ಲಿ ಬಾಗಲಕೋಟೆ ಮುಳುಗಡೆಯ ಕುರಿತಾದ ಅನಿಶ್ಚಿತತೆ, ಗೊಂದಲಕ್ಕೆ ಪೂರ್ಣವಿರಾಮ ಬಿದ್ದಂತಾಗಿದೆ.

ಆಲಮಟ್ಟಿ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಈ ಯೋಜನೆಯಿಂದಾಗಿ ಮುಳುಗಡೆಯಾಗುವ ಜನರಿಗೆ ಪುನರ್ವಸತಿ ಒದಗಿಸುವಲ್ಲಿ, ಅವರಿಗೆ ಪರಿಹಾರ ಕೊಡುವಲ್ಲಿ ಹಾಗೆಯೇ ಬಾಗಲಕೋಟೆ ಇಡೀ ನಗರವನ್ನು ಸ್ಥಳಾಂತರಿಸುವಲ್ಲಿ ಕಳೆದ 38 ವರ್ಷಗಳಿಂದ ಎಂಥ ಅಸಮರ್ಪಕ ನೀತಿಯನ್ನನುಸರಿಸುತ್ತಿದೆ, ಆ ಮೂಲಕ ಎಂಥ ಗಂಭೀರ ಸಮಸ್ಯೆಗಳನ್ನು ಸಾರ್ವಜನಿಕರು ಎದುರಿಸಬೇಕಾಗಿ ಬಂದಿದೆಂಬ ಕಠೋರ ಚಿತ್ರ ನಮ್ಮ ಮುಂದಿದೆ. ರಾಜಕೀಯವಾಗಿ ದೃಢ ನಿರ್ಧಾರ ಕೈಗೊಳ್ಳುವಲ್ಲಿ ಕಾಂಗ್ರೆಸ್ ಸರಕಾರದ ವೈಫಲ್ಯ ಇದರಲ್ಲಿ ಎದ್ದು ಕಾಣುತ್ತದೆ. ಅದರಂತೆಯೇ ಆರಿಸಿ ಬರುತ್ತಿರುವ ಪ್ರತಿನಿಧಿಗಳೂ, ತಮ್ಮ ಕ್ಷೇತ್ರದ, ತಮ್ಮ ಜಿಲ್ಲೆಯ ಮುಖ್ಯ ಯೋಜನೆಗಳ ಅನುಷ್ಠಾನದ ಕುರಿತು ನಿರ್ಲಕ್ಷ್ಯದಿಂದಿರುತ್ತಾರೆಂಬುದಕ್ಕೆ ಇದೊಂದು ಜೀವಂತ ಸಾಕ್ಷಿಯಾಗಿದೆ.

ಸಂಗಾತಿ ಎನ್.ಕೆ.ಯುವರೀಗ 'ಕೋಮಾ' ಸ್ಥಿತಿಯಲ್ಲಿ

ಸದಾ ಲವಲವಿಕೆಯಿಂದ, ಓಡಾಡುತ್ತಿದ್ದ ನಮ್ಮೆಲ್ಲರ ನಲುಮೆಯ ಹಿರಿಯ ಸಂಗಾತಿ 'ಎನ್.ಕೆ.'ಯವರೀಗ ವಿಜಾಪುರದ ಅಂಜುಮನ್ ಆಸ್ಪತ್ರೆಯ ಅತೀ ಜಾಗ್ರತೆಯ ವಾರ್ಡಿನಲ್ಲಿ ಗಾಢ ನಿದ್ರೆಯಲ್ಲಿ ಮಲಗಿದ್ದಾರೆ.

ಇದೇ ನವೆಂಬರ್ 29 ರಂದು ವಿಜಾಪುರದ ಸಿಪಿಐ(ಎಂ) ನ ಕಛೇರಿಯಲ್ಲಿ ಎಂದಿನಂತೆ ಕೆಲಸಗಳಿಗೆ ಗಮನ ನೀಡುತ್ತಾ, ಜನರೊಂದಿಗೆ ಮಾತನಾಡುತ್ತಿರುವಾಗಲೇ ಕುಸಿದುಬಿದ್ದರು ಎನ್.ಕೆ.ಯವರು.

ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಯಿತು. ಅಲ್ಲಿಗೆ ಧಾವಿಸಿರುವ ಪಕ್ಷದ ಸೆಕ್ರೆಟಾರಿಯೇಟ್ ಸದಸ್ಯರಾದ ನಿತ್ಯಾನಂದ ಸ್ವಾಮಿ ಹಾಗೂ ವಿ.ಪಿ.ಕುಲಕರ್ಣಿಯವರು ತಿಳಿಸಿರುವುದು..... ಅವರ ಮೆದುಳಿನಲ್ಲಿ ನರತಂತುಗಳೊಡೆದು ರಕ್ತಸ್ರಾವವಾಗಿದೆ. ಪರಿಣಾಮ ಯಾರೊಂದಿಗೂ ಮಾತನಾಡಲಾಗದ, ನೋಡಲಾಗದ, ಸ್ಪಂದಿಸಲಾಗದಂತಹ ಎಚ್ಚರ ತಪ್ಪಿಸುವ 'ಕೋಮಾ' ಸ್ಥಿತಿ.

ಒಂದೆರಡು ಬಾರಿ ಹೃದಯಾಘಾತಕ್ಕೆ ಒಳಗಾಗಿದ್ದ 87 ರ ಹರೆಯದ ಕಾಮ್ರೇಡ್ ಎನ್.ಕೆ.ಉಪಾಧ್ಯಾಯರನ್ನು ಮತ್ತೆ ಸಿದ್ದಗೊಳಿಸಲು ವೈದ್ಯರು ಹೋರಾಡುತ್ತಿದ್ದಾರೆ. ಅವರು ಶೀಘ್ರ ಗುಣಮುಖರಾಗಲಿ, ಎಂದಿನಂತೆ ಮುಖದ ತುಂಬಾ ನಗು ತುಂಬಿ ಚೆಲ್ಲುತ್ತಾ ನಡೆಯಲಿ, 'ಮತ್ತೇನ್ ನಡೆದದಾ.......' ಎಂದು ಕೇಳಲಿ.

- ಸಂ.

ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯ, ಗೊಂದಲದ ಲಾಭ ಹೊಡೆಯಲು ಬಿಜೆಪಿ, ಅತಂತ್ರ ಸ್ಥಿತಿಯಲ್ಲಿ ಜನತೆ

ನೀರಾವರಿ, ವಿದ್ಯುತ್ ಯೋಜನೆಗಳನ್ನು ಪೂರ್ಣಗೊಳಿಸಿಯೇ ತೀರಬೇಕೆಂಬ ದೃಢ ನಿಲುವು ತಾಳುವಲ್ಲಿ, ಸರಕಾರ, ಚುನಾಯಿತ ಪ್ರತಿನಿಧಿಗಳು ಹಾಗೆಯೇ ಊರ ಪ್ರಮುಖರು ತಪ್ಪಿರುವುದರಿಂದ ಈ ಹೊತ್ತು ಬಾಗಲಕೋಟೆ ಜನ ಅಸ್ಥಿರ ಪರಿಸ್ಥಿತಿಯನ್ನೆದುರಿಸಬೇಕಾಗಿದೆ.

ಲಾಭ ಹೊಡೆಯಲು ಬಿಜೆಪಿ

ಇಂಥ ಗೊಂದಲ ಪರಿಸ್ಥಿತಿಯಲ್ಲಿ ಬಿಜೆಪಿಯವರು ಮೀನು ಹಿಡಿಯಲು ಇದರ ಲಾಭ ಪಡೆಯಲು ಹೊರಟಿದ್ದಾರೆ. ಸರಕಾರ ಅದಕ್ಕೆ ಬೇಕಾದ ಆಹಾರ ಒದಗಿಸಿದೆ. ರಾಜ್ಯ ಸರಕಾರದ ಬಳಿ ಹಲವಾರು ಸದನ ಸಮಿತಿ, ನ್ಯಾಯಾಂಗ ಸಮಿತಿ, ವಿಚಾರಣಾ ಸಮಿತಿ, ಅಧ್ಯಯನ ಸಮಿತಿಯ ವರದಿಗಳಿರುವಾಗ, ರಾಜ್ಯ ಸರಕಾರ ಮತ್ತೊಂದು ಸಮಿತಿಯನ್ನು ನೇಮಿಸಿ ಜನರಲ್ಲಿ ಪ್ರಚೋದನೆಗೆ ದಾರಿ ಮಾಡಿದೆ.

ಯು.ಕೆ.ಪಿ.ಪೂರ್ಣಗೊಂಡಾಗ ಅದರಡಿ ಬರುವ ಆಲಮಟ್ಟಿ, ನಾರಾಯಣಪುರ ಜಲಾಶಯಗಳ ಹಿನ್ನೀರಿನಿಂದ ಆಗುವ ದುಷ್ಪರಿಣಾಮಗಳು ಹಾಗೂ ಇದರಿಂದ ಮಲೇರಿಯಾ, ಜಲಾಶಯದ ಸುತ್ತಮುತ್ತಲಿನ ಭೂಮಿಯ ತೇವಾಂಶ ಹೆಚ್ಚಿ ಹವಾಮಾನದಲ್ಲಾಗುವ ವೈಪರೀತ್ಯಗಳ ಇನ್ನಿತರ ಹಲವಾರು ವಿಷಯಗಳ ಬಗ್ಗೆ ವರದಿ ಸಲ್ಲಿಸಲು ಅಜಿತಶೆಟ್ಟಿ ನೇತೃತ್ವದ ಕಮಿಟಿ ನೇಮಿಸಲಾಗಿತ್ತು. ಬಾಗಲಕೋಟೆ ನಗರವನ್ನು ಪೂರ್ಣ ಸ್ಥಳಾಂತರಿಸುವ ಅಗತ್ಯವಿಲ್ಲೆಂಬ ಅಂಶ ಶೆಟ್ಟಿ ಸಲ್ಲಿಸಿದ ವರದಿಯಲ್ಲಿದೆ. ಅದು ಬಹಿರಂಗಗೊಂಡಿದೆ. ಅದರಿಂದಾಗಿ ಬಾಗಲಕೋಟೆಯ ಜನ ಚಳುವಳಿ ಪ್ರಾರಂಭಿಸುವಂತಾಗಿದೆ. ಬಾಗಲಕೋಟೆಯಿಂದ ಚುನಾಯಿತ ಬಿಜೆಪಿ ಶಾಸಕ ಪೂಜಾರಿ ಈ ಶೆಟ್ಟಿ ವರದಿಯಿಂದುಂಟಾದ ಅಸಮಾಧಾನದ ಲಾಭ ಪಡೆಯಲು ಹೋರಾಟ ಪ್ರಾರಂಭಿಸಿದರು. ಶೆಟ್ಟಿ ಸಮಿತಿ ವರದಿಯನ್ನು ಸರಕಾರ ಒಪ್ಪಿಕೊಳ್ಳಲಿಲ್ಲ. ಚಳುವಳಿ ಯಾಕೆ, ಈ ತಿಂಗಳ ೪ ರಂದು ಮುಖ್ಯಮಂತ್ರಿಯವರು ಈ ಕುರಿತು ಮುಖಂಡರ ಜತೆಯಲ್ಲಿ ಚರ್ಚಿಸಲಿದ್ದಾರೆಂದು ಹೇಳಿದ ನಂತರ ಪೂಜಾರಿ ಸತ್ಯಾಗ್ರಹದ ಕೈಬಿಟ್ಟರು. ಆದರೆ ಬಿಜೆಪಿಯ ಯುವ ಮುಖಂಡರು ಚಳುವಳಿ ಮುಂದುವರಿಸಿದ್ದಾರೆ. ನಗರದ ಮುಳುಗಡೆ ಪ್ರಶ್ನೆ ಸಾರ್ವಜನಿಕರಿಂದ ಬೆಂಬಲ ಬರುತ್ತಿದೆ. ಕಾಂಗ್ರೆಸ್ಸಿನಲ್ಲಿ ಮಂತ್ರಿ ಚಿಮ್ಮನಕಟ್ಟಿ - ಕಾಶಪ್ಪನವರ ನಡುವೆ ಭಿನ್ನಾಭಿಪ್ರಾಯ. ಒಲ್ಲದ ಮನಸ್ಸಿನಿಂದ ಹೋರಾಟಕ್ಕೆ ಬೆಂಬಲ ನಡೆದಿದೆ. ೬ನೇ ತಾರೀಖಿಗೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಮಕ್ಷಮ ಸಭೆ ನಡೆದು ಮುಂದಿನ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗುವುದೆಂಬ ನಿರ್ಣಯವಾಗಿದೆ.

ಅಂತರರಾಜ್ಯಮಂಡಳಿ ಸಭೆ ರಾಜ್ಯಗಳ ಹಕ್ಕುಗಳತ್ತ ಸ್ವಲ್ಪ ಪ್ರಗತಿ



- ಪ್ರಕಾಶ್ ಕಾರಟ್

ಕೇಂದ್ರ ರಾಜ್ಯಗಳ ನಡುವೆ ಅರ್ಥಪೂರ್ಣ ಸಂಬಂಧಗಳನ್ನು ಕಲ್ಪಿಸುವ ಸಾಧ್ಯತೆ ಇರುವುದು ಈ ಅಂತರಾಜ್ಯ ಮಂಡಳಿಗೆ. ಈಸಭೆಯಲ್ಲಿ ಅರ್ಥಪೂರ್ಣ ಚರ್ಚೆ ಇರಲಿ, ಸಭೆ ಸೇರಿಸಲು ನಿರಾಕರಿಸುತ್ತಿದ್ದ ಕೇಂದ್ರ ಸರ್ಕಾರದ ವರ್ತನೆ ವಿರುದ್ಧ ಎಡಪಕ್ಷಗಳು ಆರಂಭಿಸಿದ ಹೋರಾಟದಲ್ಲಿ ಈಗ ಪ್ರಾದೇಶಿಕ ಪಕ್ಷಗಳೂ ಸೇರಿವೆ. ಹೀಗೆ ಅನಿವಾರ್ಯವಾಗಿ ಸೇರಿದ್ದ ಈ ಸಭೆಯಲ್ಲಿ ಕೆಲವು ಮಹತ್ವದ ಉತ್ತಮ ನಿರ್ಧಾರ ಕೈಗೊಳ್ಳುವಂತಾದದ್ದು ವಿಶೇಷ. ಅವೇನವು?

ನವೆಂಬರ್ 16 ರಂದು ನವದೆಹಲಿಯಲ್ಲಿ ಅಂತರ-ರಾಜ್ಯ ಮಂಡಳಿಯ ಸಭೆ ನಡೆಯಿತು. ಕೇಂದ್ರ-ರಾಜ್ಯ ಸಂಬಂಧಗಳ ಕೆಲವು ಮುಖ್ಯ ಅಂಶಗಳ ಬಗ್ಗೆ ಸರ್ಕಾರಿಯಾ ಆಯೋಗದ ಶಿಫಾರಸ್ಸುಗಳನ್ನು ಕುರಿತಂತೆ ಮಂಡಳಿಯ ಸ್ಥಾಯೀ ಸಮಿತಿಯ ಶಿಫಾರಸ್ಸುಗಳನ್ನು ಈ ಸಭೆ ಪರಿಶೀಲಿಸಿತು.

ಅಂತರ-ರಾಜ್ಯ ಮಂಡಳಿಯೆಂಬುದು ಕೇಂದ್ರ-ರಾಜ್ಯ ಸಂಬಂಧಗಳನ್ನು ಕುರಿತು ಪ್ರಶ್ನೆಗಳನ್ನು ಚರ್ಚಿಸಲು ಸಂವಿಧಾನವು ಕೇಂದ್ರ ಮತ್ತು ರಾಜ್ಯಗಳಿಗೆ ಒದಗಿಸಿರುವ ಒಂದು ವೇದಿಕೆ. 1989 ರ ವರೆಗೆ ಕಾಂಗ್ರೆಸ್ ಸರ್ಕಾರಗಳು ಈ ಮಂಡಳಿಯ ಸಭೆ ಕರೆಯುವ ಗೋಜಿಗೇ ಹೋಗಿರಲಿಲ್ಲ. ಈ ಮಂಡಳಿಯನ್ನು ಮೊದಲು ರಚಿಸಿದ್ದು ವಿ.ಪಿ.ಸಿಂಗ್ ಸರ್ಕಾರ. ಅಂದಿನಿಂದ ನಿರ್ದಿಷ್ಟ ಅವಧಿಗಳಲ್ಲಿ ಈ ಮಂಡಳಿಯ ಸಭೆಗಳು ನಡೆಯುತ್ತಿವೆ. ಇದು ಕೂಡಾ ಎಡಪಕ್ಷಗಳು ಮತ್ತು ಪ್ರಾದೇಶಿಕ ಪಕ್ಷಗಳಿಗೆ ಸೇರಿದ ರಾಜ್ಯ ಸರಕಾರಗಳು ನಡೆಸಿದ ದೀರ್ಘ ಹೋರಾಟದ ಫಲದಿಂದಲೇ.

ವಾಜಪೇಯಿ ಸರಕಾರಕ್ಕೆ ಈ ಸಂಸ್ಥೆಯನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಏಕೆಂದರೆ ಎನ್‌ಡಿಎ ಯಲ್ಲಿ ಭಾರತ ಸಂಘದ ಒಕ್ಕೂಟ ರಚನೆಯನ್ನು ಬಲಪಡಿಸಲು ಅಂತರ-ರಾಜ್ಯ ಮಂಡಳಿಯನ್ನು ಬಳಸಬೇಕು ಎಂದು ಬಲವಾಗಿ ಪ್ರತಿಪಾದಿಸುವ ಪ್ರಾದೇಶಿಕ ಪಕ್ಷಗಳಿವೆ. ಸರ್ಕಾರಿಯಾ ಆಯೋಗ ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ಸೂಚಿಸಿದ ಬದಲಾವಣೆಗಳು ಬಹಳ ಸೀಮಿತ ಸ್ವರೂಪದ್ದಾಗಿದ್ದರೂ ದೀರ್ಘಕಾಲದಿಂದ ಅದು ಜಾರಿಯಾಗದೇ ಉಳಿದಿದೆ. ಕಾಂಗ್ರೆಸ್ ಸರಕಾರಗಳಾಗಲೀ, ಬಿಜೆಪಿ ನೇತೃತ್ವದ ಸರ್ಕಾರವಾಗಲೀ ಈ ಬಗ್ಗೆ ಯಾವುದೇ ತುರ್ತನ್ನು ಪ್ರದರ್ಶಿಸಲಿಲ್ಲ. ಸಂಯುಕ್ತ ರಂಗ ಸರಕಾರದ ಅವಧಿಯಲ್ಲಷ್ಟೇ ಅಂತರ-ರಾಜ್ಯ ಮಂಡಳಿಯಲ್ಲಿ ಸರ್ಕಾರಿಯಾ ಆಯೋಗಗಳ ಶಿಫಾರಸ್ಸುಗಳನ್ನು ಗಂಭೀರ ಚರ್ಚೆಗೆ ಎತ್ತಿಕೊಳ್ಳಲಾಯಿತು. ಸ್ಥಾಯೀ ಸಮಿತಿಯ ಶಿಫಾರಸ್ಸುಗಳು ಆಗ ಆರಂಭಿಸಿದ ಪ್ರಕ್ರಿಯೆಯ ಮುಂದುವರಿಕೆಯಾಗಿದ್ದವು.

ಸ್ವಲ್ಪ ಮುನ್ನಡೆ

ಈ ಬಾರಿ ಮಂಡಳಿ 59 ಶಿಫಾರಸುಗಳನ್ನು ಕೈಗೆತ್ತಿಕೊಂಡಿತು. ಮಂಡಳಿಯ ಸಭೆಯ ಕಾರ್ಯಸೂಚಿಯಲ್ಲಿದ್ದ ವಿಷಯಗಳೆಂದರೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಶಾಸನಾತ್ಮಕ ಸಂಬಂಧಗಳು ಹಾಗೂ ರಾಜ್ಯಪಾಲರ ಪಾತ್ರ.

ಒಂದು ಹೆಚ್ಚು ಒಕ್ಕೂಟಾತ್ಮಕವಾದ ರಚನೆಗಾಗಿ ದಶಕಗಳ ಹೋರಾಟ ಒಂದು ಸೀಮಿತ ಸ್ವರೂಪದಲ್ಲಾದರೂ ಸ್ವಲ್ಪ ಮುನ್ನಡೆ ಕಂಡಿದೆ ಎಂಬುದು ಮಂಡಳಿಯ ಕಲಾಪಗಳ ಫಲಿತಾಂಶದಿಂದ ಕಂಡುಬರುತ್ತದೆ. ಒಂದು ಪ್ರಮುಖ ಪ್ರಶ್ನೆಯೆಂದರೆ ಸಂವಿಧಾನದಲ್ಲಿ ಪಟ್ಟಿ ಮಾಡಲ್ಪಟ್ಟಿರುವ ಅಧಿಕಾರಗಳನ್ನು ಕುರಿತಾದದ್ದು. ಸದ್ಯಕ್ಕೆ ಈ ಅಧಿಕಾರಗಳು ಕೇಂದ್ರ ಸರ್ಕಾರದ ಬಳಿಯಿವೆ. ಈ ಉಳಿದ ಅಧಿಕಾರಗಳನ್ನು ರಾಜ್ಯಗಳಿಗೆ ಕೊಡಬೇಕು ಎಂದು ಪಶ್ಚಿಮಬಂಗಾಳ ಮತ್ತು ತ್ರಿಪುರಾ ಎಡ ನೇತೃತ್ವದ ಸರಕಾರಗಳು ಹಾಗೂ ಪ್ರಾದೇಶಿಕ ಪಕ್ಷಗಳು ನಡೆಸುವ ವಿವಿಧ ಇತರ ರಾಜ್ಯ ಸರಕಾರಗಳು ಬೇಡಿಕೆಯಿಟ್ಟಿದ್ದವು. ತೆರಿಗೆ ಹಾಕುವುದು ಬಿಟ್ಟು ಇತರ ಶೇಷ ಅಧಿಕಾರಗಳನ್ನು ಸಮವರ್ತಿ ಪಟ್ಟಿಗೆ ವರ್ಗಾಯಿಸಬೇಕು ಎಂದು ಸರ್ಕಾರಿಯಾ ಆಯೋಗ ಶಿಫಾರಸು ಮಾಡಿತ್ತು. ಮಂಡಳಿಯ ಅಂತಿಮ ತೀರ್ಮಾನವೆಂದರೆ ಈ ಶಿಫಾರಸನ್ನು ಒಂದು ಮಹತ್ವಪೂರ್ಣ ಬದಲಾವಣೆಯೊಂದಿಗೆ ಸ್ವೀಕರಿಸುವುದು. ಅದೆಂದರೆ ಶೇಷ ತೆರಿಗೆ ಹಾಕುವ ಅಧಿಕಾರವನ್ನು ಕೂಡಾ ಸಮವರ್ತಿ ಪಟ್ಟಿಯಲ್ಲಿ ಸೇರಿಸುವುದು. ಈ ಬೇಡಿಕೆಯ್ನು ಇದುವರೆಗೂ ಕೇಂದ್ರ ಸರಕಾರ ಪ್ರತಿರೋಧಿಸುತ್ತಾ ಬಂದಿತ್ತು.

ರಾಜ್ಯಗಳೊಂದಿಗೆ ಸಮಾಲೋಚನೆ

ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳಲ್ಲಿ ಶಾಸನ ರೂಪಿಸುವಾಗ ರಾಜ್ಯ ಸರಕಾರಗಳೊಂದಿಗೆ ಸಮಾಲೋಚನೆಯಿರಬೇಕು ಎಂಬ ಆಯೋಗದ ಶಿಫಾರಸನ್ನು ಮಂಡಳಿ ಅಂಗೀಕರಿಸಿತು. ಎಡ ನೇತೃತ್ವದ ಸರಕಾರಗಳು ಸಮವರ್ತಿ ಪಟ್ಟಿಯ ಪುನರ್ವಿಂಗಡಣೆಯಾಗಬೇಕು ಎಂದು ಒತ್ತಾಯಿಸುತ್ತಿದ್ದವು. ಆ ಬೇಡಿಕೆ ಈಡೇರದಿದ್ದರೂ ಈ ರೀತಿ ಶಾಸನಾತ್ಮಕ ಕ್ರಮಗಳನ್ನು ಕೈಗೊಳ್ಳುವ ಮೊದಲು ರಾಜ್ಯ ಸರಕಾರಗಳೊಡನೆ ಸಮಾಲೋಚನೆ ಅಗತ್ಯವನ್ನು ಸ್ವೀಕರಿಸಿರುವುದು ಒಂದು ಮುನ್ನಡೆ. **ರಾಜ್ಯದ ಹಕ್ಕುಗಳನ್ನು ಕೇಂದ್ರ ಅತಿಕ್ರಮಿಸುವ ವಿರುದ್ಧ ರಕ್ಷಣೆಗಳನ್ನು ಒದಗಿಸುವ ಬೇರೆ ಕೆಲವು ಶಾಸನಾತ್ಮಕ ಸಂಬಂಧಗಳನ್ನು ಕುರಿತ ಅಂಶಗಳನ್ನು ಕೂಡಾ ಅಂಗೀಕರಿಸಲಾಯಿತು. ಗಣಿಗಳು ಮತ್ತು ಖನಿಜಗಳ ಮೇಲೆ ರಾಜ್ಯಗಳಿಗೆ ರಾಜಧನದ ಮರುವಿಮರ್ಶೆಯ ಅವಧಿಯನ್ನು 4 ವರ್ಷಗಳಿಂದ 2 ವರ್ಷಗಳಿಗೆ ಇಳಿಸುವುದು, ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯುಜಿಸಿ) ದಲ್ಲಿ ರಾಜ್ಯಗಳಿಗೆ ಪ್ರಾತಿನಿಧ್ಯವಿರಬೇಕೆಂಬುದಕ್ಕೆ ತತ್ವಶಃ ಒಪ್ಪಿಗೆ ಇಂತಹ ಕೆಲವು ಕ್ರಮಗಳು.** ಈ ಸೀಮಿತ ಹೆಜ್ಜೆಗಳು ರಾಜ್ಯಗಳಿಗೆ ಹೆಚ್ಚು ಹಣಕಾಸು ಮತ್ತು ಶಾಸನಾತ್ಮಕ ಅಧಿಕಾರಗಳನ್ನು ವರ್ಗಾಯಿಸಲು ಹೋರಾಟವನ್ನು ಮುಂದುವರೆಸಬೇಕಾದ ಅಗತ್ಯವನ್ನು ಎತ್ತಿತೋರಿವೆಯಷ್ಟೆ.

ರಾಜ್ಯಪಾಲರ ಪಾತ್ರ ಹಾಗೂ ನೇಮಕ

ಮಂಡಳಿ ಕೈಗೆತ್ತಿಕೊಂಡ ಇನ್ನೊಂದು ಪ್ರಮುಖ ಅಜೆಂಡಾ ಎಂದರೆ ರಾಜ್ಯಪಾಲರ ಪಾತ್ರ-ರಾಜ್ಯಪಾಲರನ್ನು ಕೇಂದ್ರದ ಏಜೆಂಟರಾಗಿ ಬಳಸಲಾಗಿದೆ. ಮತ್ತೆ-ಮತ್ತೆ ರಾಜ್ಯಪಾಲರು ಚುನಾಯಿತ ರಾಜ್ಯ ಸರಕಾರಗಳ, ಶಾಸನ ಸಭೆಗಳ ವಿರುದ್ಧ ವರ್ತಿಸಿದ್ದರೆ, ಈ ಮೂಲಕ ಪ್ರಜಾಪ್ರಭುತ್ವದ ನೀತಿ-ನಿಯಮಗಳನ್ನು ಗಾಳಿಗೆ ತೂರಿದ್ದಾರೆ. ಹೀಗೆ ಕೇಂದ್ರದ ಪ್ರತಿನಿಧಿಯಾಗಿ ರಾಜ್ಯಪಾಲರಿಗೆ ಕೊಟ್ಟಿರುವ ಸ್ವೇಚ್ಛಾಧಿಕಾರಗಳ ಅತಿಕೆಟ್ಟ ಅಭಿವ್ಯಕ್ತಿಯೆಂದರೆ 356 ನೇ ಕಲಮಿನ ಬಳಕೆ. ಇದರ ಬದಲು ಒಂದು ನಿಜವಾಗಿಯೂ ಒಕ್ಕೂಟ ಸ್ವರೂಪದ ರಚನೆಗೆ ಅನುಗುಣವಾಗಿ ಈ ಹುದ್ದೆಯ ಸ್ವರೂಪದಲ್ಲಿ ಮೂಲಭೂತ ಬದಲಾವಣೆಗಳು ಆಗಬೇಕು ಎಂದು ಎಡ ನೇತೃತ್ವದ ಸರಕಾರಗಳು ವಾದಿಸುತ್ತಾ ಬಂದಿವೆ. **ರಾಜ್ಯಪಾಲರನ್ನು ರಾಜ್ಯ ಮುಖ್ಯಮಂತ್ರಿಗಳು ಸೂಚಿಸುವ ಮೂವರು ಗಣ್ಯವಕ್ತಿಗಳ ಪಟ್ಟಿಯಿಂದ ಆರಿಸಿ ರಾಷ್ಟ್ರಪತಿಗಳು ನೇಮಕ ಮಾಡಬೇಕು ಎಂದು ಮೊದಲು ಸೂಚಿಸಿದವರು ಜ್ಯೋತಿಬಸು.** ಇದನ್ನು ಪಶ್ಚಿಮ ಬಂಗಾಳದ ಈಗಿನ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಪುನರುಚ್ಚರಿಸಿದರು. ಸರ್ಕಾರಿಯಾ ಆಯೋಗವು ರಾಜ್ಯಪಾಲರಾಗಿ ನೇಮಿಸುವ ವ್ಯಕ್ತಿಯ ಬಗ್ಗೆ ರಾಜ್ಯ ಮುಖ್ಯಮಂತ್ರಿಯೊಂದಿಗೆ ಸಮಾಲೋಚಿಸಬೇಕು ಮತ್ತು ಸಮಾಲೋಚನೆಯ ವಿಧಾನವನ್ನು ಸಂವಿಧಾನದಲ್ಲಿ ವಿಧಿಸಬೇಕು ಎಂದು ಶಿಫಾರಸು ಮಾಡಿತ್ತು.

ಮಂಡಳಿಯ ಸ್ಥಾಯಿ ಸಮಿತಿ ಕೂಡಾ **ರಾಜ್ಯ ಮುಖ್ಯಮಂತ್ರಿಯೊಂದಿಗೆ ಸಮಾಲೋಚನೆಯನ್ನು ಮಾಡಲೇಬೇಕೆಂದು ವಿಧಿಸಲು ಸಂವಿಧಾನವನ್ನು ಸೂಕ್ತವಾಗಿ ತಿದ್ದುಪಡಿ ಮಾಡಬೇಕು ಎಂದು ಶಿಫಾರಸು ಮಾಡಿದೆ. ಮಂಡಳಿ ಈ ಪ್ರಸ್ತಾವವನ್ನು ಸ್ವೀಕರಿಸಿದೆ** ಹಾಗೂ ಕೇಂದ್ರ ಸರಕಾರ ಈ ವಿಷಯದಲ್ಲಿ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿ ಒಂದು ಸಂವಿಧಾನ ತಿದ್ದುಪಡಿ ತರುವುದಾಗಿ ಭರವಸೆ ನೀಡಿದೆ.

ಹಿಂದಿನ ಕಾಂಗ್ರೆಸ್ ಸರಕಾರಗಳಿರಲಿ, ಈಗಿನ ಬಿಜೆಪಿ ನೇತೃತ್ವದ ಸರಕಾರವಿರಲಿ, ಅವು ಕೇಂದ್ರದ ಆಳುವ ಪಕ್ಷದ ಅಥವಾ ಮೈತ್ರಿಕೂಟದ ರಾಜಕೀಯ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುವ ರೀತಿಯಲ್ಲಿ ರಾಜ್ಯಪಾಲರನ್ನು ನೇಮಿಸುತ್ತಾ ಬಂದಿವೆ. ಕಾಂಗ್ರೆಸ್ ವಿಸರ್ಜಿತ ಕಾಂಗ್ರೆಸ್ ರಾಜಕಾರಣಿಗಳನ್ನು ರಾಜ್ಯಗಳಲ್ಲಿ ರಾಜ್ಯಪಾಲರಾಗಿ ನೇಮಿಸುವ ಅಭ್ಯಾಸ ಬೆಳೆಸಿಕೊಂಡಿತ್ತು. ಬಿಜೆಪಿಯ ವರ್ತನೆಯೇನೂ ಉತ್ತಮವಿಲ್ಲ. ವಾಜಪೇಯಿ ಸರಕಾರ ಬಿಹಾರದಲ್ಲಿ ಆರ್.ಜೆ.ಡಿ. ಸರಕಾರವನ್ನು ಉರುಳಿಸಲು ಒಬ್ಬ ಹಿರಿಯ ಆರ್.ಎಸ್.ಎಸ್. - ಬಿಜೆಪಿ ಮುಖಂಡ ಸುಂದರ್ ಸಿಂಗ್ ಭಂಡಾರಿಯನ್ನು ಅಲ್ಲಿ ರಾಜ್ಯಪಾಲರಾಗಿ ನೇಮಿಸಿತು. ಹಾಗೆ ಮಾಡುವಾಗ ಪ್ರತಿಪಕ್ಷಗಳ ಆಳ್ವಿಕೆಯಿರುವ ರಾಜ್ಯಗಳಲ್ಲಿ ಕೇಂದ್ರದಲ್ಲಿನ ಆಳುವ ಪಕ್ಷದ ರಾಜಕಾರಣಿಗಳನ್ನು ರಾಜ್ಯಪಾಲರಾಗಿ ನೇಮಿಸಬಾರದು ಎಂಬ ಸರ್ಕಾರಿಯಾ ಆಯೋಗದ ಶಿಫಾರಸನ್ನು ಅವರು ಉಲ್ಲಂಘಿಸಿದ್ದರು. ಸಂವಿಧಾನದ ಪ್ರಸಕ್ತ ವ್ಯವಸ್ಥೆಯಲ್ಲಿ ರಾಜ್ಯಪಾಲರನ್ನು ಕೇಂದ್ರ ಸರಕಾರದ ಪ್ರತಿನಿಧಿಯಾಗಿ ಕಾಣಲಾಗಿದೆ. ಆದರೆ ರಾಜ್ಯಪಾಲರು ರಾಜ್ಯದ ಹಿತಾಸಕ್ತಿಗಳನ್ನು ಕೂಡಾ ಪ್ರತಿನಿಧಿಸಬೇಕು ಎಂದು ಸಿಪಿಐ(ಎಂ) ಬಯಸುತ್ತದೆ. 'ಸಮಾಲೋಚನೆ' ಯ ಪ್ರಕ್ರಿಯೆ ಕೇವಲ ಔಪಚಾರಿಕ. ಏಕೆಂದರೆ ರಾಜ್ಯ ಸರ್ಕಾರದ ಒಪ್ಪಿಗೆ ಬೇಕು ಎಂದು ಅದರರ್ಥವಾಗುವುದಿಲ್ಲ.

ಅಂತರ-ರಾಜ್ಯ ಮಂಡಳಿ ಸ್ವೀಕರಿಸಿದ ಇತರ **ಶಿಫಾರಸುಗಳು ಸ್ವೇಚ್ಛಾಚಾರದ ಕ್ರಮಗಳು ಮತ್ತು ರಾಜ್ಯಪಾಲರ ಹುದ್ದೆಯ ದುರುಪಯೋಗಕ್ಕೆ ಸಂಬಂಧಪಟ್ಟವು - ವಿಶೇಷವಾಗಿ ಮುಖ್ಯಮಂತ್ರಿಯನ್ನು ನೇಮಿಸುವ ರಾಜ್ಯಪಾಲರ ಅಧಿಕಾರದ ಪ್ರಶ್ನೆಯನ್ನು ಕುರಿತದ್ದು.** ನಿಚ್ಚಳ ಬಹುಮತವಿಲ್ಲದಿದ್ದಾಗ ರಾಜ್ಯಪಾಲರು ಅತಿದೊಡ್ಡ ಪಕ್ಷ ಅಥವಾ ಪಕ್ಷಗಳ ಗುಂಪಿನ ಮುಖಂಡನನ್ನು ಸರಕಾರ ರಚಿಸಲು ಆಹ್ವಾನಿಸಬೇಕು, ಮೂವತ್ತು ದಿನಗಳೊಳಗೆ ವಿಶ್ವಾಸಮತ ಗಳಿಸಬೇಕಾದುದು ಕಡ್ಡಾಯವಾಗಬೇಕು ಮತ್ತು ರಾಜ್ಯಪಾಲರು ಬಹುಮತದ ದಾಖಲೆಗಳನ್ನು ವಿಧಾನಸಭೆಯ ಹೊರಗಡೆ ನಿರ್ಧರಿಸಬಾರದು ಎಂಬುದನ್ನು ಅಂತರ-ರಾಜ್ಯ ಮಂಡಳಿ ಸ್ವೀಕರಿಸಿತು. ಈ ಎಲ್ಲಾ ಕ್ರಮಗಳನ್ನು ನಿಬಂಧನೆಗಳಾಗಿ ರೂಪಿಸಬೇಕು. ರಾಜ್ಯಪಾಲರು ನಿವೃತ್ತಿಯ ನಂತರ ಯಾವುದೇ ಸಾರ್ವಜನಿಕ ಹುದ್ದೆಯನ್ನು ಅಥವಾ ಖಾಸಗಿ ನೇಮಕಾತಿಯನ್ನು ತೆಗೆದುಕೊಳ್ಳಬಾರದು ಮತ್ತು ನಿವೃತ್ತಿಯ ನಂತರ ಅವರಿಗೆ ನಿವೃತ್ತಿ ವೇತನ ನೀಡಬೇಕು ಎಂಬ ನಿರ್ಣಯವನ್ನು ಜಾರಿಗೆ ತರಬೇಕು.

ಸಮೂಹ ಮಾಧ್ಯಮದ ಪ್ರಶ್ನೆ

ಮಂಡಳಿ ಇನ್ನೆರಡು ವಿಷಯಗಳನ್ನು ಕೈಗೆತ್ತಿಕೊಂಡಿತು. **ಸಮೂಹ ಮಾಧ್ಯಮದ ಪ್ರಶ್ನೆಯನ್ನು** ಕುರಿತಂತೆ ದೂರದರ್ಶನವನ್ನು ಸುಮಾರಾಗಿ ಕೇಂದ್ರ ಸರಕಾರದ ಇಲಾಖೆಯಂತೆ ನಡೆಸತ್ತಿರುವುದರಿಂದ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮ ಖಾಸಗೀಕರಣ ಗೊಂಡಿರುವುದರಿಂದ ಪ್ರಸಾರ ಭಾರತಿ ಟಿ.ವಿ. ಮತ್ತು ರೇಡಿಯೋ ವಾಹಿನಿಗಳನ್ನು ನಡೆಸುವಲ್ಲಿ ರಾಜ್ಯ ಸರಕಾರದ ಮಾತಿಗೂ ಅವಕಾಶ ನೀಡದಿರಲು ಏನೂ ಕಾರಣಗಳಿಲ್ಲ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹೇಳಿದರು. ಇದು **ಇತರ ಮುಖ್ಯಮಂತ್ರಿಗಳೂ ವ್ಯಾಪಕವಾಗಿ ಬೆಂಬಲಿಸಿದ ಒಂದು ಬೇಡಿಕೆ.**

ಭಾಷಾ ನೀತಿಯನ್ನು ಕುರಿತಂತೆ ಸಭೆ **ತ್ರಿಭಾಷಾ ಸೂತ್ರವನ್ನು** ಮುಂದುವರೆಸಲು ನಿರ್ಧರಿಸಿತು ಹಾಗೂ ಅದನ್ನು ಜಾರಿಗೆ ತರುವುದನ್ನು ಆಯಾಯ ರಾಜ್ಯಗಳ ನಿರ್ದಿಷ್ಟ ಪರಿಸ್ಥಿತಿಗಳಿಗೆ ಅನುಗುಣವಾಗಿ ಆಯಾಯ ರಾಜ್ಯಗಳಿಗೆ ಬಿಡಲು ನಿರ್ಧರಿಸಲಾಯಿತು.

ಒಟ್ಟಾರೆಯಾಗಿ, ಅಂತರ-ರಾಜ್ಯ ಮಂಡಳಿಯ ಕಲಾಪಗಳು **ಕೇಂದ್ರ-ರಾಜ್ಯ ಸಂಬಂಧಗಳನ್ನು ಇನ್ನಷ್ಟು ಸುಧಾರಣೆಗಳತ್ತ ಒತ್ತಾಯ ಮಾಡಬೇಕಾದ ಅಗತ್ಯವನ್ನು ಎತ್ತಿ ಹಿಡಿದಿವೆ; ಈ ಮೂಲಕ ರಾಜ್ಯಗಳಿಗೆ ಒಂದು ಒಕ್ಕೂಟ ವ್ಯವಸ್ಥೆಯೊಳಗೆ ಸಿಗಲೇಬೇಕಾದ ಅಧಿಕಾರಗಳು ಸಿಗುವಂತಾಗಬೇಕು.** ಈ ದಿಕ್ಕಿನಲ್ಲಿ ಇನ್ನಷ್ಟು ಪ್ರಗತಿಯನ್ನು ತಡೆಯಲು ಮತ್ತು ವಿಳಂಬಗೊಳಿಸಲು ಬಿಜೆಪಿ ನೇತೃತ್ವದ ಸರಕಾರ ಕೂಡಾ ಅದರ ಹಿಂದಿನ ಸರಕಾರಗಳಂತೆ ಪ್ರಯತ್ನಿಸುತ್ತದೆ. ○

"ನಮಗೆ ಹಳದಿ ಕಾರ್ಡು ಹಾಗೂ ರೇಷನ್ ...ಗಲೇಬೇಕು, ಗೋದಾಮುಗಳಲ್ಲಿ ಕೊಳೆಯುತ್ತಿರುವ ಧಾನ್ಯವನ್ನು ಹಂಚಲೇಬೇಕು, ರೇಷನ್ ಸಬ್ಸಿಡಿ ಕಡಿತ ಮಾಡುತ್ತಿರುವ ಕೇಂದ್ರದ

ಹಳದಿ ಕಾರ್ಡುಗಳಿಗಾಗಿ ಹರಿದ

ಸಾಮ್ರಾಜ್ಯಶಾಹಿ ಪ್ರೇರಿತ ಉದಾರೀಕರಣದ ಅಂಗವಾಗಿ ವಾಜಪೇಯಿ ಸರ್ಕಾರವು ... ಖಚಿತಪಡಿಸಲು ಎಸ್.ಎಂ.ಕೃಷ್ಣ ಸರ್ಕಾರವು ಪಡಿತರ(ಹಸಿರು) ಚೀಟಿಗಳನ್ನು ಕ... ಧಾನ್ಯಗಳನ್ನೇ ಅವಲಂಬಿಸಿ ಬದುಕುವ ಜನಗಳು ಆತಂಕಕ್ಕೆ ಒಳಗಾಗಿರುವುದು ಅ... ದೊರೆಯಬೇಕಾದ ಪಡಿತರ ಕಾರ್ಡುಗಳು ಮಾತ್ರ ಶ್ರೀಮಂತರ ಪಾಲಾಗುವುದು ಬ... ಅವುಗಳ ಬಣ್ಣ ಬದಲಾಯಿಸಿ, ಅವುಗಳನ್ನು ಶ್ರೀಮಂತರಿಗೆ ನೀಡುವ ಹುನ್ನಾರ ನಡೆ... ಯಶಸ್ವಿ ಹಂತಕ್ಕೆ ಕೊಂಡೊ...


ಧರಣಿ ನಿರತರನ್ನು ಉದ್ದೇಶಿಸಿ ವಿ.ಪಿ. ಕುಲಕರ್ಣಿ ಮತ್ತು ಗೈಬು ಖಾನ್

ನೀತಿಗೆ ಧಿಕ್ಕಾರ' ಎಂಬ ಮುಗಿಲು ಮುಟ್ಟುವ ಘೋಷಣೆಗಳೊಂದಿಗೆ, ಸಹಸ್ರಾರು ಜನರು ರಾಮದುರ್ಗದ ತಹಶೀಲ್ದಾರ ಕಛೇರಿಗೆ ನವೆಂಬರ್ 11 ರಂದು ಮುತ್ತಿಗೆ ಹಾಕುವುದರೊಂದಿಗೆ ಅಕ್ಟೋಬರ್ 27 ರಿಂದ ಸತತ 15 ದಿನಗಳಿಂದ ನಡೆದಿದ್ದ ಚಳುವಳಿಯ ಅಂತಿಮ ಘಟ್ಟ ತಲುಪಿತ್ತು.

ಜನರಿಂದ ತುಂಬಿ ತುಳುಕುತ್ತಿದ್ದ ತಹಶೀಲ್ದಾರ ಕಛೇರಿಯ ಆವರಣವನ್ನು ಪ್ರವೇಶಿಸಲು ಪ್ರಯಾಸಪಟ್ಟು ಒಳಗಡೆ ಬಂದ ರಾಮದುರ್ಗ ಶಾಸಕರು ಎಂಟು ದಿನಗಳಲ್ಲಿ ಬಿ.ಪಿ.ಎಲ್. ಎರಡೂ ಪಟ್ಟಿಗಳ ಪರಿಶೀಲನೆ ನಡೆಸಿ ಪಟ್ಟಿಗಳಲ್ಲಿ ಸೇರದಿರುವ ಅರ್ಹ ಜನರ ಹೆಸರುಗಳನ್ನು ಒಳಗೊಂಡು ಅಂತಿಮಪಟ್ಟಿ ಸಿದ್ಧಪಡಿಸಿ, ಡಿಸೆಂಬರ್ ಕೋಟಾ ಪೂರೈಸಲಾಗುವುದು ಎಂದು ಘೋಷಣೆ ಮಾಡಿದಾಗ ರಾಮದುರ್ಗದಲ್ಲಿ ಹಳದಿ ಕಾರ್ಡಿಗಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ನಡೆದ ಚಳುವಳಿ ತಾರ್ಕಿಕ ಅಂತ್ಯಕಂಡಿತು.

ಸಮರ ಸಿದ್ಧತೆ:

ರಾಮದುರ್ಗದಲ್ಲಿ ಮೊದಲ ಬಿ.ಪಿ.ಎಲ್ (ಬಡತನ ರೇಖೆ ಕೆಳಗಿನವರ) ಪಟ್ಟಿ 9 ಸಾವಿರ ಜನರ ಹೆಸರುಗಳನ್ನು ಒಳಗೊಂಡಿದೆ. ಎರಡನೇ ಬಿಪಿಎಲ್ ಪಟ್ಟಿ ಪ್ರಕಾರ 20 ಸಾವಿರ ಜನರಿದ್ದಾರೆ. ಕಳೆದ ವರ್ಷ ಬಿಪಿಎಲ್ ಮೊದಲ ಪಟ್ಟಿಯ ಫಲಾನುಭವಿಗಳಿಗೆ ಮಾತ್ರ ಪಡಿತರ ಹಂಚಲಿರುವುದಾಗಿ ಘೋಷಣೆ ಮಾಡಲಾಗಿತ್ತು.

ಬಿಪಿಎಲ್ ಮೊದಲ ಪಟ್ಟಿಯನ್ನು ಪ್ರತಿ ಹಳ್ಳಿಗೆ ಭೇಟಿ ಮಾಡಿ ಸರ್ವೆ ನಡೆಸಿ ತಯಾರಿಸಿದ್ದಲ್ಲ, 1997-98 ರಲ್ಲಿ ಗ್ರಾಮ ಪಂಚಾಯತ್‌ನವರು ತಯಾರಿಸಿದ ಐಆರ್‌ಡಿಪಿ(IRDP) ಫಲಾನುಭವಿಗಳ ಪಟ್ಟಿಯಾಗಿತ್ತು.

ತಾಲೂಕಿನಲ್ಲಿ ಸೂಕ್ತ ಸರ್ವೆ ನಡೆಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಒತ್ತಾಯಿಸಿ ತಾಲೂಕಿನ 103 ಹಳ್ಳಿಗಳಲ್ಲಿ ಪ್ರಚಾರ ನಡೆಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ತಾಲೂಕಿನಾದ್ಯಂತ ಸುಮಾರು 12 ಕೇಂದ್ರಗಳಲ್ಲಿ ವಾರದ ಸಂತೆ ನಡೆಯುತ್ತಿದೆ. ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ನಾಲ್ಕು ತಂಡಗಳಲ್ಲಿ 12 ಸಂತೆ ನಡೆಯುವ ಸ್ಥಳಗಳಿಗೆ ಹೋಗಿ 10 ಸಾವಿರ ಕರಪತ್ರಗಳನ್ನು ಹಂಚಿದರು. ಎಲ್ಲಾ ಸಂತೆಗಳಲ್ಲಿ ಪುಟ್ಟ-ಪುಟ್ಟ ಸಭೆಗಳೇ ನಡೆದವು. ಸದ್ಯ ಗ್ರಾಮಗಳಲ್ಲಿ ಎರಡು ರೀತಿಯ ಕಾರ್ಡು (ಕೇಸರಿ ಹಾಗೂ ಹಸಿರು) ಗಳಿವೆ. **ಕೇಸರಿ ಕಾರ್ಡುಗಳಿಗೆ ಹಂಚುವ ಆಹಾರ ಧಾನ್ಯ ಹಾಗೂ ಬೆಲೆ ವಿವರ ಈ ರೀತಿ ಇದೆ.**

ಅಕ್ಕಿ 8 ಕೆ.ಜಿ. ಪ್ರತಿ ಕೆ.ಜಿ. ಗೆ ಬೆಲೆ 12.32; ಗೋಧಿ 5 ಕೆ.ಜಿ.ಗೆ.ಪ್ರತಿ ಕೆ.ಜಿ.ಗೆ ಬೆಲೆ ರೂ.6.70, ಸಕ್ಕರೆ 2 ಕೆ.ಜಿ. ಪ್ರತಿ ಕೆ.ಜಿ.ಗೆ ಬೆಲೆ 13.25. ಚಿಮಣಿ ಎಣ್ಣೆ 4 ಲೀಟರ್. ಪ್ರತಿ ಲೀ. 8.40. **ಹಸಿರು ಕಾರ್ಡುಗಳಿಗೆ ಹಂಚುವ ಆಹಾರಧಾನ್ಯ ಹಾಗೂ ಬೆಲೆ ವಿವರ ಈ ರೀತಿ ಇದೆ -**

ಅಕ್ಕಿ 15 ಕೆ.ಜಿ. ಪ್ರತಿ ಕೆಜಿಗೆ ಬೆಲೆ ರೂ. 6.15; ಗೋಧಿ 5 ಕೆ.ಜಿ., ಪ್ರತಿ ಕೆ.ಜಿ.ಗೆ 4.65; ಸಕ್ಕರೆ 2 ಕೆ.ಜಿ., ಪ್ರತಿ ಕೆ.ಜಿ.ಗೆ ರೂ. 13.25; ಚಿ.ಎಣ್ಣೆ 4 ಲೀ. ಪ್ರತಿ ಲೀ. 8.40

ಈ ಕಾರ್ಡುಗಳನ್ನು ಸರಿಯಾಗಿ ಸಮೀಕ್ಷೆ ನಡೆಸಿ ನೀಡಿಲ್ಲ. ಒಂದೇ ಕುಟುಂಬದಲ್ಲಿ 3-4 ಕಾರ್ಡು ಇವೆ. ಕಡುಬಡವರ ಬದಲಿಗೆ ಇದ್ದುಳ್ಳವರ ಕುಟುಂಬಗಳಿಗೆ ಹಸಿರು ಕಾರ್ಡು ಇರುವ ಅನೇಕ ಉದಾಹರಣೆಗಳಿವೆ.

ಗ್ರಾಮಾಂತರ ಪ್ರದೇಶದ ಕಡುಬಡವರಿಗೆ ಹಳದಿ ಕಾರ್ಡು ದೊರೆತರೆ ಒಂದು ಪುಟ್ಟ ಕುಟುಂಬ ಕಡಿಮೆ ದರದಲ್ಲಿ ಆಹಾರ ಧಾನ್ಯ ಪಡೆದು ತಿಂಗಳಲ್ಲಿ ಹದಿನೈದು ದಿನಗಳಾದರೂ ನೆಮ್ಮದಿಯಿಂದಿರಲು ಸಾಧ್ಯ ಎಂಬ ವಿವರಣೆ ಕರಪತ್ರದ ಮೂಲಕ ನೀಡಲಾಯಿತು. **ಹಳದಿ ಕಾರ್ಡುಗಳಿಗೆ ನೀಡುವ ಆಹಾರ ಧಾನ್ಯ ಹಾಗೂ ಬೆಲೆಗಳ ವಿವರ ಈ ರೀತಿ ಇದೆ.**

ಅಕ್ಕಿ 8 ಕೆ.ಜಿ. ಪ್ರತಿ ಕೆ.ಜಿ.ಗೆ ಬೆಲೆ 3.50. ಗೋಧಿ 5 ಕೆ.ಜಿ. ಪ್ರತಿ ಕೆ.ಜಿ.ಗೆ ಬೆಲೆ 2.50 ಸಕ್ಕರೆ 2 ಕೆ.ಜಿ. ಪ್ರತಿ ಕೆ.ಜಿ.ಗೆ ಬೆಲೆ ರೂ. 13.25. ಚಿ.ಎಣ್ಣೆ ಇಲ್ಲ.

ಅರ್ಹ ಬಡವರಿಗೆ ಹಳದಿ ಕಾರ್ಡು ತಕ್ಷಣ ಒದಗಿಸಬೇಕೆನ್ನುವ ಘೋಷಣೆ ತಾಲೂಕಿನ ಬಡ ಕುಟುಂಬಗಳನ್ನು ಮುಖ್ಯವಾಗಿ ಮಹಿಳೆಯರನ್ನು ಆಕರ್ಷಿಸಿತು. ಜೊತೆಗೆ ಪಕ್ಷದ ಪ್ರಭಾವ ಇರುವ ತುರುನೂರು ಗ್ರಾಮ ಪಂಚಾಯತ್(ಈ ಪಂಚಾಯತ್‌ನ ಒಟ್ಟು 11 ಸ್ಥಾನಗಳಲ್ಲಿ ನಮ್ಮ ಪಕ್ಷದ ಹಿತೈಷಿಗಳು 6 ಸ್ಥಾನಗಳಿಗೆ ಆಯ್ಕೆಯಾಗಿದ್ದಾರೆ). ಪ್ರದೇಶದ ಭಾಗ್ಯನಗರ, ಶ್ರೀಪತಿನಗರ ಪ್ರದೇಶಗಳಲ್ಲಿ ರೇಷನ್ ಕಾರ್ಡುಗಳಿಗಾಗಿ 4-6 ವರ್ಷಗಳಿಂದ ನಡೆದಿದ್ದ ಯಶಸ್ವಿ ಹೋರಾಟದ ನೇತೃತ್ವ ವಹಿಸಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಹಳದಿ ಕಾರ್ಡುಗಳನ್ನು ಕೊಡಿಸಲು ಸಮರ್ಥವಾಗಿದೆ ಎಂಬ ಭಾವನೆಯೂ ತಾಲೂಕಿನಲ್ಲಿ ಕೆಲವೆಡೆ ದಟ್ಟವಾಗಿ ಹರಡಲು ಆರಂಭವಾಗಿತ್ತು.

10.2.2000 ರಂದು ಖೊಟ್ಟಿ ಬಿಪಿಎಲ್ ಪಟ್ಟಿಯನ್ನು ಸರಿಪಡಿಸಿ ಅರ್ಹರಿಗೆ ಕಾರ್ಡು ನೀಡಲು ಒತ್ತಾಯಿಸಿ ನಡೆದ ಪ್ರತಿಭಟನೆಯಲ್ಲಿ ಸುಮಾರು 500 ಜನ ಪಾಲ್ಗೊಂಡರು. ಮುಂದೆ ನಡೆಯಲಿದ್ದ ಅಭೂತಪೂರ್ವ ಚಳುವಳಿಗೆ ಈ ಮೆರವಣಿಗೆ ನಾಂದಿಯಾಯಿತು.

ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಹೋರಾಟ ರೂಪಿಸಲು ಪಕ್ಷದ ಕಮಿಟಿಗಳಲ್ಲಿ ತೀರ್ಮಾನಿಸಲಾಯಿತು. ಪ್ರತಿಶಾಖೆಯ ಸದಸ್ಯರೂ ಶ್ರಮವಹಿಸುವಂತೆ ಮನದಟ್ಟು ಮಾಡಿಕೊಡಲಾಯಿತು.

ಸೆಪ್ಟೆಂಬರ್ ಕೊನೆಯವಾರದಲ್ಲಿ ಕೇಂದ್ರದ ಆರ್ಥಿಕ ನೀತಿಯ ವಿರುದ್ಧದ ಹೋರಾಟದಲ್ಲಿ ರೇಷನ್ ಸಮಸ್ಯೆಗೆ ಹೆಚ್ಚು ಒತ್ತು ನೀಡಬೇಕೆಂದು ಅಭಿಪ್ರಾಯ ಪಡಲಾಯಿತು.

ಪಕ್ಷದ ಪ್ರಾದೇಶಿಕ ಸಮಿತಿಯ ಸದಸ್ಯರು ಹಾಗೂ ಸಾಮಾನ್ಯ ಸದಸ್ಯರು ಮತ್ತೆ ಹಳ್ಳಿಗಳಿಗೆ ತೆರಳಿ ಸೆಪ್ಟೆಂಬರ್ 27 ರಂದು ಬೃಹತ್ ಪ್ರಮಾಣದಲ್ಲಿ ಜನರು ರಾಮದುರ್ಗದಲ್ಲಿ ಮತಪ್ರದರ್ಶನ ನಡೆಸಲು ಆಗಮಿಸುವಂತೆ ಮನವಿ ಮಾಡಿದರು. ಮತ್ತೆ 10 ಸಾವಿರ ಕರಪತ್ರಗಳನ್ನು ಹಂಚಲಾಯಿತು.

ಮನೆ ಮನ ಮುಟ್ಟಿದ ಪ್ರಚಾರ:

ಸೆಪ್ಟೆಂಬರ್ 27 ಚಳುವಳಿಯ ಕುರಿತು ಹಳ್ಳಿ ಹಳ್ಳಿಗಳಲ್ಲಿ ಚರ್ಚೆಯಾಗತೊಡಗಿತು. ಅಂದು ಸುಮಾರು 2 ಸಾವಿರ ಜನರು ಪಾಲ್ಗೊಂಡ ಬೃಹತ್ ಮೆರವಣಿಗೆ - ನಡೆಯಿತು. ಈ ಕೂಡಲೇ ಹಳದಿ ಕಾರ್ಡು ವಿತರಿಸದಿದ್ದರೆ ಅಕ್ಟೋಬರ್ 15 ರಂದು ಸಾಮೂಹಿಕ ಧರಣಾ ಸತ್ಯಾಗ್ರಹ ಆರಂಭಿಸುವುದಾಗಿ ಸರಕಾರಕ್ಕೆ ಎಚ್ಚರಿಕೆ ನೀಡಲಾಯಿತು. ಇದು ಚಳುವಳಿಯ ಯಶಸ್ವಿ ಎರಡನೆಯ ಘಟ್ಟವಾಗಿತ್ತು.

ರಾಮದುರ್ಗದ ತಹಶೀಲ್ದಾರರು ಪಕ್ಷಕ್ಕೆ ಪತ್ರ ಬರೆದು ಸರಕಾರದೊಟ್ಟಿಗೆ ಪತ್ರ ವ್ಯವಹಾರ ಮಾಡಲಾಗುತ್ತಿದ್ದು ಅಕ್ಟೋಬರ್ 15 ರಂದು ಆರಂಭವಾಗಲಿರುವ ಧರಣಾ ಸತ್ಯಾಗ್ರಹವನ್ನು ಮುಂದೆ ಹಾಕಬೇಕೆಂದು ಕೋರಿಕೊಂಡರು. ಜೊತೆಗೆ ಸದ್ಯಕ್ಕೆ ಬಿಪಿಎಲ್ ಪಟ್ಟಿಯ ಅನ್ವಯ ರೇಷನ್ ವಿತರಣೆ ಮಾಡಬಾರದಾಗಿ ಸರಕಾರ ತಿಳಿಸಿರುವುದರಿಂದ ತಾಲೂಕು ಮಟ್ಟದಲ್ಲಿ ನಾವು ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ತೋಡಿಕೊಂಡಿದ್ದರು.

ಈ ಚಳುವಳಿಯು ರಾಜ್ಯ ಸರಕಾರದ ಧೋರಣೆಯ ವಿರುದ್ಧವೇ ನಡೆಯುತ್ತಿದೆ. ಸ್ಥಳೀಯ ಆಡಳಿತದ ವಿರುದ್ಧವಲ್ಲ ಎಂದು ತಹಶೀಲ್ದಾರರಿಗೆ ಮನದಟ್ಟು ಮಾಡಿಕೊಡಲಾಯಿತು. ಜಿಲ್ಲೆಯ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ

ಇತಿಹಾಸ ನೆನಪು

ರಾಮದುರ್ಗದಲ್ಲಿ ೧೯೩೯ ರಲ್ಲಿ ಸ್ಥಳೀಯ ರಾಜನ ವಿರುದ್ಧ ಬಂಡಾಯ ನಡೆದದ್ದು ಇತಿಹಾಸದಲ್ಲಿ ದಾಖಲಿದೆ. ಏಪ್ರಿಲ್ ೭, ೧೯೩೯ ರಂದು ಸುಮಾರು ೧೦ ಸಾವಿರ ಜನ ಮೆರವಣಿಗೆಯಲ್ಲಿ ಬಂದು ಜೈಲನ್ನು ಸುಟ್ಟುಹಾಕಿ ಹೋರಾಟದ ಮುಂದಾಳುಗಳನ್ನು ಜೈಲಿಂದ ಬಿಡುಗಡೆ ಮಾಡಿದ್ದರು. ಈ ಘಟನೆ ನಂತರ ದೊಡ್ಡ ಪ್ರಮಾಣದಲ್ಲಿ ಜನ ಪಾಲ್ಗೊಂಡಿದ್ದು ಇಂದೇ ಎಂದು ಹಿರಿಯರು ನೆನಪಿಸಿಕೊಂಡರು.

ಭುಗಿಲೆದ್ದ...

ಬಿಜೆಪಿಯವ...

ತಾಲೂಕಿನ ಹೊಸಕೋಟೆ ಗ್ರಾಮವು ಬಿ... ಹಳದಿ ಕಾರ್ಡಿಗಾಗಿ ಒತ್ತಾಯಿಸಲು ಸಿದ್ಧ... ನೀತಿಯನ್ನು ಬಯಲಿಗೆಳೆಯುವ ಸುಮಾರು... ತಂಡವು ಈ ಕರಪತ್ರವನ್ನು ಹಾಗೂ ಪಕ್ಷ... ಆಡಳಿತ; ದಿವಾಳಿಯತ್ತ ಭಾರತ'ವನ್ನು ... ಸರ್ಕಾರಕ್ಕೆ ಧಿಕ್ಕಾರ ಎಂಬ ಒಕ್ಕಣೆ ಇರು... ನೀತಿಯನ್ನು ಟೀಕಿಸುವ ಕಿರುಪುಸ್ತಕವು ಹೊ... ಹೊಸಕೋಟೆಗೆ ತೆರಳಿದ್ದ ಪಕ್ಷದ ಇಬ್ಬರು ಕಾ... ಕಸಿದುಕೊಂಡು ಬೆದರಿಕೆ ಒಡ್ಡಿದರು.

ಈ ಬೆದರಿಕೆಗೆ ಬಗ್ಗಕೂಡದು ಎಂದು ... ಮರುದಿನ ಮತ್ತೆ ಹೊಸಕೋಟೆಗೆ ತೆರ... ತಡೆಯುವುದಿದ್ದರೆ ಬನ್ನಿ' ಎಂದು ಸವಾಲು ... ನಮ್ಮನ್ನು ತಡೆಯುವ ಧೈರ್ಯ ಮಾಡ... ಸಾಧ್ಯವಾಯಿತು.


ಮೆರವಣಿಗೆಯ ದೃಶ್ಯ

ಭಂದ ಜನಪ್ರವಾಹ

ವಸ್ಥೆಯನ್ನೇ ಕಳಚಿಹಾಕಲು ಹೊರಟಿರುವಾಗ, ವಿಶ್ವಬ್ಯಾಂಕಿಗೆ ತನ್ನ ನಿಷ್ಠೆಯನ್ನು ಹಳದಿ ಕಾರ್ಡುಗಳನ್ನು ವಿತರಣೆ ಮಾಡಲು ಹೊರಟಾಗ ರೇಷನ್ ಆಹಾರ ಜವಾಗಿದೆ. ರಾಜ್ಯದಲ್ಲಿ ಸರ್ಕಾರಗಳು ಬದಲಾಗುತ್ತಾ ಬಂದಿದ್ದರೂ ಬಡವರಿಗೆ . ಈ ಸಲ ಪಡಿತರ ಕಾರ್ಡುಗಳ ಸಂಖ್ಯೆಯನ್ನು ಅರ್ಧದಷ್ಟು ಕಡಮೆ ಮಾಡಿ, ಗಾಂವ ಜಿಲ್ಲೆಯ ರಾಮದುರ್ಗ ತಾಲೂಕಿನಲ್ಲಿ ಬುಗಿಲೆದ್ದ ಅಸಂತೃಪ್ತಿಯನ್ನು ಒಂದು ಳಿಯ ವೃತ್ತಾಂತ ಇಲ್ಲಿದೆ.

ವಿ.ಪಿ. ಕುಲಕರ್ಣಿ

ಳುವಳಿ

ಉಪನಿರ್ದೇಶಕರೂ ಚಳುವಳಿ ಶ್ರೇಷ್ಠ ಎಂದು ಕೋರಿಕೊಂಡಿದ್ದರು.

ಸರಣಿ ಸಾಮೂಹಿಕ ಸತ್ಯಾಗ್ರಹಗಳು

ಅಕ್ಟೋಬರ್ 29 ರಿಂದ ಧರಣಾ ಸತ್ಯಾಗ್ರಹವನ್ನು ಆರಂಭಿಸಲು ತೀರ್ಮಾನಿಸಲಾಯಿತು. ತಾಲೂಕಿನಲ್ಲಿ 35 ಗ್ರಾಮ ಪಂಚಾಯತಗಳಿವೆ. ಇವುಗಳ ಪಟ್ಟಿ ಮಾಡಿ ಪ್ರತಿದಿನ ಮೂರು ಪಂಚಾಯತಗಳ ವ್ಯಾಪ್ತಿಯ ಬಡಜನರನ್ನು ಧರಣಾ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಿಸಲು ಅಂದಾಜು ಮಾಡಲಾಯಿತು. ಪ್ರತಿನಿತ್ಯ ನೂರಾರು ಜನರು ಧರಣಾ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲಾರಂಭಿಸಿದರು.

ಪ್ರತಿದಿನ ಮಧ್ಯಾಹ್ನ 12 ಗಂಟೆಗೆ ನಗರದ ಮಧ್ಯದಲ್ಲಿರುವ ಪಕ್ಷದ ಕಛೇರಿಯಿಂದ ಸತ್ಯಾಗ್ರಹಿಗಳು ಮೆರವಣಿಗೆಯಲ್ಲಿ ಹೊರಟು ತಹಶೀಲ್ದಾರ ಕಚೇರಿಗೆ ತೆರಳಿ ಧರಣಾ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುತ್ತಿದ್ದರು, ಮಧ್ಯಾಹ್ನ 3 ರ ವರೆಗೆ ಧರಣಾ ನಡೆಸಿ ಪ್ರತಿನಿತ್ಯ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಗುತ್ತಿತ್ತು. ದಿನದಿಂದ ದಿನಕ್ಕೆ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುತ್ತಿದ್ದವರ ಸಂಖ್ಯೆ ಬೆಳೆಯತೊಡಗಿತು.

ಸುಮಾರು 8-10 ಕಳೆದಿದ್ದರೂ ಸರಕಾರದಿಂದ ನಿಖರ ಉತ್ತರ ದೊರೆಯದ ಕಾರಣ ಆಮರಣ ಉಪವಾಸ ಕುಳಿತುಕೊಳ್ಳುವ ನಿರ್ಧಾರ ಕೈಗೊಳ್ಳಲಾಯಿತು. ಆರೋಗ್ಯದ ದೃಷ್ಟಿಯಿಂದ ಪಕ್ಷದ ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿ ವಿ.ಪಿ.ಕುಲಕರ್ಣಿಯವರು ಆಮರಣ ಸತ್ಯಾಗ್ರಹ ಕೈಗೊಳ್ಳುವ ಬಗ್ಗೆ ಪಕ್ಷದ ಸದಸ್ಯರಲ್ಲಿ ಆತಂಕವಿತ್ತು. ಹಳದಿ ಕಾರ್ಡು ನೀಡಬೇಕೆಂಬ ಆಡಳಿತಾತ್ಮಕ ನಿರ್ಧಾರ ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಇದು ರಾಜಕೀಯ ನಿರ್ಧಾರವಾಗಬೇಕಾದ್ದರಿಂದ, ಒತ್ತಡ ತಂತ್ರವಾಗಿ ಆಮರಣ ಉಪವಾಸ ಕೈಗೊಳ್ಳಬೇಕಾದ ಅವಶ್ಯಕತೆ ಇತ್ತು. 12.11.2001 ರಿಂದ ಆಮರಣ ಉಪವಾಸ ಆರಂಭಿಸಲಾಗುವುದೆಂದು ಸರಕಾರಕ್ಕೆ ನೋಟೀಸು ಕೊಡಲಾಯಿತು. ಹಾಗೂ ಪ್ರತಿದಿನದ ಧರಣಾ ಸತ್ಯಾಗ್ರಹ ಸಂದರ್ಭದಲ್ಲಿ ಈ ಬಗ್ಗೆ ಪ್ರಚಾರ ಮಾಡಲಾಯಿತು.

ರಾಮದುರ್ಗ ಶಾಸಕ ಶ್ರೀಎಸ್.ವಿ.ಪಾಟೀಲ ಅವರು ಬೆಂಗಳೂರಿನಲ್ಲಿ ಇದ್ದಾಗಲೇ ಸಚಿವ ಶ್ರೀ ಇನಾಮದಾರರೊಟ್ಟಿಗೆ ಪಟ್ಟು ಹಿಡಿದು ಚರ್ಚಿಸಿ ಒಂದು ಅಭಿಪ್ರಾಯಕ್ಕೆ ಬಂದರು, 'ಕಾರ್ಡು ಕೊಡಲು ಒಪ್ಪಿಕೊಳ್ಳಲಾಗಿದೆ, ಉಪವಾಸ ಸತ್ಯಾಗ್ರಹ ಬೇಡ' ಎಂದು ಸಂದೇಶ ಕಳಿಸಿದರು. ಶಾಸಕರು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವುದನ್ನು ಮನಗಂಡು ಆಮರಣ ಉಪವಾಸ ಸತ್ಯಾಗ್ರಹವನ್ನು ಕೈಬಿಡಲಾಯಿತು.

ಅವಿಸ್ಮರಣೀಯ ಮೆರವಣಿಗೆ:

ನವೆಂಬರ್ 13 ಒಂದು ಅವಿಸ್ಮರಣೀಯ ದಿನ. ತಹಶೀಲ್ದಾರರ ಕಛೇರಿ ಮುತ್ತಿಗೆಗೆ ಕರೆ ನೀಡಿ ಮೂರು ದಿನ ಹಗಲೂ ರಾತ್ರಿ ತಾಲೂಕಿನ ಶೇ 90 ರಷ್ಟು ಹಳ್ಳಿಗಳಿಗೆ ತೆರಳಿ ವ್ಯಾಪಕ ಪ್ರಚಾರವನ್ನು ಕೈಗೊಳ್ಳಲಾಯಿತು.

ಸುಮಾರು 2000 ಜನ ಸೇರಬಹುದೆಂದು ಅಂದಾಜು ಮಾಡಲಾಗಿತ್ತು. ಆದರೆ ಎಲ್ಲಾ ನಿರೀಕ್ಷೆಗಳನ್ನು ಮೀರಿ ಸಾವಿರಾರು ಜನ ನಗರದಲ್ಲಿ ಸೇರಿದರು. ನೂರಾರು ಕೆಂಪು ಬಾವುಟ ಹಿಡಿದು ಬೃಹತ್ ಮೆರವಣಿಗೆ ಹೊರಟಿತು. 1986-87 ರಂದು ಆರಂಭವಾಗಿದ್ದ ಒಂದು ಪುಟ್ಟ ಪ್ರಯತ್ನ ಈ ಮಟ್ಟದಲ್ಲಿ ಬೆಳೆದದ್ದು ಕಂಡು ರಾಮದುರ್ಗದ ದೊಡ್ಡವರು ಅದ್ಭುತ ಕಂಡವರಂತೆ ಈ ಬೃಹತ್ ಮೆರವಣಿಗೆಯನ್ನು ಕಂಡು ಬೆರಗಾದರು. ಸರಕಾರಿ ಬಸ್ಸುಗಳ ಸಮೇತ ಎಲ್ಲಾ ವಾಹನ ಸಂಚಾರ ಸ್ತಬ್ಧವಾಯಿತು. ಎಲ್ಲರೂ ತಮ್ಮ-ತಮ್ಮ ವ್ಯವಹಾರ ಬದಿಗಿಟ್ಟು ಸಾಲುಗಟ್ಟಿ ನಿಂತರು. ಹಿತೈಷಿಗಳು ಸಹಾನುಭೂತಿವುಳ್ಳವರ ಕಂಗಳಲ್ಲಿ ಪ್ರಶಂಸೆಯ ಪ್ರತಿಬಿಂಬ ಮೂಡುವಂತಾಯಿತು. ದೊಡ್ಡವರಿಗೂ ಮೆಚ್ಚುಗೆ ವ್ಯಕ್ತಪಡಿಸದೆ ಇರಲಾಗಲಿಲ್ಲ. ಮೆರವಣಿಗೆಯಲ್ಲಿ ಸುಮಾರು 5000 ಜನ ಪಾಲ್ಗೊಂಡಿದ್ದರು. ಪತ್ರಿಕೆಗಳ ಅಂದಾಜು 4000.

ತಹಶೀಲ್ದಾರರ ಕಛೇರಿಗೆ ತೆರಳಿದ ಮೆರವಣಿಗೆ ಇಡೀ ಆವರಣ ತುಂಬಿಕೊಂಡಿತು. ಅನೇಕರಿಗೆ ಒಳಗೆ ಬರುವುದು ಸಾಧ್ಯವಾಗಲಿಲ್ಲ. ಒಂದು ಸ್ಪಷ್ಟ ನಿರ್ಣಯ ಬರುವವರೆಗೆ ಇಲ್ಲಿಂದ ತೆರಳುವುದೇ ಇಲ್ಲ ಎಂದು ಆರಂಭದಲ್ಲೇ ಘೋಷಿಸಲಾಯಿತು. ಕ್ರಾಂತಿಗೀತೆಗಳು ಮೊಳಗಿದವು. ಘೋಷಣೆಗಳು ಮುಗಿಲು ಮುಟ್ಟಿದವು.

ಶಾಸಕ ಶ್ರೀ ಎಸ್.ವಿ.ಪಾಟೀಲರು ಸಾಹಸಪಟ್ಟು ತಹಶೀಲ್ದಾರ ಕಛೇರಿಯ ಆವರಣದೊಳಗೆ ನುಸುಳಿ ಬಂದರು. ರಾಮದುರ್ಗದ ಅರ್ಹ ಫಲಾನುಭವಿಗಳಿಗೆ ಕಾರ್ಡುಗಳನ್ನು ತಕ್ಷಣವೇ ವಿತರಿಸಿ ರೇಷನ್ ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು. ಚಳುವಳಿ ಯಶಸ್ವಿಯಾದಂತಾಯಿತು.

ಸ್ಥೆ ಬೆದರಿಕೆ

ರ್ಯಕರ್ತರು ಹೆಚ್ಚಾಗಿರುವ ಒಂದು ಗ್ರಾಮ, ರಪತ್ರಗಳ ಜೊತೆಗೆ ಕೇಂದ್ರ ಸರ್ಕಾರದ ಕರಪತ್ರಗಳನ್ನು ಹಂಚಲಾಗುತ್ತಿತ್ತು. ಒಂದು ಮಿತಿ ಒದಗಿಸಿದ ಕಿರು ಪುಸ್ತಕ 'ವಂಚಕರ ಗ್ರಾಮದಲ್ಲೂ ಹಂಚಿತು. ವೀಚ ಕೇಂದ್ರ ಗಳು ಹಾಗೂ ವಾಜಪೇಯಿ ಸರಕಾರದ ಬಿಜೆಪಿಯ ಕಾರ್ಯಕರ್ತರನ್ನು ಕೆರಳಿಸಿತು. ಂದ ಪುಸ್ತಕಗಳನ್ನು ಹಾಗೂ ಕರಪತ್ರಗಳನ್ನು

ಮಾಡಿ ಪಕ್ಷದ ಪ್ರಮುಖ ಸಂಗಾತಿಗಳು ಕರಪತ್ರಗಳನ್ನು ಹಂಚೇ ತೀರುತ್ತೇವೆ, ಗಳನ್ನು ಹಂಚಲಾಯಿತು. ಬಿಜೆಪಿಯವರು ರಿಕೆಯನ್ನು ಸಮರ್ಥವಾಗಿ ಎದುರಿಸಲು

ದಣಿವಣಿಯದ ಅಹೋರಾತ್ರ ದುಡಿತ: ಜನಮನ ಗೆದ್ದವರು

ಈ ಚಳುವಳಿ ಸಂದರ್ಭದಲ್ಲಿ ನೂರಾರು ಜನರೊಂದಿಗೆ ದಣಿವರಿಯದೇ ಪಕ್ಷದ ಕಾರ್ಯಕರ್ತರು ಸಂವಾದ ನಡೆಸಿದರು. ಸುಮಾರು ಒಂದು ತಿಂಗಳು ಕೇವಲ ಒಂದು ಹೊತ್ತು ಮಾತ್ರ ಊಟ ಮಾಡಿದರು. ಕೇವಲ ಮಂಡಕ್ಕಿ ತಿಂದು ಕೆಲಸ ಮಾಡಿದರು.

ಈ ಸಂದರ್ಭದಲ್ಲಿ ಮರೆಯಲಾಗದ ಪಾತ್ರ ವಹಿಸಿದವರೆಂದರೆ ತಾಲೂಕಿನ ಪಂಚಾಯತ ನೌಕರರು, ಗ್ರಾಮ ಪಂಚಾಯತ ಮಟ್ಟದಲ್ಲಿ ಕರಪತ್ರ ಹಂಚುವುದು, ತಮ್ಮ ಕಾರ್ಯಕರ್ತರೊಟ್ಟಿಗೆ ಜನರನ್ನು ಕಾಣುವುದು, ತಿಳಿ ಹೇಳುವುದು - ಈ ರೀತಿ ಅವರ ಪಾತ್ರ ಅನನ್ಯವಾಗಿತ್ತು. ಪಂಚಾಯತ ನೌಕರರ ಸಂಘಟನೆ ಬಲಿಷ್ಟವಾದರೆ ಗ್ರಾಮಾಂತರ ಕರ್ನಾಟಕದಲ್ಲಿ ಜನಪರ ಸಂಘಟನೆಗಳಿಗೆ ನೆಲೆವು ದೊರಕುವುದು ಎಂಬ ತಿಳುವಳಿಕೆಯನ್ನು ಈ ಚಳುವಳಿ ಸಂದರ್ಭದಲ್ಲಿ ಪಂಚಾಯತ ನೌಕರರು ನಿಜವಾಗಿಸಿದರು. ಪಕ್ಷವು ಅವರನ್ನು ಅಭಿನಂದಿಸುತ್ತದೆ.


ಶಾಸಕ ಎಸ್.ವಿ.ಪಾಟೀಲರು ಈ ಸಂದರ್ಭದಲ್ಲಿ ಸಹಕರಿಸಿದ್ದು ಸ್ವಾಗತಾರ್ಹವಾಗಿದೆ. ಬಿ.ಪಿ.ಎಲ್. ಫಲಾನುಭವಿಗಳಿಗೆ ಇನ್ನೊಮ್ಮೆ ಸರ್ವೆ ಮಾಡದೆ ಸದ್ಯಕ್ಕೆ ಕಾರ್ಡು ನೀಡುವುದು ಸಾಧ್ಯವಿಲ್ಲ ಎಂಬ ರಾಜ್ಯ ಸರಕಾರದ ತೀರ್ಮಾನವನ್ನು ಕೈಬಿಟ್ಟು ಕನಿಷ್ಟ ರಾಮದುರ್ಗಕ್ಕೆ ಕಾರ್ಡು ನೀಡಲೇಬೇಕೆಂದು ಒತ್ತಡ ತಂದದ್ದು ಯಶಸ್ವಿಯಾಯಿತು.

ತುರನೂರು ಪಂಚಾಯತ ಅಧ್ಯಕ್ಷರಾದ ಶ್ರೀಮತಿ ದೇವಮ್ಮ ನಾವಿ ಹಾಗೂ ಸದಸ್ಯರಾದ ಶ್ರೀಮತಿ ಸಾವಿತ್ರಿ ಹರಪಳೇಕರ, ಜುಬೇದಾ ಬೈರಖದಾರ, ಪಕ್ಷದ ಪ್ರಾದೇಶಿಕ ಸಮಿತಿಯ ಸದಸ್ಯರಾದ ಗೈಬು, ನಾಗಪ್ಪ, ಪಡಿಯಪ್ಪ, ಬಾಬು ಹಾಗೂ ಇತರ ಪ್ರಮುಖ ಕಾರ್ಯಕರ್ತರಾದ ಸಿದ್ದಪ್ಪ, ಫಕ್ರು, ಹಣಮಂತ ಹೊಸಕೋಟೆ, ಹಣಮಂತ ಹವಳಕೋಟ, ಯುವ ಕಾರ್ಯಕರ್ತರಾದ ಶೆಟ್ಟೆಪ್ಪ, ಶಿವಾನಂದ, ಗುರುನಾಥ ಇನ್ನೂ ಅನೇಕರು ಒಂದು ತಿಂಗಳ ಅವಿರತ ಶ್ರಮದಿಂದ ದಣಿದಿದ್ದರೂ ಚಳುವಳಿಯ ಯಶಸ್ಸು ಅವರ ದಣಿವನ್ನು ಮರೆಯಿಸಿತ್ತು.

ಈ ಚಳುವಳಿಯು ಪಕ್ಷದ ಘನತೆಯನ್ನು ಹೆಚ್ಚಿಸಿದೆ. ಪಕ್ಷವನ್ನು ನೋಡುವ ಕಣ್ಣೋಟವೇ ಬದಲಿಯಾಗಿದೆ. ಅನೇಕರ ಪ್ರಶಂಸೆ ದೊರೆತಿದೆ. ಪತ್ರಿಕೆಗಳ ಸಹಕಾರವೂ ದೊರೆತಿದೆ. ಜೊತೆಗೆ ಪಕ್ಷದ ಹೊಣೆಗಾರಿಕೆಯೂ ಹೆಚ್ಚಿದೆ. ಜನರ ಸಂಕಷ್ಟಗಳ ಪರಿಹಾರಕ್ಕೆ ಹೋರಾಡುವ ನಮ್ಮ ಸಂಕಲ್ಪವನ್ನು ಇನ್ನಷ್ಟು ಬಲಗೊಳಿಸಿದೆ.

ಕೊನೆಯದಾಗಿ ಇಲ್ಲಿ ವರದಿ ಮಾಡಲೇಬೇಕಾದ ಘಟನೆಯೆಂದರೆ ೧೩.೧೧.೨೦೦೧ ರ ಬೃಹತ್ ಮೆರವಣಿಗೆ ಹಾಗೂ ಒಟ್ಟಾರೆ ಚಳುವಳಿಯನ್ನು ಪ್ರಶಂಸಿಸಿ ಹೊಸಕೋಟೆ ಗ್ರಾಮದ ಒಬ್ಬ ಮುಖಂಡ ಶ್ರೀ ಅಜಿತ್ ಒಂಟಗೋಡಿ ಪತ್ರವೊಂದನ್ನು ಬರೆದು ಪ್ರಶಂಸಿಸಿದ್ದಾರೆ. ಬಂದು ಭೇಟಿ ಮಾಡುವುದಾಗಿ ತಿಳಿಸಿದ್ದಾರೆ. ಹೊಸಕೋಟೆ ಗ್ರಾಮದಲ್ಲಿ ನಮಗಾದ ಪ್ರತಿರೋಧದ ಹಿನ್ನೆಲೆಯಲ್ಲಿ ಈ ಬೆಳವಣಿಗೆ ಮಹತ್ವದ್ದಾಗಿದೆ.

ಧರಣಿ ಸತ್ಯಾಗ್ರಹ



ರೈತರ ಸಮಾಧಿ ಮೇಲೆ ಕೃಷ್ಣರ ರ್‍ಯಾಲಿ

ಪುಟ 3 ರಿಂದ

ನಿಲುವುಗಳನ್ನು ಅರಿಯಬೇಕಿದೆ.

ತೆಂಗು, ತೊಗರಿ ಇತ್ಯಾದಿ ರೈತರ ಬೆಳೆಗಳನ್ನು ಖರೀದಿಸಿ, ಅವರ ಸಹಾಯಕ್ಕೆ ಬಾರದ ಸರ್ಕಾರ, ಬೆಂಗಳೂರಿನಲ್ಲಿ ವಿಶ್ವದ ಬಂಡವಾಳಗಾರರ ಸಮಾವೇಶ, ಐ.ಟಿ. ಮೇಳ ನಡೆಸಲು ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದೆ. ಬಡ ಜನತೆಗೆ ತಲುಪಬೇಕಿರುವ ಪಡಿತರದ ಮೇಲಿನ ಸಬ್ಸಿಡಿ ಕಡಿತಗೊಳಿಸುವ ದುರುದ್ದೇಶದಿಂದ, 63 ಲಕ್ಷದಷ್ಟಿದ್ದ, ಪಡಿತರ ಚೀಟಿದಾರರನ್ನು ಕೇವಲ 23 ಲಕ್ಷಕಷ್ಟೆ ಸೀಮಿತಗೊಳಿಸಿದೆ. ಬಡತನ ರೇಖೆಗಿಂತ ಕೆಳಗಿರುವವರ ಸರ್ವೆ (BPL Survey) ಹೆಸರಿನಲ್ಲಿ, 40 ಲಕ್ಷ ಪಡಿತರ ಚೀಟಿದಾರರನ್ನು ಪಡಿತರ (ರೇಷನ್) ವ್ಯವಸ್ಥೆಯಿಂದ ಹೊರಗಿಟ್ಟಿದೆ. ಈ ಕೃಷ್ಣ ಸರ್ಕಾರ ಆದರೆ ವಿದೇಶಿ ಕಂಪನಿಗಳಿಗೆ ಎಲ್ಲಾ ರೀತಿಯ ಸವಲತ್ತು, ಸಬ್ಸಿಡಿಗಳನ್ನು ನೀಡುತ್ತಾ, ಶೇಕಡಾ ನೂರಕ್ಕೆ ನೂರರಷ್ಟು ಲಾಭ ಗ್ಯಾರಂಟಿ ನೀಡಲು ಮುಂದಾಗಿದೆ.

ವಿದೇಶಿ ಬಹುರಾಷ್ಟ್ರೀಯ ಕೃಷಿ ಸಂಶೋಧನಾ ಕಂಪನಿಗಳಿಗೆ, ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (GKVK) ದಲ್ಲಿ ಬೈಯೋ ಟೆಕ್ನಾಲಜಿ ಪಾರ್ಕ್ ನಿರ್ಮಿಸಲು 100 ಎಕರೆ ಜಮೀನು ನೀಡಲು ಮುಂದಾದ ಸರ್ಕಾರ, ಅದರ ವಿರುದ್ಧ ಕೃಷಿ ವಿ.ವಿ.ಯ ವಿದ್ಯಾರ್ಥಿಗಳು, ಉಪನ್ಯಾಸಕರು ಹೋರಾಟ ನಡೆಸಿದಾಗ ಅವರ ಮೇಲೆ ಪೋಲೀಸರ ಲಾಠಿ ಪ್ರಹಾರ ನಡೆಸಿದೆ. ಸದ್ಯವಿರುವ ಕಾನೂನುಗಳಲ್ಲಿಯ ಇಂತಹ ಬರ್ಬರ ಪೋಲೀಸರ ದಾಳಿ ನಡೆಸುವ ರಾಜ್ಯ ಸರ್ಕಾರ ತನ್ನ ದಾಳಿಗಳನ್ನು ತೀವ್ರಗೊಳಿಸಿ ಜನತೆಯ ಚಳುವಳಿಗಳನ್ನು ಬಗ್ಗು ಬಡಿಯಲು ಕರ್ನಾಟಕ ಸಂಘಟಿತ ಅಪರಾಧ ನಿಗ್ರಹ ಕಾಯ್ದೆಯನ್ನು ಜಾರಿಗೆ ತರಲು ಮುಂದಾಗಿದೆ.

ಈ ರೀತಿ ತನ್ನ 2 ವರ್ಷದ ಆಡಳಿತದ ಕಾಲಾವಧಿಯಲ್ಲಿ ಎಂದಿಗೂ ರೈತರ ಸಂಕಷ್ಟಕ್ಕೆ ಕಾರಣೀಭೂತವಾಗಿರುವ ಕೇಂದ್ರದ ರೈತ ವಿರೋಧಿ ನೀತಿಗಳ ಬಗ್ಗೆ ಚಕಾರವೆತ್ತದ ಕೃಷ್ಣರ ಕಾಂಗ್ರೆಸ್ ಸರ್ಕಾರ 2 ಕೋಟಿ ಖರ್ಚು ಮಾಡಿ, ರೈತರ ಸಮಾಧಿಯ ಮೇಲೆ, ಚನ್ನಪಟ್ಟಣದಲ್ಲಿ ರೈತರ ಸಮಾವೇಶ ನಡೆಸಿದೆ. ಸಮಾವೇಶದಲ್ಲಿ ಮಾತನಾಡಿದ ಮಹನೀಯರು ಯಾರೊಬ್ಬರೂ ವಿ ನೀತಿಗಳ ಜಾರಿ, ರೈತರ ನೇಣು, ಸಾಲದ ಶೂಲ - ರೈತರ ಆತ್ಮಹತ್ಯೆ ಅಥವಾ ರೈತರ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಚಕಾರವೆತ್ತದಿರುವುದು, ರೈತರ ಸಮಸ್ಯೆಗಳ ಪರಿಹಾರಕ್ಕೆ ಈ ರ್‍ಯಾಲಿಯ ಕೊಡುಗೆ ಏನೆಂಬುದನ್ನು ತೋರುತ್ತದೆ.

- ಮಾರುತಿ ಮಾನ್ಪಡೆ

ಬಲಿಷ್ಟ ಕಾಂಗ್ರೆ ಎದುರಿಸಲು - ಬಿಜೆಪಿ ಶಕ್ತಿ ಕುಂದಿಸಲು

ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮ್ಮೇಳನ

ಬಳ್ಳಾರಿ ಜಿಲ್ಲೆಯಲ್ಲಿ ವೈಜ್ಞಾನಿಕ ಜಾಗತೀಕರಣ ಧಾಳಿ ಹೇಗಾಗುತ್ತಿದೆ ಎಲ್ಲಿ? ಕೋಮುವಾದದ ಆಟಗಳೇನು? ಎಂದು ವಿಶ್ಲೇಷಿಸಿದ ವರದಿ ನಿಮ್ಮೆದುರು.

ಬಳ್ಳಾರಿ ಜಿಲ್ಲೆಯಲ್ಲಿ ಬಲಗೊಂಡ ಕಾಂಗ್ರೆ - ಬೆಳೆದ ಬಿಜೆಪಿ

ಕಳೆದ ಸುಮಾರು 4 ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ ಪಕ್ಷವು ಬೆಳೆದು ಬಲಗೊಂಡಿರುವುದನ್ನು ಜನತಾದಳ ಒಡೆದು ಜನತಾದಳ (ಸಂಯುಕ್ತ) ಹಾಗೂ ಜನತಾದಳ (ಜಾತ್ಯಾತೀತ)ವಾಗಿ ದುರ್ಬಲಗೊಂಡಿರುವುದನ್ನು ಮತ್ತು ಜನತಾದಳ (ಸಂಯುಕ್ತ)ವು ಕೇಂದ್ರದ ಎನ್‌ಡಿಎ ಜೊತೆ ಸೇರಿ ಬಿಜೆಪಿಯೊಂದಿಗೆ ಕೈಜೋಡಿಸಿ ಮತ್ತಷ್ಟು ದುರ್ಬಲಗೊಂಡಿರುವುದನ್ನು ಸಮ್ಮೇಳನ ಎತ್ತಿತೋರಿಸಿತು. ಜನತಾದಳ ಒಡೆದುದರಿಂದ ಹಾಗೂ ನಾಯಕರ ಕಚ್ಚಾಟದಿಂದ ಒಂದು ಭಾಗ ಬಿಜೆಪಿ ಜೊತೆ ಸೇರಿ ಈ ನಡುವೆ ಜಿಲ್ಲೆಯ ಒಂದು ತಾಲೂಕಿಗೆ (ಹೊಸಪೇಟೆ) ಸೀಮಿತವಾಗಿದ್ದ ಬಿಜೆಪಿಯನ್ನು 3-4 ವಿಧಾನಸಭಾ ಕ್ಷೇತ್ರಗಳಲ್ಲಿ ಬಲಪಡಿಸುದುದನ್ನು ಸಮ್ಮೇಳನ ಗುರುತಿಸಿತು. ಕಾಂಗ್ರೆಯಲ್ಲಿನ ಅತೃಪ್ತರೂ ಬಿಜೆಪಿ ಬಲಗೊಳ್ಳಲು ನೆರವಾದುದನ್ನು ಗಮನಿಸಿತು.

ಬಳ್ಳಾರಿ ಜಿಲ್ಲೆಯ ರಾಜಕೀಯ ರಂಗದಲ್ಲಿ ಕಾಂಗ್ರೆಸ್(ಐ) ಪಕ್ಷವನ್ನು ಏಕಾಂಗಿಯಾಗಿ ಸೆಣಸಬಲ್ಲಷ್ಟು ಬಲವಾಗಿದ್ದ ಜನತಾದಳವು ದುರ್ಬಲವಾಗಿದ್ದು; ಕಾಂಗ್ರೆಸ್ ಪಕ್ಷವನ್ನು ಸೆಣಸಲು ಕೇವಲ ಒಂದು ವಿರೋಧ ಪಕ್ಷದಿಂದ ಸಾಧ್ಯವಿಲ್ಲದಂತಹ ಪರಿಸ್ಥಿತಿಯನ್ನು ತಂದುದು ಈ ಅವಧಿಯ ವಿಶೇಷವೆಂದು ರಾಜಕೀಯ ಬಲಾ-ಬಲಗಳಲ್ಲಿ ಸಮ್ಮೇಳನ ವಿಶ್ಲೇಷಿಸಿದೆ.

ಕೇಂದ್ರದಲ್ಲಿ ರಾಜ್ಯಭಾರ ಮಾಡಿದ ಸಂಯುಕ್ತ ರಂಗವನ್ನು ದುರ್ಬಲಗೊಳಿಸಲು ವಾಜಪೇಯಿ, ಚಂದ್ರಶೇಖರ್, ಜಾರ್ಜ್‌ಫರ್ನಾಂಡೀಸ್, ರಾಮಕೃಷ್ಣಹೆಗಡೆ ಮುಂತಾದ ಮಿತ್ರಕೂಟವು ಜನತಾದಳ ಪಕ್ಷದಲ್ಲಿನ ಆಂತರಿಕ ಕಚ್ಚಾಟವನ್ನು ಬಳಸಿಕೊಂಡು ಸಂಯುಕ್ತ ರಂಗದ ಒಂದು ಪ್ರಧಾನ ಅಂಗಪಕ್ಷವನ್ನು ಒಡೆದು ಹಾಕಿದುದು ಬಳ್ಳಾರಿ ಜಿಲ್ಲೆಯ ರಾಜಕೀಯ ಸನ್ನಿವೇಶದಲ್ಲಿ ಇಂತಹದೊಂದು ಬದಲಾವಣೆಯನ್ನು ತರಲು ಕಾರಣವಾಗಿದೆ.

ಭ್ರಮನಿರಸನಗೊಂಡ ಜನ :

ಈ ಮೊದಲು ಕರ್ನಾಟಕ ರಾಜ್ಯದಲ್ಲಿ ರಾಜ್ಯಭಾರ ಮಾಡಿದ ಜನತಾದಳವು ಹಲವು ಸಣ್ಣ-ಪುಟ್ಟ ಉತ್ತಮ ಕೆಲಸ ಕೈಗೊಂಡರೂ ತಾನು ಕಾಂಗ್ರೆಗಿಂತ ಭಿನ್ನವೆಂದು ಜನತೆಗೆ ತೋರಿಸಿಕೊಡಲಾಗಲಿಲ್ಲ. ಮಾತ್ರವಲ್ಲ ಜನತೆಯ ನಿಜವಾದ ಪ್ರಶ್ನೆಗಳಿಗೆ ಗಮನ ಕೊಡಲಿಲ್ಲ. ರೈತ-ಕಾರ್ಮಿಕರ ವಿರೋಧಿಯಾಗಿಯೇ ಉಳಿದಿತ್ತು. ಹೀಗಾಗಿ ಕಾಂಗ್ರೆ ಸೋಲಿಸಿದ ರಾಜ್ಯದ ಜನತೆಯಂತೆಯೇ ಬಳ್ಳಾರಿ ಜಿಲ್ಲೆಯ ಜನತೆಯು ಜನತಾದಳದ ರಾಜ್ಯಭಾರದ ಬಗೆ ಭ್ರಮನಿರಸನಗೊಂಡಿತ್ತು. ಇಂತಹ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಪ್ರತಿವರ್ಷವೂ 3.4 ಲಕ್ಷ ಎಕರೆ ಪ್ರದೇಶದ ತುಂಗಭದ್ರಾ ನದಿ ನೀರಿನ ಕೊರತೆಯ ಸಮಸ್ಯೆ ಉದ್ಭವಿಸುತ್ತಿರುವುದನ್ನು ಸಮರ್ಥವಾಗಿ ಪರಿಹರಿಸದೇ ಹೋರಾಟ ನಿರತ ಸಾವಿರಾರು ರೈತರ ಮೇಲೆ ಅಮಾನುಷ ಲಾಠಿ ಪ್ರಹಾರ ನಡೆಸಿ, ಪೋಲಿಸ್ ಮೊಕದ್ದಮೆ ಹೂಡಿ ಜನವಿರೋಧಿಯೆಂದು ಜನತಾದಳ ತೋರಿಸಿಕೊಂಡಿತು. ಪ್ರತಿಬಾರಿಯೂ ಇದೊಂದು ರಾಜಕೀಯ ತಿರುವು ನೀಡುವ ಪ್ರಶ್ನೆಯಾಗಿಯೇ ಜಿಲ್ಲೆಯಲ್ಲಿ ತುಂಗಭದ್ರಾ ನೀರಿನ ಕೊರತೆಯ ಪ್ರಶ್ನೆ ಉದ್ಭವಿಸಿದೆ.

ಕಾಂಗ್ರೆಸ್ ವಿರೋಧಿ ಶಕ್ತಿ ವಿಭಜನೆ

ಇದೆಲ್ಲದರ ಜೊತೆ ದಳದ ಒಳಜಗಳವೂ ಜನತೆಯ ಹಾಗೂ ಅವರ ಬೆಂಬಲಿಗರ ನಡುವೆ ಭ್ರಮನಿರಸನ ಉಂಟುಮಾಡಿದುದು ಅಂತಿಮವಾಗಿ ಒಡೆದು ಜಿಲ್ಲೆಯಲ್ಲಿ ಕಾಂಗ್ರೆ ವಿರೋಧಿ ಶಕ್ತಿಯನ್ನು ವಿಭಜಿಸಿತು. ಪರಿಣಾಮವಾಗಿ ಕೆಲವು ಭೂಮಾಲಕ-ಬಂಡವಾಳದಾರರು ಬಿಜೆಪಿಯನ್ನು ಬಲಪಡಿಸಿದರು. ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಸೋಲುಂಡಿತು. ಜಿಲ್ಲಾ ಪಂಚಾಯತ್‌ನಲ್ಲಿ ಅಧಿಕಾರವನ್ನು ಕಾಂಗ್ರೆಗೆ ಬಿಟ್ಟುಕೊಟ್ಟು ಶೇ 20 ಸ್ಥಾನಗಳಷ್ಟೇ ಜನತಾದಳ (ಯು) ಪಡೆಯಿತು. ಹಡಗಲಿ ತಾಲೂಕು ಪಂಚಾಯ್ತಿ ಬಿಟ್ಟರೆ ಉಳಿದೆಲ್ಲವನ್ನು ಕಾಂಗ್ರೆ ಸ್ವಾದೀನಕ್ಕೆ ಒಪ್ಪಿಸಿತು. ಬಳ್ಳಾರಿ ನಗರ ಸಭೆ ಹೊರತುಪಡಿಸಿ ಉಳಿದೆಲ್ಲಾ ಪುರಸಭೆ-ಪಟ್ಟಣ ಪಂಚಾಯ್ತಿಯಲ್ಲೂ ಇದೇ ಪರಿಸ್ಥಿತಿಯನ್ನು ಜನತಾದಳ ಉಭಯ ಬಣಗಳು ಅನುಭವಿಸಿದವು.

ಸೋನಿಯಾ ಸ್ಪರ್ಧೆ

ಸೋನಿಯಾಗಾಂಧಿ ಲೋಕಸಭೆಗೆ ಬಳ್ಳಾರಿ ಕ್ಷೇತ್ರದಿಂದ ಸ್ಪರ್ಧಿಸುವುದರೊಂದಿಗೆ ಕಾಂಗ್ರೆಯೊಳಗೆ ಇರುವ ಗುಂಪುಗಳಲ್ಲಿ ಐಕ್ಯತೆಯನ್ನು ತಾತ್ಕಾಲಿಕವಾಗಿ ಮೂಡಿಸಿತು. ಮತ್ತದೇ ಸಂದರ್ಭದಲ್ಲಿ ಬಿಜೆಪಿ ಜೊತೆ ಜನತಾದಳ(ಯು) ಕೈಜೋಡಿಸಿದುದರಿಂದ ಜನತಾದಳ ಇದ್ದ ಅಲ್ಪ ಸಂಖ್ಯಾತರ (ಮುಸ್ಲಿಂ - ಕ್ರಿಶ್ಚಿಯನ್)ನ್ನು ಹಾಗೂ ಜಾತ್ಯಾತೀತ ಕೆಲ ಶಕ್ತಿಗಳು ಕಾಂಗ್ರೆ ಕಡೆ ಸರಿಯುವಂತೆ ಮಾಡಿ ಕಾಂಗ್ರೆ ಕೈ ಬಲಪಡಿಸಿದರೆ ಒಡಕಾದ ಜನತಾದಳ ಪಕ್ಷಗಳಲ್ಲಿ ಬಲಿಷ್ಟವಾಗಿದ್ದ ಜನತಾದಳ(ಸಂಯುಕ್ತ) ವನ್ನು ಮತ್ತಷ್ಟು ದುರ್ಬಲಗೊಳಿಸಿತು.

ಬಳ್ಳಾರಿ ನಗರದ ಮುಂಡ್ಲೂರು ದಿವಾಕರ ಬಾಬು ಗುಂಪಿನ ದಬ್ಬಾಳಿಕೆಯ ರಾಜಕೀಯವನ್ನು ಎದುರಿಸಿ ಹಾಗೂ ತನಗೆ ವಿಧಾನಸಭಾ ಕ್ಷೇತ್ರಕ್ಕೆ ಸ್ಪರ್ಧಿಸಲು ಬಳ್ಳಾರಿ ಕ್ಷೇತ್ರದಲ್ಲಿ ಅವಕಾಶ ಸಿಗಲಿಲ್ಲವೆಂದು ಕೊನೆಗಳಿಗೆಯಲ್ಲಿ ಎನ್ನೋಬಲ್ ಹಾಗೂ ಶ್ರೀರಾಮುಲು ಗುಂಪು ಕಾಂಗ್ರೆ ಬಿಟ್ಟು ಹೊರ ನಡೆದರು. ಅದೇ ರೀತಿ ಸುಮಾರು 21 ಸಾವಿರಕ್ಕೂ ಹೆಚ್ಚಿನ ಮತ ಪಡೆದ ಮಾಜಿ ಶಾಸಕ ಎನ್.ಟಿ.ಬೊಮ್ಮಣ್ಣ ಕಾಂಗ್ರೆ ಪಕ್ಷದಿಂದ ಮರಳಿ ಸ್ಪರ್ಧಿಸಲು ಅವಕಾಶ ನೀಡದ್ದನ್ನು ವಿರೋಧಿಸಿ ಕಾಂಗ್ರೆನಿಂದ ಹೊರನಡೆದರೂ ಸುಮಾರು 18 ಸಾವಿರದಷ್ಟು ಮತ ಪಡೆದು ಶಿರಗುಪ್ಪ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆನ ಅಧಿಕೃತ ಅಭ್ಯರ್ಥಿ ಶಂಕರರೆಡ್ಡಿ ವಿರುದ್ಧ ಸೋಮಲಿಂಗಪ್ಪ ಟಿಕೇಟ್ ವಂಚಿತರಾಗಿ ರೆಬೆಲ್ ಅಭ್ಯರ್ಥಿಯಾಗಿ (ಸ್ವತಂತ್ರ) ಸ್ಪರ್ಧಿಸಿದ್ದರು, ಒಳ ಜಗಳದಿಂದ ತನ್ನ ಗೆಲುವಿನ ಬಗ್ಗೆ ಸ್ವತಃ ಅಪನಂಬಿಕೆಯನ್ನು ಎಂ.ಶಂಕರರೆಡ್ಡಿಯವರು ಹೊಂದಿದ್ದರೂ ಕಾಂಗ್ರೆ ಪಕ್ಷವೂ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಅದ್ಭುತವಾಗಿ ಹಾಗೂ ಪಾರ್ಲಿಮೆಂಟ್‌ನಲ್ಲೂ 59 ಸಾವಿರ ಮತಗಳ ಅಂತರದಿಂದ ಬಿಜೆಪಿಯ ತೀವ್ರ ಅಪಪ್ರಚಾರದ ನಡುವೆಯೂ, ವಿದೇಶಿ, ಸ್ವದೇಶಿಯೆಂದು ಹೇಳಿಕೊಂಡಾಗಲು ಗೆಲುವು ಸಾಧಿಸಿದುದು ಮುಖ್ಯವಾಗಿ ಜನತಾದಳ ದುರ್ಬಲವಾದುದೇ ಮುಖ್ಯವಾದ ಕಾರಣವಾಗಿದೆ.

ಬಲಗೊಂಡ ಬಿಜೆಪಿ

ಕಾಂಗ್ರೆನಿಂದ ಹೊರಬಂದವರೆಲ್ಲಾ ಬಿಜೆಪಿ ಜೊತೆ ಸೇರಿದ್ದರಿಂದ ಮಾಜಿ ಶಾಸಕ ಶಂಕರಗೌಡರ ನೇತೃತ್ವದಲ್ಲಿ ಹೊಸಪೇಟೆ ವಿಧಾನಸಭಾ ಕ್ಷೇತ್ರಕ್ಕಷ್ಟೇ ಸೀಮಿತವಾಗಿದ್ದ ಬಿಜೆಪಿ ಪಕ್ಷವು ಬಳ್ಳಾರಿ ನಗರದಲ್ಲಿ ಕೂಡ್ಲಗಿ ಹಾಗೂ ಕುರುಗೋಡು ಕ್ಷೇತ್ರಗಳಲ್ಲಿ ಸಂಯುಕ್ತ ದಳದೊಂದಿಗೆ ಹೊಂದಾಣಿಕೆ ಮಾಡಿಕೊಂಡು ತನ್ನ ಸ್ಪರ್ಧಿಗಳನ್ನು ಕಣಕ್ಕಿಳಿಸುವಷ್ಟು ಪ್ರಬಲವಾಯಿತು. ಆಗ ಬಿಜೆಪಿ ಬಗೆಗಿದ್ದ ಅಲೆಯು ಕಾಂಗ್ರೆ ಹಾಗೂ ಜನತಾದಳದ ಅತೃಪ್ತರನ್ನು ಸೆಳೆದು ಬಲಪಡಿಸಿತು.

ಸಿಪಿಐ(ಎಂ) ಬೆಳವಣಿಗೆಗೊಂದು ಸದಾವಕಾಶ

ಕಳೆದೆರಡು ವರ್ಷಗಳ ಬಿಜೆಪಿ ನಾಯಕತ್ವದ ಎನ್‌ಡಿಎ ಸರ್ಕಾರದ ಜನವಿರೋಧಿ ಆರ್ಥಿಕ ನೀತಿಗಳು ಸಮಾಜದ ಎಲ್ಲಾ ವಿಭಾಗಗಳನ್ನು ತೀವ್ರವಾಗಿ ಬಾಧಿಸಿರುವುದು ಮತ್ತು ಸಿಪಿಐ(ಎಂ) ಹಾಗೂ ಎಡಪಕ್ಷಗಳು ಮತ್ತು ಪೀಪಲ್ಸ್ ಫ್ರಂಟ್ ನೇತೃತ್ವದ ಕಾರ್ಯಕ್ರಮಗಳು ಎನ್ ಪಿವಿಂಜ ನಾಯಕತ್ವದಲ್ಲಿ ಚಳುವಳಿಗಳು ಬಿಜೆಪಿ ಬಗೆಗಿಟ್ಟ ಜನರ ವಿಶ್ವಾಸವನ್ನು ಭ್ರಮನಿರಸನಗೊಳಿಸಿ ಪ್ರತಿರೋಧದ ಅಲೆಯನ್ನು ಸೃಷ್ಟಿಸಿವೆ.



ಬಹಿರಂಗ ಅಧಿವೇಶನ

ಅದೇ ಸಂದರ್ಭದಲ್ಲಿ ಕಾಂಗ್ರೆ ಕರ್ನಾಟಕ ರಾಜ್ಯ ಸರ್ಕಾರದ ಆರ್ಥಿಕ ನೀತಿಗಳು ಮುಖ್ಯವಾಗಿ ವಿಶ್ವಬ್ಯಾಂಕ್ ಸಾಲಕ್ಕೆ ರಾಜ್ಯವನ್ನು ಒತ್ತೆಹಾಕಿ ವಿದ್ಯುತ್ ಕ್ಷೇತ್ರವನ್ನು ಖಾಸಗಿಯವರಿಗೆ ತೆರೆಯಲು ಮುಂದಾದದ್ದು, ಬೆಲೆ ಏರಿಕೆ, ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ, ವಿದ್ಯುತ್ ಕೊರತೆ, ಹಸಿರುಕಾರ್ಡ್ ವಾಪಸ್ ಪಡೆದು ರೇಷನ್ ವ್ಯವಸ್ಥೆಯಿಂದ ಬಡವರನ್ನು ವಂಚಿಸುತ್ತಿರುವುದು ಕೇಂದ್ರದ ಜೊತೆ ಕೈ ಜೋಡಿಸಿ ಹಲವು ಕ್ಷೇತ್ರಗಳನ್ನು ಖಾಸಗೀಕರಿಸಲು ಮುಂದಾಗುತ್ತಿರುವುದು ಮತ್ತು ರೈತರ-ವಿದ್ಯಾರ್ಥಿಗಳ ಮೇಲೆ ಗೋಲಿಬಾರ್ ಲಾಠಿ ಪ್ರಹಾರ, ಅಬಕಾರಿ ಲಾಬಿ ಜೊತೆ ಶಾಮೀಲು ಮತ್ತು ಬೆಲೆ ಕುಸಿತವಾದಾಗ (ಮೆಕ್ಕೆ ಜೋಳ, ಶೇಂಗಾ, ಭತ್ತ ಮುಂತಾಗಿ) ರೈತರಿಗೆ ನೆರವಾಗದೇ ಹೋದುದು, ಕೂಲಿಕಾರರ ಕೂಲಿ ಕೆಲಸ ಕಠಿಣವಾಗುತ್ತಿರುವುದು ಎಲ್ಲವೂ ಬಿಜೆಪಿ ಹಾಗೂ ಕಾಂಗ್ರೆ ಬಗ್ಗೆ ಜಿಲ್ಲೆಯ ಜನಸಮೂಹದ ನಡುವೆ ಭ್ರಮನಿರಸನ ಉಂಟುಮಾಡುತ್ತಿವೆ. ಇದೆಲ್ಲವೂ ಪರ್ಯಾಯ ನೀತಿಗಳಿಗಾಗಿ ಪರಿತಪಿಸುವಂತಹ ವಾತಾವರಣ ನಿರ್ಮಿಸಿದೆ. ಅದೇ ಸಂದರ್ಭದಲ್ಲಿ ಕಾಂಗ್ರೆ ಜೊತ ಇರುವ ಅಲ್ಪಸಂಖ್ಯಾತರು ಬಿಜೆಪಿ ವಿರೋಧಿಸಲು ಸೇರಿ ದವರು ಪರ್ಯಾಯ ನೀತಿಗಾಗಿ ಹೋರಾಡುವ ಬಲಿಷ್ಟ ಧರ್ಮನಿರಪೇಕ್ಷ ಅಥವಾ ಜಾತ್ಯಾತೀತ ರಾಜಕೀಯ ಶಕ್ತಿಗಾಗಿ ಹುಡುಕಾಡುವ ಪರಿಸ್ಥಿತಿಯನ್ನು ಸೃಷ್ಟಿಸಿದೆ.

ಇವೆಲ್ಲವೂ ಜನತೆಯ ನಡುವೆ ಪರ್ಯಾಯಕ್ಕಾಗಿ ಹೋರಾಡುವ ಕೋಮುವಾದ ಹಾಗೂ ಕೋಮುಗಲಭೆ ವಿರೋಧಿಸುವ ಮತ್ತು ಜಾತೀವಾದದ ರಾಜಕಾರಣ ಎದುರಿಸುವ, ಜಾತಿ ಗಲಭೆಗಳ ಮಧ್ಯ ಪ್ರವೇಶಿಸಿ ಜನಪರವಾಗಿ ನಿಲ್ಲುವ; ಭೂಮಾಲಕರನ್ನು ಎದುರಿಸುವ ಸಿಪಿಐ(ಎಂ) ಪಕ್ಷದಬೆಳವಣಿಗೆಗೆ ಸದಾವಕಾಶದ ಬಾಗಿಲನ್ನು ತೆರೆದಿವೆಯೆಂಬುದನ್ನು ಸಮ್ಮೇಳನ ಗುರುತಿಸಿದೆ ಮತ್ತು ಜಿಲ್ಲೆಯಲ್ಲಿ ಜನ ಪರ್ಯಾಯವನ್ನು ವ್ಯಾಪಕವಾಗಿ ಪ್ರಚಾರ ಪಡಿಸಲು, ಸತತವಾಗಿ ಉದ್ಭವಿಸುವ ರಾಜಕೀಯ, ಆರ್ಥಿಕ, ಸಾಮಾಜಿಕ ಪ್ರಶ್ನೆಗಳಲ್ಲಿ ಮಧ್ಯ ಪ್ರವೇಶಿಸಲು, ಕೋಮುವಾದದ ವಿರುದ್ಧ ನಿರಂತರ ಸೆಣಸಲು, ವಿಶಾಲವಾದ ಆಂದೋಲನ ನಡೆಸಲು ಮುಂದಾಗಿ ಜಾತ್ಯಾತೀತ ಶಕ್ತಿಗಳನ್ನು ಒಗ್ಗೂಡಿಸಿ ಸೆಣಸಲು ಜಂಟಿ ಕಾರ್ಯತಂತ್ರ ಅನುಸರಿಸಲು ಸಿಪಿಐ(ಎಂ) ಬಳ್ಳಾರಿ ಜಿಲ್ಲಾ 6ನೇ ಸಮ್ಮೇಳನ ನಿರ್ಧರಿಸಿದೆ.

ಸಿಪಿಐ(ಎಂ) ಪಕ್ಷದ 6ನೇ ಜಿಲ್ಲಾ ಸಮ್ಮೇಳನದ ಬೃಹತ್ ಬಹಿರಂಗ ಸಭೆಯು ನವೆಂಬರ್ 9, ರಂದು ತೋರಣಗಲ್ಲು ರೈಲು ನಿಲ್ದಾಣದಲ್ಲಿ ನಡೆಯಿತು. ಇದಕ್ಕೆ ಮುನ್ನ ಸಮ್ಮೇಳನ ನಡೆಯುವ ಸಭಾಂಗಣದಿಂದ (ತೋರಣಗಲ್ಲು) 300 ಕ್ಕೂ ಹೆಚ್ಚು ಸಿಪಿಐ(ಎಂ) ಬೆಂಬಲಿಗರು, ಪ್ರತಿನಿಧಿಗಳು ಸುಮಾರು ಒಂದೂವರೆ ಕಿ.ಮಿ. ದೂರದ ಬಹಿರಂಗ ಸಭೆಯ ವೇದಿಕೆಯ ಹತ್ತಿರಕ್ಕೆ ಮೆರವಣಿಗೆಯೊಂದಿಗೆ ಮುಗಿಲುಮುಟ್ಟುವ ಘೋಷಣೆಗಳೊಂದಿಗೆ ತೆರಳಿದರು.

(10ನೇ ಪುಟಕ್ಕೆ)

ಸಮ್ಮೇಳನಗಳೆಂದರೆ ಮಹಾಮಥನ

ಜಾಗತೀಕರಣ, ಉದಾರೀಕರಣದ ಪ್ರಭಾವ ಹೆಚ್ಚುತ್ತಿದೆ. ಈ ಬಗ್ಗೆ ಗಂಭೀರ ಅಧ್ಯಯನ ಮಾಡಿ ವಾಸ್ತವ ನೆಲೆಗಟ್ಟನ್ನು ಅರ್ಥೈಸಿ ಚಳುವಳಿಯ ಮುಂಚೂಣಿಯಲ್ಲಿರುವ ಪಕ್ಷ ಸಿಪಿಐ(ಎಂ).

ಕೋಮುವಾದದ ವಿರುದ್ಧ ರಾಜಿ ಇಲ್ಲದ ಮನೋಭಾವದ ನಿಲುವು ತಾಳಿ ಪ್ರಚಾರ ಪ್ರಕ್ಷೋಭೆ ಮಾಡುತ್ತಿರುವ ಪಕ್ಷ ಸಿಪಿಐ(ಎಂ). ದುಡಿದ ಜನರ ಹೋರಾಟಗಳನ್ನು ಈ ಎರಡೂ ನೆಲೆಗಳಲ್ಲಿ ಸಂಘಟಿಸುತ್ತಿರುವ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ಸಮ್ಮೇಳನಗಳ ಪ್ರಕ್ರಿಯೆಗಳು ಆರಂಭಗೊಂಡಿವೆ. ಬೇರಾವುದೇ ರಾಜಕೀಯ ಪಕ್ಷಗಳಲ್ಲಿಯೂ ಕಂಡಿರದ ವಿಭಿನ್ನ ಪ್ರವೃತ್ತಿ ಸಿಪಿಐ(ಎಂ)ನಲ್ಲಿ ಮಾತ್ರವೇ ಇರುವುದು. ಈ ಸಮ್ಮೇಳನಗಳಲ್ಲಿ ಪ್ರತಿಯೊಂದು ಪ್ರದೇಶಗಳಲ್ಲಿಯೂ ಕೂಡ ಸಾಮಾಜಿಕ, ರಾಜಕೀಯ ಚಲನೆ ಹೇಗಾಗುತ್ತಿದೆ. ವಿವಿಧ ಜಾಗತಿಕ ರಾಷ್ಟ್ರೀಯ ಬೆಳವಣಿಗೆಗಳು ಹೇಗೆ ಪರಿಣಮಿಸುತ್ತವೆ ಎಂಬುದರ ಬಗ್ಗೆ ತಳಮಟ್ಟದ ಅಧ್ಯಯನ ನಡೆಸುವುದು ಮತ್ತು ಚಳುವಳಿಯ ಮುಂದಿನ ಕರ್ತವ್ಯಗಳನ್ನು ಗುರುತಿಸುವುದು ಈ ಸಮ್ಮೇಳನಗಳ ಗುರಿ. ಈ ಮಥನದ ಸಾರ ಕರ್ನಾಟಕದ ಎಲ್ಲಾ ದುಡಿವ ಜನರ ತಿಳುವಳಿಕೆಗೆ ಬರಬೇಕೇಂದೇ ಈ ಲೇಖನ ಮಾಲೆ. ಅದರಲ್ಲಿ ಬಳ್ಳಾರಿಯದು ಪ್ರಥಮ.



ಉಕ್ಕಿನ ನಗರದಲ್ಲಿ ಉಕ್ಕಿಹರಿದ ಜನಸಮೂಹ

ಕೊಡಗು ಕಾಂಗ್ರೆಸ್ ಕಿತ್ತಾಟ - ಜಿಲ್ಲಾ ಪಂಚಾಯಿತ್ತಿಯಲ್ಲಿ ಅರಾಜಕತೆ

ಕೊಡಗಿನ ಕಾಂಗ್ರೆಸ್ಸಲ್ಲೀಗ ನಿಲ್ಲದ ಕದನ. ಜಿಲ್ಲಾ ಪಂಚಾಯ್ತಿಯ ಅಧ್ಯಕ್ಷಗಿರಿ ಕಿತ್ತುಕೊಳ್ಳಲು ಎರಡು ಬಣಗಳ ಹಣಾಹಣಿ. ಅವರದೇ ಪಕ್ಷದ ಜಿ.ಪಂ.ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ! ರಾಜ್ಯದ ಹಾಗೂ ಜಿಲ್ಲೆಯ ಮುಖಂಡರು ಎಬ್ಬಿಸಿದ ರಾಡಿ, ರಂಪಾಟದಿಂದಾಗಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ. ಅಧಿಕಾರಿಗಳು, ಗುತ್ತಿಗೆದಾರರು ಮನಸಾರೆ ಮೇಯುತ್ತಿದ್ದಾರೆ. ಜನತೆಯನ್ನು ನಿರ್ಲಕ್ಷಿಸಿದ್ದಾರೆ. ಜನನೀಡಿದ ದೈತ್ಯ ಬಹುಮತವಿದ್ದರೂ ಬಣಗಳ ಅಧಿಕಾರದಾಹವು ಕೃಷ್ಣರ ಹೈಟೆಕ್ ಆಡಳಿತದಲ್ಲಿ ಠೇಂಕಾರದಲ್ಲಿ ಅದುಮಿ ಹಿಡಿದರೂ ಸ್ಫೋಟಗೊಂಡು ಬಯಲಾಗುತ್ತಿರುವ ಸರಣಿ ಆರಂಭ.

ಪೀಟರ್ ಲೋಬೋ

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಎರಡು ವರ್ಷಗಳು ಕಳೆಯುತ್ತಿವೆ. ಕೇಂದ್ರ ಸರಕಾರದ ಆರ್ಥಿಕ ನೀತಿಗಳನ್ನು ಚಾಚು ತಪ್ಪಾದೆ ಜಾರಿಗೆ ತಂದು ನಾವೇನು ಕಡಿಮೆ ಇಲ್ಲ. ಅದೇ ಆರ್ಥಿಕ ಧೋರಣೆಯೇ ನಮ್ಮ ಕಾರ್ಯಕ್ರಮವೆಂಬ ರೀತಿಯಲ್ಲಿ ಆಡಳಿತ ನಡೆಸುತ್ತಿದೆ. ರೈತರ ಆತ್ಮಹತ್ಯೆ, ಕಾರ್ಮಿಕರ ಬೀದಿಪಾಲು ಯುವಜನರಿಗೆ ಉದ್ಯೋಗದಲ್ಲಿ ಕಡಿತ, ಶಿಕ್ಷಣ ಕ್ಷೇತ್ರ ದುಬಾರಿ.

ಈ ಹಿನ್ನೆಲೆಯಲ್ಲೇ 15 ತಿಂಗಳ ಹಿಂದೆ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಚುನಾವಣೆ ಅಲ್ಲದೇ ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆ. ಆಡಳಿತ ಪಕ್ಷಕ್ಕೆ ಅತ್ಯಧಿಕವಾಗಿ ಅಪಾಯಕಾರಿ ಎನ್ನಬಹುದಾದಷ್ಟು ಬಹುಮತ ದೊರೆಯಿತು.

ಕೊಡಗು ಜಿಲ್ಲಾ ಪಂಚಾಯ್ತಿನಲ್ಲಿ ಒಟ್ಟು 26 ಸ್ಥಾನ ಇದ್ದು ಕಾಂಗ್ರೆಸ್ 21 ಸ್ಥಾನಗಳು, ಜನತಾಪರಿವಾರ 2, ಸಿಪಿಐ(ಎಂ) 1, ಬಿಜೆಪಿ 1 ಹಾಗೂ ಕಾಂಗ್ರೆಸ್ ಬಂಡಾಯ -1. 21 ಸ್ಥಾನ ಪಡೆದ ಕಾಂಗ್ರೆಸ್ ಪಕ್ಷ ಜಂಬದಿಂದ ಒಂದು ಮಹಾಸಾಧನೆಯೆಂದು ಬೀಗುತ್ತಿದ್ದ ಸಂದರ್ಭದಲ್ಲಿ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಗೆ ಸಿದ್ಧವಾಯ್ತು.

ಅಧ್ಯಕ್ಷರು, ಉಪಾಧ್ಯಕ್ಷ ಚುನಾವಣೆ ಎಂಬ ಒಳ ಜಗಳ


20 ತಿಂಗಳ ಅಧ್ಯಕ್ಷ ಗಾದಿಗೆ ಯಾರೆಂಬ ಬಹಿರಂಗ ಕಾಳಗ ಪ್ರಾರಂಭವಾದ ಸಂದರ್ಭದಲ್ಲಿ ಎಂ.ಎಂ.ನಾಣಯ್ಯ (ಉಸ್ತುವಾರಿ ಸಚಿವರು) ಹಾಗೂ ಚಂದ್ರಕಲಾ ಜಿಲ್ಲಾ ಪಂಚಾಯ್ತಿ ಸದಸ್ಯೆ ಎರಡು ಗುಂಪುಗಳಾಗಿ ಜಗಳ ಪ್ರಾರಂಭವಾಯಿತು. ಜಗಳ ಬೆಂಗಳೂರಿಗೆ ತಲುಪಿ ಪಕ್ಷದ ವರಿಷ್ಠ ಮಟ್ಟದ ನಾಯಕರ ಮೇಲೆ ಪ್ರಭಾವ ಬೀರಲು ಎರಡು ಗುಂಪು ಸನ್ನದ್ಧವಾಯಿತು. ಉಸ್ತುವಾರಿ ಸಚಿವ ಎಂ.ಎಂ.ನಾಣಯ್ಯ ವೀಣಾ ಅಚ್ಚಯ್ಯವೆಂಬ ಹರಕೆಯನ್ನು ಅಧ್ಯಕ್ಷಗಾಧಿಗೆ ತರಲು ಪ್ರಯತ್ನಿದರು. ಎಂ.ಎಂ.ನಾಣಯ್ಯ ವಿರೋಧಿ ಗುಂಪು ಚಂದ್ರಕಲಾ ಅರುಣ್‌ಮಾಚಯ್ಯ, ಎ.ಪಿ. ಶಶಿಧರ್, ಜೈಜಗದಿಶ್, ಸಚಿವರಾದ ಡಿ.ಕೆ.ಶಿವಕುಮಾರ್, ಡಿ.ಬಿ.ಚಂದ್ರೇಗೌಡರ ಕಾಲಿಗೆ ಬಿದ್ದುದರ ಪರಿಣಾಮವಾಗಿ ಅಧ್ಯಕ್ಷಸ್ಥಾನ ಎಂ.ಎಂ.ನಾಣಯ್ಯ ವಿರೋಧಿ ಗುಂಪಿಗೆ ಪಾಲಾಯಿತು. ಅಧ್ಯಕ್ಷ ಚುನಾವಣೆಯಲ್ಲಿ ಮಡಿಕೇರಿಗೆ ಆಗಮಿಸಿದ ವೀಕ್ಷಕರ ತಂಡದ ನಾಯಕರಾದ ಚಂದ್ರೇಗೌಡರು ಬೆಂಗಳೂರಿನಿಂದಲೇ ಹಸಿರು ನಿಶಾನೆ ತೋರಿಸಿದ ಚಂದ್ರಕಲಾರವರಿಗೆ ಮಡಿಕೇರಿಯಲ್ಲಿ ಪ್ರತಿಯೊಬ್ಬ ಕಾಂಗ್ರೆಸ್ ಪಕ್ಷದ ಜಿಲ್ಲ ಪಂಚಾಯ್ತಿ ಸದಸ್ಯರ ಪ್ರತ್ಯೇಕ ಅಭಿಪ್ರಾಯ ಕೇಳುವುದರೊಂದಿಗೆ ನೀವು ಚಂದ್ರಕಲಾ ಬೆಂಬಲ ನೀಡಬೇಕೆಂದು ಒತ್ತಾಯ ಹೇರಿದರು. ಇದರ ಪರಿಣಾಮವೇ ಚಂದ್ರಕಲಾ ಅಧ್ಯಕ್ಷರಾದರು. ಸಚಿವ ಎಂ.ಎಂ.ನಾಣಯ್ಯ ಗುಂಪಿಗೆ ತೀವ್ರ ಮುಖಭಂಗವಾಯಿತು. ಚಂದ್ರಕಲಾ ಅಧ್ಯಕ್ಷರಾಗಿ ಆಯ್ಕೆಯಾದರು. ಆ ಸಂದರ್ಭದಲ್ಲಿ ಒಂದು ಒಪ್ಪಂದದಂತೆ 10 ತಿಂಗಳು ಚಂದ್ರಕಲಾ ಇನ್ನು 10 ತಿಂಗಳು ವೀಣಾ ಅಚ್ಚಯ್ಯ ಅಲ್ಲಿಗೆ ತೃಪ್ತಿ ಪಡೆದ ಎಂ.ಎಂ.ನಾಣಯ್ಯ ತಂಡ 10 ತಿಂಗಳು ಮಾತ್ರ ಚಂದ್ರಕಲಾ ಎಂಬ ಪ್ರಚಾರ ಪ್ರಾರಂಭಿಸಿತು. ತನ್ನ 10 ತಿಂಗಳ ಅವಧಿಯಲ್ಲಿ ಚಂದ್ರಕಲಾ ಜಿಲ್ಲಾ ಉಸ್ತುವಾರಿ ಸಚಿವರಿಗೂ, ಇತರ ಮಂತ್ರಿಗಳಿಗೂ ಮೂರು ಕಾಸಿನ ಬೆಲೆ ಕೊಡದೆ ರಾಜ್ಯ ಮಟ್ಟದಲ್ಲಿ ತನ್ನ ಪ್ರಭಾವ ಹೆಚ್ಚಿಸಿಕೊಂಡರು.

ಪ್ರತಿಷ್ಠೆ ಕಾಳಗ - ಜನತೆಗೆ ದ್ರೋಹ

10 ತಿಂಗಳ ಅವಧಿಯಲ್ಲಿ ಎಂ.ಎಂ.ನಾಣಯ್ಯ ಯಾವರೀತಿಯಲ್ಲಾದರೂ ಚಂದ್ರಕಲಾ, ವಿ.ವಿ.ಶಶಿಧರ್ ಗುಂಪನ್ನು ಬಗ್ಗು ಬಡಿಯಲು ಆಗಿನ ಜಿಲ್ಲಾಧಿಕಾರಿ ಜಯಂತಿಯವರನ್ನು ಚಂದ್ರಕಲಾ ವಿರುದ್ಧ ಕತ್ತಿಮಸೆಯ ಬಿಟ್ಟರು. ಜಯಂತಿ V/s ಚಂದ್ರಕಲಾ ಬಹಿರಂಗ ಕಾಳಗ ನಡೆಯಲಾರಂಭಿಸಿತ್ತು. ಈ ಒಳ ಜಗಳ ಕಚ್ಚಾಟ ಮಂತ್ರಿಗಳ ಪ್ರತಿಷ್ಠೆ ಇವೆಲ್ಲವೂ ಜಿಲ್ಲೆಯ ಅಭಿವೃದ್ಧಿಗೆ, ಜನಸಾಮಾನ್ಯರಿಗೆ ದ್ರೋಹವಾಗಿ ಪರಿಣಮಿಸಿತು. ಅಧಿಕಾರಿಗಳು ಎಲ್ಲಾ ಇಲಾಖೆಗಳಲ್ಲಿ ಮೇಯಲು ಪ್ರಾರಂಭಿಸಿದರು. ಇದರ ಪರಿಣಾಮವೇ ತಲಕಾವೇರಿ ಅಭಿವೃದ್ಧಿ ನೆಪದಲ್ಲಿ ಲಕ್ಷಾಂತರ ನುಂಗಿ ಹಾಕಿದ್ದಾರೆ. ಅರಣ್ಯ ಇಲಾಖೆ ಹಾಗೂ ಮರಗಳ್ಳರಿಂದ ಅರಣ್ಯ ನಾಶ, ಪೋಲೀಸರೇ ಗೂಂಡಾಗಳಾಗಿದ್ದು, ಮಡೆಮಾರು ಗಿರಿಜನ ಮಹಿಳೆ ಹಾಗೂ ಶಾಲಾ ಬಾಲಕಿಯ ಮೇಲೆ ನಡೆದ ಅತ್ಯಾಚಾರ, ಬರಗಾಲಕ್ಕೆಂದು ಬಂದ ಅಕ್ಕಿಯನ್ನೇ ಲೋಕೋಪಯೋಗಿ ಇಲಾಖೆ ಬಹಿರಂಗವಾಗಿ ಮಾರಾಟ ಮಾಡಿದ್ದು, ಇವೆರಡು ಉದಾಹರಣೆ. ಇವರ ಜಗಳದಿಂದ ಅಧಿಕಾರಿಗಳ ಮೇಲೆ ಹತೋಟಿ ತಪ್ಪಿ ಅಧಿಕಾರಿಗಳೇ ಮಂತ್ರಿಗಳನ್ನು ನಿಯಂತ್ರಿಸುವ ಪರಿಸ್ಥಿತಿ ನಿರ್ಮಾಣವಾಯಿತು.

ಇವೆಲ್ಲದರ ನಡುವೇ ಜಿಲ್ಲೆಯಲ್ಲಿ ಪ್ರತ್ಯೇಕತಾವಾದ ವಿರುದ್ಧ ಜಿಲ್ಲಾ ಪಂಚಾಯ್ತಿ ಕಲಾ ವಿರುದ್ಧ ದ್ವೇಷ ಹೆಚ್ಚಿಸಿತು. ಹೇಗಾದರೂ ಅಧಿಕಾರದಿಂದ ಇಳಿಸಬೇಕೆಂಬ ನಾಣಯ್ಯ, ಕಾಂಗ್ರೆಸ್ ನಾಯಕ ಮಟ್ಟುಚಂಗಪ್ಪ ಮುಂದೆ ಸೋಮವಾರಪೇಟೆಯ ಶಾಸಕನಾಗುವ ಭ್ರಮೆಯಲ್ಲಿರುವ ಸಮಯಸಾಧಕ ರಾಜಕಾರಣಿ. ಜೀವಿಜಯ, ಎಲ್ಲಿಯೂ ಕೂಡ ಗುರುತಿಸಿಕೊಳ್ಳದೇ ಅಭಿವೃದ್ಧಿ ಬಗ್ಗೆ ಜಪ ಮಾಡುತ್ತಿದ್ದ ಸಚಿವೆ ಸುಮಾವಸಂತ್ ಒಂದಾಗಿ ಚಂದ್ರಕಲಾ ವಿರುದ್ಧ ಕೂಡ ಕಟ್ಟಿಕೊಂಡು ಸುಮಾರು 15 ದಿವಸ ಬೆಂಗಳೂರಲ್ಲಿ ಬಿಡಾರ ಹೂಡಿ ಕಾಂಗ್ರೆಸ್ ಪಕ್ಷದ ಸದಸ್ಯರನ್ನು ಬೆಂಗಳೂರಿನ ಹೋಟೆಲ್‌ಒಂದರಲ್ಲಿ ಕೂಡಿಹಾಕಿ ಚಂದ್ರಕಲಾ ವಿರುದ್ಧ ರಾಜ್ಯದ ವರಿಷ್ಠರಿಗೆ ಬಲಾಬಲ ಪ್ರದರ್ಶನ ಮಾಡಿದರು. ಆದರೂ ರಾಜ್ಯದ ವರಿಷ್ಠರು ಚಂದ್ರಕಲಾರಿಗೆ ಬೆಂಗಾವಲಾಗಿ ನಿಂತರು.

ಇದನ್ನು ಸಹಿಸದ ಎಂ.ಎಂ.ನಾಣಯ್ಯನವರ ಕೂಟ ಅವಿಶ್ವಾಸ ನಿರ್ಣಯಕ್ಕೆ ಮುಂದಾಯಿತು. ಚಂದ್ರಕಲಾ ನ್ಯಾಯಾಲಯದ ಮೆಟ್ಟಿಲು ಏರಿದರು. ಅವಿಶ್ವಾಸ ನಿರ್ಣಯದ ಬಗ್ಗೆ ತಡೆಯಾಜ್ಞೆ ತಂದರು. ಮತ್ತೆ ಎಂ.ಎಂ. ನಾಣಯ್ಯ ಕೂಡ ಉಪಾಧ್ಯಕ್ಷರ ನೆರವಿನಿಂದ ತಡೆಯಾಜ್ಞೆಗೆ ತೆರವುಗೊಳಿಸಲು ಯಶಸ್ವಿಯಾಗಿದೆ. ಹೀಗೆ ಕಾಂಗ್ರೆಸ್ ಪಕ್ಷದಲ್ಲಿನ ಅಧಿಕಾರದಾಹ ಸ್ಫೋಟಗೊಂಡು ಬೀದಿ ರಂಪವಾಗಿದೆ. ಕೋರ್ಟ್ ಆದೇಶದಂತೆ ಸಭೆ ಕರೆದ ಚಂದ್ರಕಲಾ ವಿರುದ್ಧ ಅದೇ ಪಕ್ಷದ ಇನ್ನೊಂದು ಗುಂಪು ದಾಂಧಲೆ ಎಬ್ಬಿಸಿ ಹೊರನಡೆದದ್ದು ಇತ್ತೀಚೆಗಿನ ಉದಾಹರಣೆ. ಆದರೆ ತಮ್ಮ ಭಿನ್ನಮತೀಯ ದ್ವೇಷ ಸಾಧನೆಗಾಗಿ ಸಚಿವರ ಎಂ.ಎಂ.ನಾಣಯ್ಯನವರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಭೆಗೆ ಹಾಜರಾಗದಂತೆ ನೋಡಿಕೊಂಡರು. ಈ ಉದ್ಧಟತನ ತೋರಿದ ಅಧಿಕಾರಿ ಅಧ್ಯಕ್ಷರು ಕರೆದ ಸಭೆಯನ್ನೇ ಅಸಿಂಧು ಎಂದು ವಾದಿಸಿದ. ಕೊನೆಗೆ ಸಿಪಿಐ(ಎಂ) ಒಳಗೊಂಡು ವಿರೋಧಪಕ್ಷದವರು, ನಡೆಸಿದ ಪ್ರತಿಭಟನೆಯಿಂದಾಗಿ ಆತ ಮಧ್ಯರಾತ್ರಿ ಪುಸ್ತಕ ಹಿಡಿದು ಹಾಜರಾದ. ಇದು ಕಾಂಗ್ರೆಸ್ ಪಕ್ಷದ ಕೊಡಗು ಜಿಲ್ಲೆಯಲ್ಲಿ ನಡೆಸುತ್ತಿರುವರಾಜಕೀಯ ದೊಂಬರಾಟವಾಗಿದೆ. ಇದಕ್ಕೆ ಬಲಿಯಾದದ್ದು ಜಿಲ್ಲೆಯ ಜನ ಸಾಮಾನ್ಯರು ಜಿಲ್ಲೆಯ ಅಭಿವೃದ್ಧಿ ಜಿಲ್ಲೆಗೆ ಸ್ಪೆಷಲ್ ಪ್ಯಾಕೇಜ್, ಪ್ರತ್ಯೇಕತಾವಾದಕ್ಕೆ ಹಿನ್ನಡೆ ಮಾಡುತ್ತವೆ ಎಂದು ಬೊಗಳೆ ಬಿಟ್ಟ ಕಾಂಗ್ರೆಸ್ ಪಕ್ಷ ತನ್ನ ಆಂತರಿಕ ಕಚ್ಚಾಟದಿಂದಲೇ ತನ್ನ ಅವಧಿಯನ್ನು ಮೂಸುತ್ತಿವೆ. ಜಿಲ್ಲಾ ಪಂಚಾಯ್ತಿ ಒಂದೇ ಒಂದು ಸಭೆಗೆ ಭಾಗವಹಿಸದ ಕೀರ್ತಿ ಜಿಲ್ಲೆಯ ಉಸ್ತುವಾರಿ ಸಚಿವರಿಗೆ ಸಲ್ಲಬೇಕಾಗುತ್ತದೆ. ಇದು ಕೊಡಗಿನ ಚರಿತ್ರೆಯಲ್ಲೇ ಮೊದಲಾಗಿದೆ. ಇಂತಹ ಉಸ್ತುವಾರಿ ಅಬ್ಕಾರಿ ಸಚಿವರು 'ಗೆಸ್ಟ್ ಹೌಸ್' ನಲ್ಲಿ ಕಾಲಕಳೆಯುತ್ತಾರೆ ಹೊರತು ಜನಸಾಮಾನ್ಯರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ಹೀಗೆಯೇ ಕಾಲಹರಣ ಮಾಡುತ್ತಿದ್ದಾರೆ. ಚಂದ್ರಕಲಾರನ್ನು ಅಧಿಕಾರದಿಂದ ಕೆಳಗಿಳಿಸಬೇಕೆಂಬ ಒಂದಂಶದ ಕಾರ್ಯಕ್ರಮವನ್ನು ಉಸ್ತುವಾರಿ ಸಚಿವರು ಇಟ್ಟುಕೊಂಡು ಭಾರಿ ಹೋರಾಟ ನಡೆಸುತ್ತಿದ್ದಾರೆ ವಿನಃ ಜಿಲ್ಲೆಯ ರೈತರ ಪ್ರಶ್ನೆಯಾಗಲಿ, ಜನಸಾಮಾನ್ಯರ ಕಷ್ಟ ಕಾರ್ಪಣ್ಯವಾಗಲೀ ಇವರಿಗೆ ಬೇಕಾಗಿಲ್ಲ. ಇದನ್ನೇ ಹೇಳಿಕೊಂಡು ತಿರುಗುವುದು ಅಧ್ಯಕ್ಷೆ ಚಂದ್ರಕಲಾರ ಕೆಲಸವಾಗುತ್ತಿದೆ. ಈ ವಿದ್ಯಮಾನಗಳ ಕಪ್ಪು ಚುಕ್ಕೆಯಾಗಿ ಹೊರಬಂದಿದೆ. ಅಭಿವೃದ್ಧಿ ಕಾರ್ಯಗಳಲ್ಲಿ 21ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ.



ಎಂದೂ ಒಂದಾಗ ತ್ರಿಮೂರ್ತಿಗಳು. ಚಂದ್ರಕಲಾ, ಎಂ.ಎಂ.ನಾಣಯ್ಯ, ಸುಮಾವಸಂತ

ಬರ ತಂದ ಭಾಗ್ಯವಂತರು
ಅಕ್ಕಿ ಮಾರಿದ ಅಧಿಕಾರಿಗಳು


ಸುಮಾವಸಂತ್ ಎಂಬ ಪ್ರಚಾರಪ್ರಿಯ ಸಚಿವೆ ವಿರಾಜಪೇಟೆ ತಾಲೂಕಿಗೆ ಬರಬಂದಿದೆ ಎಂದು ಘೋಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬರದ ಹೆಸರಿನಲ್ಲಾದರೂ ತಾಲೂಕನ್ನು ಅಭಿವೃದ್ಧಿ ಪಡಿಸುತ್ತೇವೆ ಎಂಬ ನೆಪವನ್ನು ಕಟ್ಟಿಕೊಂಡು 'ಬರ' ಎಂದು ಹೇಳಿ ವಿರಾಜಪೇಟೆ ತಾಲೂಕಿಗೆ ಅನ್ಯಾಯ ಮಾಡಿದ್ದಾರೆ. ಅಲ್ಲದೆ ಬೇರೆ ರೂಪದಲ್ಲಿ ತಾಲೂಕಿಗೆ ಬರಬೇಕಾದ ಹಣವನ್ನು ಇಲ್ಲದೆ ಮಾಡಿದ್ದಾರೆ. ಇದು ಇವರ ಅಭಿವೃದ್ಧಿಗಯ ಕಾಳಜಿ. ವಿರಾಜಪೇಟೆ ತಾಲೂಕಿಗೆ ಬರ ಇಲ್ಲ. ರೈತ ಬೆಳೆದ ಬೆಳೆಗೆ ಬೆಲೆ ಇಲ್ಲದೆ ಕಂಗಾಲಾಗಿದ್ದಾನೆ. ಬರಕ್ಕೂ, ಬೆಲೆಗಳ ಕುಸಿತಕ್ಕೂ ವ್ಯತ್ಯಾಸ ಗೊತ್ತಿಲ್ಲದ ಮಂತ್ರಿ ಸುಮಾವಸಂತ್ ಬರ ಎಂದು ಘೋಷಿಸಿದ್ದರಿಂದ ಸರ್ಕಾರದ ಆಹಾರ ನಿಗಮದಿಂದ ಸುಮಾರು 50 ಲಕ್ಷ ರೂ. ಅಕ್ಕಿ ಬಂದಿದೆ. ಆದರೆ ಹಣಬಂದಿಲ್ಲ. ಹಣ ಬಿಡುಗಡೆ ಮಾಡುವುದಿಲ್ಲವೆಂದು ರಾಜ್ಯ ಸರ್ಕಾರ ಅಧಿಕೃತವಾಗಿ ಸುತ್ತೋಲೆ ಕಳಿಸಿದೆ. ಅದಕ್ಕಾಗಿಯೇ ಅಕ್ಕಿಯನ್ನು ಅಧಿಕಾರಿಗಳು ಬಹಿರಂಗವಾಗಿ ಮಾರಾಟ ಮಾಡುತ್ತಿದಾರೆ. ಗುತ್ತಿಗೆದಾರರು ತಮಗಿಷ್ಟಬಂದಷ್ಟು ಕಟ್ಟಿಕೊಂಡು ಹೋಗಿದ್ದಾರೆ. ಇದು ಇವರ ಆಡಳಿತದ ವೈಖರಿಯಾಗಿದೆ.

ಜಿಲ್ಲೆಯ ಅಭಿವೃದ್ಧಿ ಕಾರ್ಯಗಳನ್ನೆಲ್ಲ ಮೂಲೆಗೆ ತಳ್ಳಿ ಅಭಿವೃದ್ಧಿ ಯೋಜನೆಗಳಿಗು ಅನುಮೋದನೆ ಇಲ್ಲಿವರೆಗೂ ಸಿಕ್ಕಿರಲಿಲ್ಲ. ಪಕ್ಷದೊಳಗೆ ಬಗೆಹರಿಸಬಹುದಾದ ಸಂಗತಿಯನ್ನು ಬೀದಿ ರಂಪಾಟಕ್ಕೆ ಇಳಿದಿರುವುದು ಕಾಂಗ್ರೆಸ್ಸಿನ ಸಾಧನೆ. ಇದಕ್ಕೆ ರಾಜ್ಯದ ಮುಖ್ಯಮಂತ್ರಿಗಳೂ, ಕಾಂಗ್ರೆಸ್ ಅಧ್ಯಕ್ಷರು ಹಿರಿ-ಕಿರಿ ಮಂತ್ರಿಗಳೂ ಭಾಗಿಯಾಗಿರುವುದು ನಾಚಿಕೆಗೇಡಿನ ಖಂಡನೀಯ ಬೆಳವಣಿಗೆ.



ತೆಲಂಗಾಣ ವೀರ ಹೋರಾಟದ ಇನ್ನೊಂದು ಕೊಂಡಿ

ಕಾಂ. ನಂದೂರಿ ಪ್ರಸಾದ್ ರಾವ್ ಇನ್ನಿಲ್ಲ



ತೆಲಂಗಾಣ ಸಶಸ್ತ್ರ ರೈತ ಹೋರಾಟದ ನಾಯಕರಲ್ಲೊಬ್ಬರಾಗಿದ್ದ, ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರೂ ಆಗಿದ್ದ ಆಂಧ್ರಪ್ರದೇಶ ಕಮ್ಯುನಿಸ್ಟ್ ಚಳುವಳಿಯ ಮಹಾನ್ ನಾಯಕ ನಂದೂರಿ ಪ್ರಸಾದ್‌ರಾವ್ ತಮ್ಮ 89 ನೇ ವಯಸ್ಸಿನಲ್ಲಿ ಹೈದರಾಬಾದಿನಲ್ಲಿ ನವೆಂಬರ್ 29 ರಂದು ನಿಧನರಾದರು. ಒಂದು ವಾರದಿಂದ ಮೂತ್ರಪಿಂಡ ಕಾಯಿಲೆಯಿಂದ ನರಳುತ್ತಿದ್ದ ಕಾಂ. ಪ್ರಸಾದ್‌ರಾವ್ ಗುರುವಾರ ರಾತ್ರಿ 8.30 ಕ್ಕೆ ಕೊನೆಯುಸಿರೆಳೆದರು.

ಆಂಧ್ರಪ್ರದೇಶದ ಕೃಷ್ಣ ಜಿಲ್ಲೆಯ ಅರುಗೂಲನು ಗ್ರಾಮದಲ್ಲಿ 1912, ಸೆಪ್ಟೆಂಬರ್ 24 ರಂದು ಶ್ರೀಮಂತ ಕುಟುಂಬದಲ್ಲಿ ಜನಿಸಿದ ರಾವ್ ಗುಡವಾಡ ಮತ್ತು ಮಚಲಿಪಟ್ಟಣಗಳಲ್ಲಿ ಶಾಲಾ ವಿದ್ಯಾಭ್ಯಾಸವನ್ನು ಮುಗಿಸಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಉಚ್ಚ ಶಿಕ್ಷಣಕ್ಕೆ ತೆರಳಿದಾಗ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಿಂದ ಆಕರ್ಷಿತರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ನಂತರ ಎಂದಿಗೂ ಜನಪರ ಚಳುವಳಿಯಿಂದ ಹಿಂದೆ ಸರಿಯದ ಕಾಂ.ನಂದೂರಿಯವರು 1934 ರಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದರು.

67 ವರ್ಷಗಳಷ್ಟು ದೀರ್ಘಕಾಲ ಕಮ್ಯುನಿಸ್ಟ್ ಚಳುವಳಿಯಲ್ಲಿ ಸಕ್ರಿಯ ಕಾರ್ಯನಿರ್ವಹಿಸಿದ ನಂದೂರಿಪ್ರಸಾದ್ ರಾವ್ ರೈತ ಮುಖಂಡರಾಗಿ ಜೀವನ ಆರಂಭಿಸಿ ಕಾರ್ಮಿಕ ಸಂಘಟನೆಗೂ ನಾಯಕತ್ವ ನೀಡಿದರು. ತೆಲಂಗಾಣ ಹೋರಾಟದಲ್ಲಿ ಭಾಗವಹಿಸುವ ಮೊದಲು ಮುನಗಲ ತೆಲಂಗಾಣ ಹೋರಾಟದ ಅಗ್ರಗಣ್ಯ ನಾಯಕರೂ ಆಗಿದ್ದರು. ತೆಲಂಗಾಣ ಚಳುವಳಿಯ ಸಂದರ್ಭದಲ್ಲಿ ಭೂಗತರಾಗಿದ್ದ ಅವರು 1952 ರ ಸಾರ್ವತ್ರಿಕ ಚುನಾವಣೆಯ ನಂತರ ಹೊರಬಂದರು.

8 ವರ್ಷಗಳ ಕಾಲ ಆಂಧ್ರಪ್ರದೇಶ ರೈತ ಸಂಘದ (ರೈತ ಸಂಘಟನೆ) ಕಾರ್ಯದರ್ಶಿಯಾದರೆ, ಎಂಟುವರ್ಷಗಳ ಕಾಲ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಸ್ವಲ್ಪ ಕಾಲ ಆಂಧ್ರಪ್ರದೇಶ ಕೃಷಿ ಕೂಲಿಕಾರ ಸಂಘಟನೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಅವರು ಅಂತರರಾಷ್ಟ್ರೀಯ ಕೃಷಿ ಕಾರ್ಮಿಕ ಸಂಘಟನೆಯ ಉಪಾಧ್ಯಕ್ಷರೂ ಆಗಿದ್ದರು. 1970ರಿಂದ 1996ರ ವರೆಗೆ ಆಂಧ್ರ ಪ್ರದೇಶ ಸಿಐಟಿಯುನ ರಾಜ್ಯ ಕಾರ್ಯದರ್ಶಿಯಾಗಿದ್ದರೆ, 1996ರಿಂದ 1999ರ ವರೆಗೆ ಅಧ್ಯಕ್ಷರಾಗಿದ್ದರು. 2001ನೇ ಇಸವಿವರೆಗೆ ಅಖಿಲ ಭಾರತ ಸಿಐಟಿಯು ಉಪಾಧ್ಯಕ್ಷರೂ ಆಗಿದ್ದರು.

ಆಂಧ್ರ ಪ್ರದೇಶದಲ್ಲಿ ಮತ್ತು ಅಖಿಲ ಭಾರತ ಮಟ್ಟದಲ್ಲಿ ಪರಿಷ್ಕರಣವಾದದ ವಿರುದ್ಧ ನಂದೂರಿ ಪ್ರಸಾದ್ ಅವರ ಹೋರಾಟ ಅಪೂರ್ವವಾದುದು. ಅವಿಭಜಿತ ಸಿಪಿಐ ನಿಂದ ಹೊರಸಡೆದ 32 ಸಂಗಾತಿಗಳಲ್ಲಿ ಒಬ್ಬರಾಗಿದ್ದ ಪ್ರಸಾದ್ ರಾವ್ ಸಿಪಿಐ(ಎಂ)ನ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. 1964ರಿಂದ 1966ರ ವರೆಗೆ ಆಂಧ್ರ ಪ್ರದೇಶದ ಇಡೀ ಮುಖಂಡತ್ವವನ್ನು ಬಂಧನದಲ್ಲಿರಿಸಿದಾಗ, ಪಕ್ಷವನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತರು. ಒಂದೆಡೆ ಪರಿಷ್ಕರಣವಾದದ ವಿರುದ್ಧ ಇನ್ನೊಂದೆಡೆ ಎಡ ದುಸ್ಸಾಹಸವಾದದ ವಿರುದ್ಧ ತತ್ವಬದ್ಧ ಹೋರಾಟ ನಡೆಸಿದರು. ನಕ್ಸಲ್‌ವಾದಿಗಳು ಪಕ್ಷವನ್ನು ಛಿದ್ರಗೊಳಿಸಲು ಪ್ರಯತ್ನಿಸಿದಾಗ ಅದನ್ನು ತಡೆಯಲು ಕಾಮ್ರೇಡ್ ನಂದೂರಿಯವರ ಕೊಡುಗೆ ಅಪಾರ. ಆಂಧ್ರ ಪ್ರದೇಶದ ಕೆಲವು ಜಿಲ್ಲೆಗಳಲ್ಲಿ ಕೆಲವು ಯುವ ಕಾರ್ಯಕರ್ತರು ನಕ್ಸಲ್ ವಾದಿಗಳ ಆಕರ್ಷಕ ಘೋಷಣೆಗೆ ಮಾರುಹೋದಾಗ ಅವರಿಗೆ ಸೈದ್ಧಾಂತಿಕ ತಿಳುವಳಿಕೆ ನೀಡಿ ಪಕ್ಷದಲ್ಲೇ ಉಳಿದು ಎಡಚಳುವಳಿಯ ನಾಯಕರಾಗುವಂತೆ ಬೆಳೆಸಿದರು.

ಸಂಸದೀಯ ಘಟುವಾಗಿ : ಕ್ರಾಂತಿಕಾರಿ ಹೋರಾಟದಲ್ಲಿ ಭಾಗಿಯಾಗುತ್ತಲೇ, ಸಂಸದೀಯ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡ ಕಾಮ್ರೇಡ್ ಪ್ರಸಾದ್ ರಾವ್ ಒಂದು ಅವಧಿಯಲ್ಲಿ ರಾಜ್ಯ ಸಭಾ ಸದಸ್ಯರಾಗಿದ್ದರೆ, ಇನ್ನೊಂದು ಬಾರಿ ಆಂಧ್ರ ವಿಧಾನ ಪರಿಷತ್ತಿನ ಸದಸ್ಯರೂ ಆಗಿದ್ದರು. ಎರಡನೇ ಮತ್ತು ಮೂರನೇ ಯೋಜನೆ ಆಯೋಗದ ಭೂಸುಧಾರಣ ಉಪಸಮಿತಿಯ ಸದಸ್ಯರಾಗಿದ್ದರು.

ಸರಳ ಜೀವನ : ಶ್ರೀಮಂತ ಕುಟುಂಬದಲ್ಲಿ ಹುಟ್ಟಿದರೂ ಅವರ ಜೀವನ ವಿಧಾನ ತೀರಾ ಸರಳವಾದುದು. ಅವರಿಗೆ ಸೇರಿದ ಎಲ್ಲಾ ಆಸ್ತಿಯನ್ನು ಪಕ್ಷಕ್ಕೆ ದಾನವಾಗಿ ನೀಡಿದರು. ತನ್ನ ಸರಳತೆಯ ಮೂಲಕ ಯುವ ಪೀಳಿಗೆಗೆ ಮಾರ್ಗದರ್ಶಕರಾಗಿದ್ದರು.

ಐದಾರು ವರ್ಷದ ಹಿಂದೆ ಕಾಮ್ರೇಡ್ ನಂದೂರಿಯವರು ಬೆಂಗಳೂರಿಗೆ ಬಂದಿದ್ದರು. ಅವರು ಬಂದಕಾರಣ, ಅನಂತಪುರದಲ್ಲಿ ನಡೆಯುತ್ತಿದ್ದ ಆಂಧ್ರ ಸಿಐಟಿಯು ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಲು ತಿರುವನಂತಪುರದಿಂದ ಬರಲಿದ್ದ ಕಾಂ। ಇ.ಕೆ.ನಾಯರ್ ಅವರನ್ನು ಕರೆದೊಯ್ಯಲು ಅದಕ್ಕಾಗಿ ಹಿಂದಿನ ರಾತ್ರಿಯೇ ಬಂದಿದ್ದರು. ಬೆಂಗಳೂರಿನಲ್ಲಿ ಚಳಿ ಬೇರೆ. ನಂದೂರಿ ಪ್ರಸಾದ್ ರಾವ್ ನಡುಗುತ್ತಿದ್ದರು. ಬೆಂಗಳೂರಿನ ಸಂಗಾತಿ ಅವರನ್ನು ಕೇಳಿದರು. ಈ ಚಳಿಯ ಸಂದರ್ಭದಲ್ಲಿ ರಾತ್ರಿಯ ಹೊತ್ತಿನಲ್ಲಿ ನೀವು ಏಕೆ ಬರಬೇಕಿತ್ತು? ಬೇರೆ ಸಂಗಾತಿಗಳನ್ನು ಕಳುಹಿಸಿಕೊಡಬಹುದಿತ್ತಲ್ಲ ಎಂದು ಅದಕ್ಕೆ ಅವರು ನೀಡಿದ ಉತ್ತರ 'ಇ.ಕೆ. ನಾಯನಾರ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯ. ಅಲ್ಲದೆ ಅಖಿಲ ಭಾರತ ಕಿಸಾನ್ ಸಭಾದಲ್ಲಿ ಜತೆಯಾಗಿ ದುಡಿದವರು. ಬೆಂಗಳೂರಿನಿಂದ ಅನಂತಪುರಕ್ಕೆ ಹೋಗುವ ಮಾರ್ಗದಲ್ಲಿ ಇಂದಿನ ವಿದ್ಯಮಾನಗಳ ಬಗ್ಗೆ ಚರ್ಚಿಸಬಹುದು." ಚಳುವಳಿಯಲ್ಲಿ ತೊಡಗಿಸಿಕೊಂಡ ಸಂಗಾತಿಯೊಬ್ಬರು ಅಂತಹ ಇನ್ನೊರ್ವ ಸಂಗಾತಿಗೆ ನೀಡುವ ಗೌರವಕ್ಕೊಂದು ಉದಾಹರಣೆ ಅಷ್ಟೆ.

ಮಾರ್ಕ್ಸ್‌ವಾದಿ ಲೆನಿನ್ ವಾದಿ ತತ್ವಗಳಲ್ಲಿ ಅಚಲವಾದ ನಂಬಿಕೆ ಇಟ್ಟುಕೊಂಡಿದ್ದ ನಂದೂರಿ ಪ್ರಸಾದ್ ರಾವ್ ಅತ್ಯಂತ ಹೆಚ್ಚುಕಾಲ ಪಕ್ಷ ಜೀವನ ನಡೆಸಿದ ಕೆಲವೇ ವ್ಯಕ್ತಿಗಳಲ್ಲಿ ಒಬ್ಬರಾದರು. ತನ್ನ 67 ವರ್ಷಗಳ ಪಕ್ಷದ ಜೀವನದಲ್ಲಿ ಬಹುಕಾಲ ಜೈಲುವಾಸ, ಭೂಗತರಾಗಿ ಕಳೆದರು. ಆದರೆ ಯಾವತ್ತೂ ಧೈರ್ಯಗುಂದಲಿಲ್ಲ. ಬದಲಾಗಿ ಹೋರಾಟ ಮತ್ತು ತ್ಯಾಗ ಚಳುವಳಿಯ ಪ್ರಮುಖ ಅಂಗ ಎಂಬುದನ್ನು ಅರಿತರು. ಬೇರೆಯವರಿಗೆ ತಿಳಿಹೇಳಿದರು. ಅಂತೆಲೇ ವಿಶಾಲಾಂಧ್ರದಲ್ಲಿ ವಿಸ್ತಾರವಾದ ಪಕ್ಷವನ್ನು ಕಟ್ಟುವಲ್ಲಿ ಮುಂದಾದರು.

ಅಂತೆಯೇ 1953ರಲ್ಲಿ ಪಕ್ಷದ 3ನೇ ಅಧಿವೇಶನದಲ್ಲಿ ಅವಿಭಾಜಿತ ಪಕ್ಷದ ಕೇಂದ್ರ ಸಮಿತಿ ಸದಸ್ಯರಾದರು. 1964ರಲ್ಲಿ ಸಿಪಿಐ(ಎಂ)ನ್ನು ಸೇರಿದ ಅವರು 1998ರ ವರೆಗೂ ಕೇಂದ್ರ ಸಮಿತಿ ಸದಸ್ಯರಾಗಿ ಮುಂದುವರಿದರು. ಅನಾರೋಗ್ಯದ ನಿಮಿತ್ತವಾಗಿ ಅಖಿಲ ಭಾರತ ಮುಖಂಡತ್ವದಿಂದ ದೂರ ಸರಿದಿದೆ.

ಶ್ರದ್ಧಾಂಜಲಿ : 31-11-2001ರಂದು ಮಧ್ಯಾಹ್ನ 3 ಗಂಟೆಗೆ ಹೈದರಾಬಾದಿನಲ್ಲಿ ಅಂತಿಮ ಸಂಸ್ಕಾರ ನಡೆಸಲಾಯಿತು. ಪಕ್ಷದ ಕಛೇರಿಯಲ್ಲಿ ನಂದೂರಿಯವರ ಪಾರ್ಥಿವ ಶರೀರವನ್ನು ನೋಡಲು ಅಸಂಖ್ಯಾತ ಪಕ್ಷದ ಸದಸ್ಯರು, ಹಿತೈಷಿಗಳು ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ನಾಗರೀಕರು ನೆರೆದಿದ್ದರು.

ಸಿಪಿಐ(ಎಂ)ನ ಪಾಲಿಟ್ ಬ್ಯೂರೋ ತನ್ನ ಹಿರಿಯ ನಾಯಕನಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ.

ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯರಾದ ಕಾಂ। ಸೂರ್ಯನಾರಾಯಣರಾವ್ ತನ್ನ ಶ್ರದ್ಧಾಂಜಲಿ ಸಂದೇಶದಲ್ಲಿ, ತೆಲಂಗಾಣ ಸಶಸ್ತ್ರ ರೈತ ಹೋರಾಟದ ನಾಯಕರಾಗಿ, ಕಾರ್ಮಿಕ ಮುಖಂಡರಾಗಿ, ಪಕ್ಷದ ಮುಖಂಡರಾಗಿ ಕಾಂ। ನಂದೂರಿಯವರು ಸಲ್ಲಿಸಿದ ಸೇವೆಯನ್ನು ಸ್ಮರಿಸಿಕೊಂಡರು. ಕರ್ನಾಟಕ ರಾಜ್ಯದ ಪಕ್ಷದ ಪರವಾಗಿ ಹೃದಯ ಪೂರ್ವಕ ಶ್ರದ್ಧಾಂಜಲಿ ಸಲ್ಲಿಸಿದರು

8ನೇ ಪುಟದಿಂದ


ಜನಹೋರಾಟಗಳ ನಡುವಿನಿಂದ

ಮೆಕ್ಕೆ ಜೋಳದ ಬೆಳೆಗಳು ಹೊಸ ಆಮದು ನೀತಿಯಿಂದ ತೀವ್ರ ಕುಸಿದು ಹೋದಾಗ ನ್ಯಾಯವಾದ ಬೆಲೆಗೆ ಮತ್ತು ಸರಕಾರದ ದರಕ್ಕೆ ಸರಕಾರ ಖರೀದಿಸಲು ಸತತ 3 ತಿಂಗಳ ಕಾಲ ಹೋರಾಟ ನಡೆಸಲಾಯಿತು. ಆಗಲೂ ರೈತ ಹೋರಾಟ ಸಮಿತಿ ಮುಖಂಡತ್ವ ನೀಡಿತು. ರೋಸಿಹೋದ ರೈತರು ಮೆಕ್ಕೆಜೋಳ ಬೀದಿಗೆ ಚೆಲ್ಲಿ ಬೆಂಕಿ ಹಚ್ಚಿ ಪ್ರತಿಭಟಿಸಿದರು. ಹಲವು ದಿನಗಳ ಧರಣಿ, ಎ.ಪಿ.ಎಂ.ಸಿ. ಯಿಂದ ಮೆರವಣಿಗೆ, ಹಲವು ಸುತ್ತಿನ ಮಾತುಕತೆ ಎ.ಪಿ.ಎಂ.ಸಿ. ಅಧಿಕಾರಿಗಳು ಜಿಲ್ಲಾಧಿಕಾರಿಗಳು, ರೈತ ಮುಖಂಡರು, ಪದೇ ಪದೇ ನಡೆಸಿ ಖರೀದಿ ನಡೆಯುವಾಗ ಉಸ್ತುವಾರಿ ಮಾಡಲು 3 ರೈತ ಪ್ರತಿನಿಧಿಗಳಿರುವ ಸಮಿತಿಯನ್ನು ರಚಿಸಲು ಸಾಧ್ಯವಾಯಿತು.

ಈ ಸಂದರ್ಭದಲ್ಲಿ ಎಫ್.ಸಿ.ಐ. ಅಧಿಕಾರಿಗಳು, ಎ.ಪಿ.ಎಂ.ಸಿ. ದಲ್ಲಾಳರ ಜೊತೆ ಶಾಮೀಲಾಗಿ ರೈತರಿಂದ ಖರೀದಿಸದೇ, ಕಡಿಮೆ ದರಕ್ಕೆ ರೈತರಿಂದ ಖರೀದಿಸಿದ ದಲ್ಲಾಳರಿಂದ ಖರೀದಿಸುವುದನ್ನು ಬಯಲಿಗೆಳೆದು, ರೈತರಿಂದ ನೇರವಾಗಿ ತೀವ್ರ ವೇಗದಲ್ಲಿ ಖರೀದಿಸುವಂತೆ ಪ್ರತಿಭಟನೆ ಬಲಗೊಳಿಸಿ ಎಫ್.ಸಿ.ಐ ಅಧಿಕಾರಿಗಳ ಮೇಲೆ ತೀವ್ರ ಒತ್ತಡ ಹೇರಿದ್ದರಿಂದ ದಲ್ಲಾಳರು ಸಂಘಟಿತರಾಗಿ ನಮ್ಮ ವಿರುದ್ಧ ಕೆಂಗಣ್ಣು ಬೀರುವಂತಹ ಪರಿಸ್ಥಿತಿ ಉಂಟಾಗಿ, ಒತ್ತಡ ಬಂದಿತು. ಹೋರಾಟ ಸಮಿತಿಯ ಕೆಲ ಮುಖಂಡರು ಶಾಮೀಲಾಗಿ ರೈತ ದ್ರೋಹ ಬಗೆದುದು ಬೆಳಕಿಗೆ ಬಂತು. ಆಗಲು ನಾವು ಬಲವಾಗಿ ಹೋರಾಟ ಒತ್ತಡ ಮುನ್ನಡೆಸಿದ್ದರಿಂದ ರೈತರ ಹಿತ ಕಾಪಾಡಲು ಸಾಧ್ಯವಾಯಿತು. ಆದರೆ, ಅದೇ ಸಂದರ್ಭದಲ್ಲಿ ನಮ್ಮ ಮುಖಂಡತ್ವವನ್ನು ಬೆದರಿಸಲು ಕ್ರಮವಹಿಸಿ ಎಲ್ಲಾ ದಲ್ಲಾಳರು ಒಗ್ಗೂಡಿ ನಗರದ ಶಾಸಕರಾದ ಹಾಗೂ ಮಂತ್ರಿಗಳಾದ ದಿವಾಕರಬಾಬು ಮೂಲಕ ಎ.ಪಿ.ಎಂ.ಸಿ. ಆವರಣದಲ್ಲಿ ಬೆದರಿಕೆಯನ್ನು ಹಾಕಲಾಯಿತು. ಅಂತಹ ಸಂದರ್ಭದಲ್ಲಿ ರೈತ ಹೋರಾಟ ಸಮಿತಿ ಹೆದರುವಂತಹ ಸಂದರ್ಭದಿಂದಾಗಿ ಕರ್ನಾಟಕ ಪ್ರಾಂತ ರೈತ ಸಂಘ ನೇರವಾಗಿ ನಾಯಕತ್ವವಹಿಸಿ ಮಂತ್ರಿಗಳ ದೌರ್ಜನ್ಯ ಖಂಡಿಸಿ ಜಿಲ್ಲೆಯಾದ್ಯಂತ ಪ್ರತಿಭಟನೆಗೆ ಕರೆ ನೀಡಿತು. ರೈತ ಸಂಘದ ನಾಯಕರಾದ ಕಾ। ಶಿವಶಂಕರ್ ಅವರ ಮೇಲಿನ ಬೆದರಿಕೆಯನ್ನು ಜಿಲ್ಲೆಯಾದ್ಯಂತ ಪ್ರತಿಭಟಿಸಲಾಯಿತು. ಮತ್ತು ಹೋರಾಟದಲ್ಲಿ ಯಶಸ್ಸು ಸಾಧಿಸಲಾಯಿತು.

ಸ್ಫೂರ್ತಿ ಹೆಚ್ಚಿಸಿದ ಸಮ್ಮೇಳನ

ಕರ್ನಾಟಕ ರಾಜ್ಯದ ಜನತೆಯ ಕನಸಿನ ವಿಜಯನಗರ ಉಕ್ಕಿನ ಕಾರ್ಖಾನೆಯ ಹೃದಯಭಾಗವಾದ ತೋರಣಗಲ್ಲು ಗ್ರಾಮದ ಸಮುದಾಯಭವನದ ಪಿ.ರಾಮಚಂದ್ರರಾವ್ ಸಭಾಂಗಣದಲ್ಲಿ ಬಳ್ಳಾರಿ ಜಿಲ್ಲಾ 6ನೇ ಸಮ್ಮೇಳನವನ್ನು ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿಯು ನವೆಂಬರ್ 9-11, 2001 ಮೂರು ದಿನಗಳ ಕಾಲ ಅತ್ಯಂತ ಯಶಸ್ವಿಯಾಗಿ ಸಂಘಟಿಸಿತು.



ನೂತನ ಜಿಲ್ಲಾ ಕಾರ್ಯದರ್ಶಿ ಯು.ಬಸವರಾಜು

ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿ ಬಂದ 105 ಪ್ರತಿನಿಧಿಗಳು ಹಾಗೂ ವೀಕ್ಷಕರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಎಸ್.ಪ್ರಸನ್ನಕುಮಾರ್‌ರವರು ಧ್ವಜಾರೋಹಣ ನೆರವೇರಿಸುವುದರೊಂದಿಗೆ ಸಮ್ಮೇಳನದ ಕಲಾಪಗಳು ಆರಂಭಗೊಂಡವು. ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್, ಎಸ್.ವೈ.ಗುರುಶಾಂತ್ ಅತಿಥಿಗಳಾಗಿ ಮಾರ್ಗದರ್ಶಕರಾಗಿ ಪಾಲ್ಗೊಂಡಿದ್ದರು.

ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ ಪರವಾಗಿ 63 ಪುಟಗಳ ಸುದೀರ್ಘ ಕರಡು ವರದಿಯನ್ನು ಕಾರ್ಯದರ್ಶಿ ಯು.ಬಸವರಾಜ್ ಸಮ್ಮೇಳನದ ಮುಂದಿಟ್ಟರು. ಸುಮಾರು 8 ತಾಸುಗಳ ಕಾಲ ಒಟ್ಟು 6 ಜನ ಮಹಿಳಾ ಪ್ರತಿನಿಧಿಗಳು ಸೇರಿ 36 ಸಂಗಾತಿಗಳು ವರದಿಯ ಮೇಲೆ ಚರ್ಚೆ ನಡೆಸಿದರು.

ಸಮ್ಮೇಳನ ಅಂಗೀಕರಿಸಿದ ಈ ಕಾರ್ಯಭಾರವನ್ನು ಮುಂದಿನ 3 ವರುಷಗಳಲ್ಲಿ ಅನುಷ್ಠಾನಕ್ಕೆ ತರಲು ಪಕ್ಷವನ್ನು ಬೆಳೆಸಿ ಮುನ್ನಡೆಸಲು 25 ಸಂಗಾತಿಗಳಿರುವ ಜಿಲ್ಲಾ ಸಮಿತಿಯನ್ನು ಸಮ್ಮೇಳನವು ಸರ್ವಾನುಮತದಿಂದ ಆರಿಸಿತು.

ನೂತನ ಜಿಲ್ಲಾ ಸಮಿತಿಯು ಯು. ಬಸವರಾಜ್ ಇವರನ್ನು ನೂತನ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆ ಮಾಡಿತು. ಅಲ್ಲದೇ 8 ಜನ ಸಂಗಾತಿಗಳಿರುವ ಕಾರ್ಯದರ್ಶಿ ಮಂಡಳಿಯನ್ನು ಬಹುಮತದಿಂದ ಆಯ್ಕೆ ಮಾಡಿತು!

ಅಫಘಾನಿಸ್ತಾನ : ತಾಲಿಬಾನ್ ಸರ್ಕಾರದ ಪತನ-ಮುಂದೇನು?

ಅಫಘಾನಿಸ್ತಾನದ ಪ್ರಮುಖ ನಗರಗಳಲ್ಲಿ ತಾಲೀಬಾನ್ ಪಡೆಗಳನ್ನು ಯಶಸ್ವಿಯಾಗಿ ಹೊರದಬ್ಬಲಾಗಿದೆ. ಈಗ ಹೊಸ ಸರ್ಕಾರದ ರಚನೆಯತ್ತ ಅಫಘಾನ್ ಹೊರಗೆ ಮಾತುಕತೆಗಳು ನಡೆದಿವೆ. ಈ ಸರ್ಕಾರದ ಸ್ವರೂಪವೇನು? ಅಮೇರಿಕಾ ಏನನ್ನು ಬಯಸುತ್ತಿದೆ? ಏಷ್ಯಾಕ್ಕೆ ಕಾದಿರುವ ಅಪಾಯವೇನು?



ಮುನ್ನಡೆಯಲ್ಲಿ ಉತ್ತರ ಮೈತ್ರಿಕೂಟದ ಸೈನಿಕರು

ಕಾಬೂಲ್‌ನಲ್ಲಿ ತಾಲಿಬಾನ್ ಸರ್ಕಾರ ಪತನವಾಗಿದೆ. ಉತ್ತರ ಮೈತ್ರಿಕೂಟದ ಪಡೆಗಳು ಆಶ್ಚರ್ಯಕರವಾದ ವೇಗದಲ್ಲಿ ಅರ್ಧದಷ್ಟು ಅಫಘಾನಿಸ್ತಾನದ ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದಾರೆ. ಪ್ರಮುಖ ನಗರಗಳಾದ ಮಜಾರ್-ಎ-ಶರೀಫ್, ಹೆರತ್, ಕುಂಡುರುಘ್, ತಾಲುಕಾನ್, ಬಾಮಿಯಾನ್ ಮತ್ತು ಜಲಾಲಬಾದ್ ಮತ್ತು ಅವು ಇರುವ ಪ್ರಾಂತ್ಯಗಳನ್ನು ವಶಪಡಿಸಿಕೊಂಡಿದ್ದಾರೆ. ಕುಂಡುರುಘ್ ಸುತ್ತಮುತ್ತ ಭಾರಿ ಹೋರಾಟ ನಡೆಯುತ್ತಿದೆ. ಸುಮಾರು 10-15 ಸಾವಿರ ತಾಲಿಬಾನ್ ಸೈನಿಕರು ಕುಂಡುರುಘ್‌ನಲ್ಲಿ ಉತ್ತರ ಮೈತ್ರಿಕೂಟದ ಪಡೆಗಳಿಂದ ಸುತ್ತುವರೆಯಲ್ಪಟ್ಟಿದ್ದಾರೆ. ತಾಲಿಬಾನ್ ಸೈನಿಕರಲ್ಲಿ ದೊಡ್ಡ ಸಂಖ್ಯೆಯಲ್ಲಿ ವಿದೇಶಿಗಳು-ಪಾಕಿಸ್ತಾನಿ ಸೈನಿಕರು, ಉಝ್ಬೇಕ್, ಚೆಚೆನ್, ಅರಬ್, ಪಾಕಿಸ್ತಾನಿ ಜೆಹಾದಿಗಳು - ಇದ್ದಾರೆ. ಇವರಲ್ಲಿ ಹಲವರು ಮುಖ್ಯವಾಗಿ ಪಾಕಿಸ್ತಾನಿ ಸೈನಿಕರು ಈಗಾಗಲೇ ಪಾಕಿಸ್ತಾನಕ್ಕೆ ಓಡಿ ಹೋಗಿದ್ದಾರೆ. ಪಾಕಿಸ್ತಾನ ಹೆಲಿಕಾಪ್ಟರುಗಳನ್ನು ಬಳಸಿ ತಾಲಿಬಾನ್ ಜತೆ ಇದ್ದ ಹಿರಿಯ ಪಾಕಿಸ್ತಾನಿ ಅಧಿಕಾರಿಗಳನ್ನು ವಾಪಸು ಕರೆಸಿಕೊಂಡಿದೆ. ಕುಂಡುರುಘ್‌ನಲ್ಲಿರುವ ತಾಲಿಬಾನ್ ಸೈನಿಕರಲ್ಲಿ ಅಫಘಾನರು ಉತ್ತರ ಮೈತ್ರಿಕೂಟದ ಪಡೆಗಳಿಗೆ ಶರಣಾಗಲು ತಯಾರಿದ್ದರು. ವಿದೇಶಿ ತಾಲಿಬಾನ್‌ಗಳು ವಿಶ್ವಸಂಸ್ಥೆಗೆ ತಾವು ಶರಣಾಗುತ್ತೇವೆ ಎಂದು ಹೇಳಿದ್ದಾರೆ. ಅವರ ಪರವಾಗಿ ಪಾಕಿಸ್ತಾನ ಸರ್ಕಾರ ಅಮೆರಿಕ, ಬ್ರಿಟನ್‌ಗಳ ಮೇಲೆ ವಿಶ್ವಸಂಸ್ಥೆ ಪಡೆಗಳ ಮುಂದೆ ಶರಣಾಗತಿಗೆ ವ್ಯವಸ್ಥೆ ಮಾಡುವಂತೆ ಒತ್ತಡ ಹಾಕುತ್ತಿದೆ. ಆದರೆ ಈವರೆಗೆ ಸಫಲವಾಗಿಲ್ಲ.

ಉತ್ತರ-ಮೈತ್ರಿಕೂಟದ ಮಿಂಚಿನ ವಿಜಯ

ಕಾಬೂಲ್ ಮತ್ತು ಉತ್ತರ ಅಫಘಾನಿಸ್ತಾನದ ಪ್ರಾಂತ್ಯಗಳನ್ನು ಉತ್ತರ ಮೈತ್ರಿಕೂಟದ ಪಡೆಗಳಿಗ ಯಾವುದೇ ಗಂಭೀರ ಪ್ರತಿರೋಧ ಒಡ್ಡದೆ ಬಿಟ್ಟುಕೊಟ್ಟದ್ದು ಮತ್ತು ಉತ್ತರ ಅಫಘಾನಿಸ್ತಾನದಲ್ಲಿ ಉತ್ತರ ಮೈತ್ರಿಕೂಟದ ಪಡೆಗಳ ವಿಜಯದ ವೇಗ ಎಲ್ಲರಿಗೂ ಆಶ್ಚರ್ಯ ತಂದಿದೆ. ಅಫಘಾನಿಸ್ತಾನದಲ್ಲಿ ಯುದ್ಧದ ಗತಿಯನ್ನು ನೇರವಾಗಿ ನಿಯಂತ್ರಿಸುತ್ತಿದ್ದೇವೆ ಎಂದು ಬೀಗುತ್ತಿರುವ ಅಮೆರಿಕನ್ ಸರ್ಕಾರಕ್ಕೂ



ಮಾಜಿ ಅಧ್ಯಕ್ಷ ರಬ್ಬಾನಿ

ಆಶ್ಚರ್ಯವಾಗಿದೆ. ಇದು ತಾಲಿಬಾನ್ ಸೋಲು ಅಲ್ಲ. ತಾನು ಪ್ರಬಲವಾಗಿರುವ ಕಂದಹಾರ್ ಮತ್ತು ದಕ್ಷಿಣದ ಪ್ರಾಂತ್ಯಗಳಿಗೆ ಹಿಂಜರಿದು ಅಲ್ಲಿಂದ ತೀವ್ರ ಪ್ರತಿರೋಧ ಒಡ್ಡುವ, ದೀರ್ಘ ಗೆರಿಲ್ಲಾ ಹೋರಾಟ ನಡೆಸುವ ರಣನೀತಿ ಇರಬಹುದು ಎಂದು ಹಲವರ ಅಂದಾಜು. ಇದಲ್ಲದೆ ಉಝ್ಬೆಕ್, ತಾಜಿಕ್, ಹಜಾರಾ ಬುಡಕಟ್ಟಿನವರು ಬಹುಸಂಖ್ಯಾತರಾಗಿರುವ ಉತ್ತರದ ಪ್ರಾಂತ್ಯಗಳಲ್ಲಿ ಪುಶ್ತುನ್ ಮತ್ತು ವಿದೇಶಿಯರು ಹೆಚ್ಚಾಗಿರುವ ತಾಲಿಬಾನ್‌ಗಳಿಗೆ ಹೆಚ್ಚಿನ ನೆಲೆ, ಬೆಂಬಲ ಇರಲಿಲ್ಲ, ಅವರು ಅತ್ಯಂತ ಕುಪ್ರಸಿದ್ಧರಾಗಿದ್ದರು. ಆದರೆ ಪುಶ್ತುನ್ ಬಹುಸಂಖ್ಯಾತರಾಗಿರುವ ದಕ್ಷಿಣದ ಪ್ರಾಂತ್ಯಗಳಲ್ಲಿ ತಾಲಿಬಾನ್‌ಗಳಿಗೆ ಸಾಕಷ್ಟು ಬೆಂಬಲ, ನೆಲೆ ಇದೆ. ಉತ್ತರ ಮೈತ್ರಿಕೂಟದ ಪಡೆಗಳ ಸೈನಿಕರು ಪ್ರಮುಖವಾಗಿ ತಾಜಿಕ್, ಉಝ್‌ಬೆಕ್, ಹಜಾರಾ ಬುಡಕಟ್ಟುಗಳಿಗೆ ಸೇರಿದವರಾಗಿದ್ದು - ಅವರಿಗೆ ದಕ್ಷಿಣ ಪ್ರಾಂತ್ಯಗಳಲ್ಲಿ ಸಾಕಷ್ಟು ಬೆಂಬಲ, ನೆಲೆ ಇಲ್ಲ. ಇದಲ್ಲದೆ ಅಫಘಾನಿಸ್ತಾನದ ಕಳೆದ ಎರಡು ದಶಕಗಳ ಚರಿತ್ರೆ ಗೊತ್ತಿರುವವರಿಗೆ ಯುದ್ಧದ ವೇಗದ ಬಗೆಗೂ ಅಷ್ಟೇನೂ ಆಶ್ಚರ್ಯವಾಗಿರಲಿಕ್ಕಿಲ್ಲ. 1980 ರಲ್ಲಿ ಸೋವಿಯತ್ ಪಡೆಗಳಾಗಲಿ, 1992 ರಲ್ಲಿ ಮುಜಾಹಿದ್ದೀನ್(ಈಗಿನ ಉತ್ತರ ಮೈತ್ರಿಕೂಟ ಹೆಚ್ಚು ಕಡಿಮೆ), 1994-95 ರಲ್ಲಿ ತಾಲಿಬಾನ್ ಕೆಲವೇ ವಾರಗಳಲ್ಲಿ ದೇಶದ ಹೆಚ್ಚಿನ ಭಾಗಗಳನ್ನು ಮಿಂಚಿನವೇಗದಲ್ಲಿ ಆಕ್ರಮಿಸಿಕೊಂಡಿದ್ದರು.

'ಮಂದಗಾಮಿ' ತಾಲಿಬಾನ್ ಮುಂದಿನ ಸರಕಾರದಲ್ಲಿರುತ್ತದೆಯೇ?

ಮುಂದಿನ ಅಫಘಾನಿಸ್ತಾನ ಸರ್ಕಾರ ಯಾರು ಮಾಡಬೇಕು ಎಂಬ ಬಗ್ಗೆ ರಾಜಕೀಯ ಚಟುವಟಿಕೆ ಈಗಾಗಲೇ ಆರಂಭವಾಗಿದೆ. ಈ ಚಟುವಟಿಕೆ ಕಾಬೂಲ್ ಮತ್ತು ಅಫಘಾನಿಸ್ತಾನದ ಒಳಗಿಗಿಂತ ಹೊರಗೆ (ವಾಶಿಂಗ್ಟನ್, ಬರ್ಲಿನ್, ಲಂಡನ್, ಇಸ್ಲಾಮಾಬಾದ್‌ಗಳಲ್ಲಿ) ನಡೆಯುತ್ತಿದೆ ಎಂಬುದೇ ಅಫಘಾನಿಸ್ತಾನದ ದುರಂತ. ಅಮೆರಿಕ ತಾಲಿಬಾನ್-ನಂತರದ ಅಫಘಾನಿಸ್ತಾನದ ಸರ್ಕಾರ ತನ್ನ ನೇರ ನಿಯಂತ್ರಣದಲ್ಲಿರಬೇಕು ಎಂದು ಶತಪ್ರಯತ್ನ ನಡೆಸುತ್ತಿದೆ. ಆದರೆ ಮಿಂಚಿನ ವೇಗದಲ್ಲಿ ಆಗುತ್ತಿರುವ ಬೆಳವಣಿಗೆಗಳು ಅಮೆರಿಕನ್ನರನ್ನು ತಬ್ಬಿಬ್ಬು ಮಾಡಿವೆ. ಮಾಜಿ ಅಫಘಾನ್ ರಾಜನ ನಾಯಕತ್ವದಲ್ಲಿ ಬಹು-ಪಕ್ಷೀಯ ಸರ್ಕಾರ ನಡೆಸುವ ಅಮೆರಿಕ-ಬ್ರಿಟನ್‌ಗಳ ಯೋಜನೆಯಲ್ಲಿ ಭಾರಿ ಮುನ್ನಡೆ ಆಗಿಲ್ಲ. ಮಾಜಿ ರಾಜ ಝಾಹಿರ್ ಶಾಹನ ನಾಯಕತ್ವದಲ್ಲಿ ಉತ್ತರ ಮೈತ್ರಿಕೂಟ, ತಾಲಿಬಾನ್‌ನ ಕೆಲವು ನಾಯಕರು, ಹೀಗೆ ಯಾವ ಗುಂಪು ಪೂರ್ತಿ ನಿಯಂತ್ರಣದಲ್ಲಿ ಇರದ ಸರ್ಕಾರ ಮಾಡಬೇಕು ಅಂತ ಅಮೆರಿಕದ ಹವಣಿಕೆ. ಇಂತಹ ಸರ್ಕಾರ ತನ್ನ ಮೇಲೆ ಆರ್ಥಿಕವಾಗಿ ರಾಜಕೀಯವಾಗಿ ಅವಲಂಬಿತವಾಗಿರುತ್ತದೆ. ತನ್ನ ತಾಳಕ್ಕೆ ತಕ್ಕ ಹಾಗೆ ಕುಣಿಯುತ್ತದೆ. ಅಮೆರಿಕದ ಮಿಲಿಟರಿ-ಆರ್ಥಿಕ ಹಿತಾಸಕ್ತಿ ಕಾಪಾಡುವುದನ್ನು ಮುಖ್ಯ ಗುರಿಯಾಗಿ ಹೊಂದಿರುತ್ತದೆ - ಎಂಬೆಲ್ಲಾ ಅಮೆರಿಕದ ಯೋಜನೆ (ಕನಿಷ್ಠ ಸುಸೂತ್ರವಾಗಿ) ಕೈಗೂಡುವಂತೆ ಕಾಣುತ್ತಿಲ್ಲ. ಉತ್ತರ-ಮೈತ್ರಿ ಕೂಟದ ಪಡೆಗಳು ಕಾಬೂಲನ್ನು ವಶಪಡಿಸಿಕೊಳ್ಳಬಾರದು ಎಂಬ ಅಮೆರಿಕದ ಆಣತಿಯನ್ನು ಮೀರಲಾಗಿದೆ. ಕಾಬೂಲ್ ಭದ್ರತೆಯನ್ನು ಅಮೆರಿಕ-ಬ್ರಿಟನ್ ನಾಯಕತ್ವದ 'ಅಂತರ್ರಾಷ್ಟ್ರೀಯ' ಸೈನ್ಯ ನೋಡಿಕೊಳ್ಳುತ್ತದೆ ಎಂಬ ಅಮೆರಿಕದ ಆಣತಿಯನ್ನು ಉತ್ತರಮೈತ್ರಿಕೂಟದ ಪಡೆಗಳು ನಿರ್ಲಕ್ಷಿಸಿವೆ. ಕಾಬೂಲ್ ಉತ್ತರ-ಮೈತ್ರಿಕೂಟದ ನಿಯಂತ್ರಣದಲ್ಲಿದೆ. ಬಹು-ಬುಡಕಟ್ಟಿನ ಸರ್ವಪಕ್ಷೀಯ ಸರ್ಕಾರ ರಚಿಸಬೇಕು ಎಂಬ ಅಮೆರಿಕನ್ ಹೇಳಿಕೆಗೆ ಹುಸಿ-ಬೆಂಬಲ ಸೂಚಿಸುತ್ತಾ ಉತ್ತರ-ಮೈತ್ರಿಕೂಟದ ರಾಜಕೀಯ ನಾಯಕತ್ವ ಮುಂದಿನ ಯಾವುದೇ ಸರ್ಕಾರದಲ್ಲಿ ತನಗೆ ಸಿಂಹಪಾಲು ದೊರಕುವಂತೆ ಸರ್ವಪ್ರಯತ್ನ ನಡೆಸುತ್ತಿದೆ. ಇದಕ್ಕೆ ರಶ್ಯಾ, ಭಾರತದ ಬೆಂಬಲವೂ ಇದೆ. ಅಮೆರಿಕ, ಬ್ರಿಟನ್, ಪಾಕಿಸ್ತಾನಗಳು ಪುಶ್ತುನ್ ಬುಡಕಟ್ಟಿಗೆ ಪ್ರಾತಿನಿಧ್ಯದ ಹೆಸರಲ್ಲಿ 'ಮಂದಗಾಮಿ ತಾಲಿಬಾನ್‌ಗಳನ್ನು ಸರ್ಕಾರದೊಳಗೆ ಹಿಂಬಾಗಿಲಿನಿಂದ ತುರುಕುವ ಪ್ರಯತ್ನ ನಡೆಸುತ್ತಿದೆ. ಇದನ್ನು ಉತ್ತರ ಮೈತ್ರಿಕೂಟ, ಭಾರತ, ರಶ್ಯಾಗಳು ವಿರೋಧಿಸಿವೆ. ಹಲವು ಇತರ ದೇಶಗಳು ತಾಲಿಬಾನ್‌ಗಳಲ್ಲಿ 'ಮಂದಗಾಮಿ' ಎಂಬಂತಹ ಪ್ರಾಣಿ ಇಲ್ಲ ಎಂದು ಖಾರವಾಗಿ ಇಂತಹ ಪ್ರಯತ್ನಗಳನ್ನು ಖಂಡಿಸಿದ್ದಾರೆ. ಇದೇ ನಿಲುವನ್ನು ಭಾರತ ಸರ್ಕಾರ ತೆಗೆದುಕೊಂಡಿದ್ದರೂ ವಾಜಪೇಯಿಯವರ ಅಮೆರಿಕ ಭೇಟಿ ನಂತರ (ಮಂದಗಾಮಿ ತಾಲಿಬಾನ್‌ಗಳು ಮುಂದಿನ ಅಫಘಾನ್ ಸರ್ಕಾರದ ಭಾಗವಾಗಿರಬಹುದು ಎಂಬ ಹೇಳಿಕೆ ಮೂಲಕ) ತನ್ನ ನಿಲುವನ್ನು ಅಮೆರಿಕದ ಒತ್ತಡದಿಂದ ಬದಲಾಯಿಸಿದಂತಿದೆ.

> **'ಮಂದಗಾಮಿ' ತಾಲಿಬಾನ್ ಮುಂದಿನ ಸರಕಾರದಲ್ಲಿರುತ್ತದೆಯೇ?**
>
> ಮುಂದಿನ ಅಫಘಾನಿಸ್ತಾನ ಸರ್ಕಾರ ಯಾರು ಮಾಡಬೇಕು ಎಂಬ ಬಗ್ಗೆ ರಾಜಕೀಯ ಚಟುವಟಿಕೆ ಈಗಾಗಲೇ ಆರಂಭವಾಗಿದೆ. ಈ ಚಟುವಟಿಕೆ ಕಾಬೂಲ್ ಮತ್ತು ಅಫಘಾನಿಸ್ತಾನದ ಒಳಗಿಗಿಂತ ಹೊರಗೆ (ವಾಶಿಂಗ್ಟನ್, ಬರ್ಲಿನ್, ಲಂಡನ್, ಇಸ್ಲಾಮಾಬಾದ್‌ಗಳಲ್ಲಿ) ನಡೆಯುತ್ತಿದೆ ಎಂಬುದೇ ಅಫಘಾನಿಸ್ತಾನದ ದುರಂತ.

ಶರತ್‌ಚಂದ್ರ

ಈ ನಡುವೆ ಅಮೆರಿಕ ಮತ್ತು ಪಾಕಿಸ್ತಾನ ಎರಡೂ ತಾಲಿಬಾನ್‌ಗಳು ಉತ್ತರ ಮೈತ್ರಿಕೂಟದ ಪಡೆಗಳಿಗೆ ಶರಣಾಗದಂತೆ ಅಥವಾ ಪೂರ್ಣವಾಗಿ ಬಂಧಿಯಾಗದಂತೆ ಪ್ರಯತ್ನಿಸುತ್ತಿದ್ದಾರೆ. ತಾಲಿಬಾನ್‌ಗಳು ಪೂರ್ಣವಾಗಿ ಉತ್ತರ ಮೈತ್ರಿಕೂಟಕ್ಕೆ ಶರಣಾದರೆ ಅಥವಾ ಪೂರ್ಣವಾಗಿ ಬಂಧಿಯಾಗುವಂತೆ ಒತ್ತಡ ಬಿದ್ದರೆ ತಮ್ಮ ಬಣ್ಣ ಬಯಲಾಗಬಹುದು ಎಂಬ ಭಯ ಇಬ್ಬರಿಗೂ -ತಾಲಿಬಾನ್‌ನನ್ನು ಗದ್ದುಗೆಗೆ ಏರಿಸುವುದರಲ್ಲಿ, ಅವರ ಸರ್ಕಾರವನ್ನು ಕಾಪಾಡುವುದರಲ್ಲಿ ಅಮೆರಿಕ-ಪಾಕಿಸ್ತಾನಗಳ ಜಂಟಿ ಜವಾಬ್ದಾರಿ ಅಂತರ್ರಾಷ್ಟ್ರೀಯವಾಗಿ ಗೊತ್ತಾದರೆ 'ಭಯೋತ್ಪಾದಕತೆ ವಿರುದ್ಧ ಹೋರಾಟ'ದ ಪೊಳ್ಳು ಬಯಲಾದೀತು. ಇದರಿಂದಾಗಿ ಮಧ್ಯ ಏಶ್ಯಾದ ತೈಲ-ಅನಿಲ ಸಂಪನ್ಮೂಲಗಳ ಮೇಲೆ ಮತ್ತು ಏಶ್ಯಾದ ಮೇಲೆ ಮಿಲಿಟರಿ - ರಾಜಕೀಯ ಹಿಡಿತ ಸಾಧಿಸಲು ಅಫಘಾನಿಸ್ತಾನದ ಆಯಕಟ್ಟಿನ ಪ್ರದೇಶವನ್ನು ನೆಲೆಯಾಗಿ ಮಾಡುವ ಯೋಜನೆ ಭಂಗವಾದೀತು - ಎಂಬ ಭಯ ಅವರಿಗೆ ಇದೆ.

ಏಶ್ಯಾಕ್ಕೆ ಕಾದಿರುವ ಅಪಾಯ

ಇದಕ್ಕಾಗಿ ಅಂತರ್ರಾಷ್ಟ್ರೀಯ ಶಾಂತಿ-ಪಡೆಗಳನ್ನು ಅಫಘಾನಿಸ್ತಾನದಲ್ಲಿ ನೆಲೆಸುವ, ಆ ಪಡೆಗಳ ನೇತೃತ್ವದಲ್ಲಿ ಅಫಘಾನಿಸ್ತಾನದ ರಾಜಕೀಯ ಭವಿಷ್ಯ ನಿರ್ಧರಿಸುವ ಪ್ರಸ್ತಾವ ಇಡಲಾಗುತ್ತಿದೆ. ಅಫಘಾನ್ ಗುಂಪುಗಳು ಇದಕ್ಕೆ ಒಪ್ಪಿಕೊಳ್ಳುವ ಸಂಭವಕಡಿಮೆ. ಅಫಘಾನ್ ಗುಂಪುಗಳು ಶಸ್ತ್ರ ಬಿಟ್ಟುಕೊಟ್ಟು ಬರಿಯ ಕೈಗೊಂಬೆ ಸರ್ಕಾರದಲ್ಲಿ ಕೂತಿರಬೇಕು ಎಂದು ಇದರ ಉದ್ದೇಶ. ಆದರೆ ಉತ್ತರ-ಮೈತ್ರಿಕೂಟದ ಒಳಗೆ ಇರುವ ಗುಂಪುಗಾರಿಕೆ, ಭಿನ್ನಾಭಿಪ್ರಾಯ, ಮೇಲಾಟ ಮತ್ತು ತಾಲಿಬಾನ್‌ಗಳ ಬಲ ಬಳಸಿ ಅಮೆರಿಕ-ಪಾಕಿಸ್ತಾನಗಳು ಇದನ್ನು ಸಾಧಿಸಲು ಪ್ರಯತ್ನಿಸುವ ಸಾಧ್ಯತೆ ಇಲ್ಲದಿಲ್ಲ. ಇದು ಸಾಧ್ಯವಾಗದಿದ್ದರೆ ಅಫಘಾನಿಸ್ತಾನವನ್ನು ಉತ್ತರ-ದಕ್ಷಿಣ ಎಂದು ಒಡೆಯುವ ಸಾಧ್ಯತೆಯೂ ಇಲ್ಲದಿಲ್ಲ. ಒಡೆದು ಆಳುವ ಸಾಮ್ರಾಜ್ಯಶಾಹಿ ನೀತಿಯನ್ನು ಯುಗೋಸ್ಲಾವಿಯಾದಲ್ಲಿ ಅಮೆರಿಕ ಸಮರ್ಥವಾಗಿ ಬಳಸಿ ಆ ಪ್ರದೇಶದಲ್ಲಿ ಮಿಲಿಟರಿ-ರಾಜಕೀಯ ಹಿಡಿತ ಸಾಧಿಸಿದೆ. ಇದು ಇಡೀ ಏಶ್ಯಾದ ಭದ್ರತೆಗೆ ಮುಳುವಾಗಬಹುದು. ಅಫಘಾನಿಸ್ತಾನ ಒಡೆದರೆ ಇದರ ನೆರೆಯ ಪಾಕಿಸ್ತಾನ, ಉಝ್ಬೇಕಿಸ್ತಾನ, ತಾಝಿಕಿಸ್ತಾನಗಳ ಮೇಲೂ ಇದರ ಪರಿಣಾಮ ಬೀರಬಹುದು. ಈ ಇಡೀ ಪ್ರದೇಶದ ಬುಡಕಟ್ಟುಗಳ - ನಡುವೆ ಯಾದವೀ ಕಲಹಕ್ಕೆ ಕಾರಣವಾಗಬಹುದು. ಇದರಿಂದ ಭಾರತದ ಮೇಲೂ ಅದರಲ್ಲೂ ಕಾಶ್ಮೀರದ ಮೇಲೆ ನೇರ ಪರಿಣಾಮ ಬೀರಬಹುದು. ತಾಲಿಬಾನ್‌ಗಳಿಗೆ ಅಫಘಾನಿಸ್ತಾನದ ಭವಿಷ್ಯದ ಸರ್ಕಾರದಲ್ಲಿ ಯಾವ ಸ್ಥಾನ ಸಿಗುತ್ತದೆ, ತಾಲಿಬಾನ್‌ಗಳ ರಾಜಕೀಯ-ಮಿಲಿಟರಿ ಪ್ರಭಾವ ಎಷ್ಟರಮಟ್ಟಿಗೆ ಕಡಿಮೆ ಅಥವಾ ನಾಶವಾಗತ್ತದೆ - ಎಂಬುದು ನೇರವಾಗಿ ಭಾರತದ ಮೇಲೆ (ವಿಶೇಷವಾಗಿ ಕಾಶ್ಮೀರದಲ್ಲಿ ಉಗ್ರಗಾಮಿಗಳ ಚಳುವಳಿ) ಪ್ರಭಾವ ಬೀರುತ್ತದೆ.

ಅಫಘಾನದ ಬವಣೆ

ಈ ನಡುವೆ ಅಫಘಾನಿಸ್ತಾನದ ಜನರ ಅವಸ್ಥೆ ಹೇಳತೀರದು. ಉತ್ತರ ಅಫಘಾನಿಸ್ತಾನದಲ್ಲಿ ಉತ್ತರ-ಮೈತ್ರಿ ಕೂಟದ ಮಿಂಚಿನ ವಿಜಯದಿಂದ ನೇರ ಹೋರಾಟಗಳು ನಿಂತಿದ್ದು ಮತ್ತು ಅಂತರ್ರಾಷ್ಟ್ರೀಯ ಪರಿಹಾರ ನೆರವು ಸಾಗಾಣಿಕೆಗೆ ಅನುವಾಗಿರುವುದರಿಂದ ಜನರ ಪರಿಸ್ಥಿತಿ ಸ್ವಲ್ಪ ಸಹನೀಯವಾಗಿದೆ. ಆದರೆ ಎಷ್ಟು ಶಾಶ್ವತ? ಪುನಃ ಗೆರಿಲ್ಲಾ ಸಮರ ಆರಂಭವಾದರೆ ಪರಿಸ್ಥಿತಿ ಇನ್ನೂ ಬಿಗಡಾಯಿಸಬಹುದು. ಮುಂದಿನ ಕೆಲವು ವಾರಗಳಲ್ಲಿ ದುರ್ಗಮ ದೂರದ ಪ್ರದೇಶಗಳಿಗೆ ಪರಿಹಾರ ಸಾಮಗ್ರಿ ತಲುಪದಿದ್ದರೆ, ಲಕ್ಷಾಂತರ ಜನ ಈಗಾಗಲೇ ಆರಂಭವಾಗಿರುವ ಚಳಿಗಾಲದ, ಹಿಮಪಾತದಲ್ಲಿ ಸಾಯುವುದು ಖಚಿತ. ಅಮೆರಿಕದ ಬಾಂಬ್ ಸುರಿಮಳೆಯಲ್ಲಿ ಸ್ಫೋಟವಾಗದೆ ಉಳಿದ ಬಾಂಬ್‌ಗಳು ಇನ್ನಷ್ಟು ಜೀವಗಳನ್ನು ಬಲಿತೆಗೆದುಕೊಳ್ಳುತ್ತದೆ. ಲಾವೋಸ್, ವಿಯೆಟ್ನಾಮ್‌ಗಳಲ್ಲಿ ಮೂವತ್ತು ವರ್ಷಗಳ ನಂತರ ಈಗಲೂ ಸ್ಫೋಟವಾದ ಬಾಂಬುಗಳು ರೈತರ ಜೀವ ಬಲಿತೆಗೆದುಕೊಳ್ಳುತ್ತಲೇ ಇವೆಯೆಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ನಡುವೆ ಅಮೆರಿಕ, ಬ್ರಿಟನ್‌ಗಳಲ್ಲಿ ಭಯೋತ್ಪಾದಕತೆಯನ್ನು ನಿಯಂತ್ರಿಸುವ ಹೆಸರಲ್ಲಿ ನಮ್ಮ 'ಪೋಟೋ' ನಂತಹ ಕಾನೂನುಗಳನ್ನು ಜಾರಿಗೆ ತರಲಾಗಿದೆ. ಇದನ್ನು ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸಲು ಮತ್ತು ಸರ್ಕಾರದ-ವಿರೋಧಿಗಳನ್ನು ಹತ್ತಿಕ್ಕಲು ಆಗಲೇ ಬಳಸಲಾಗುತ್ತಿದೆ. ಇಂತಹ ಕಾನೂನುಗಳ ವಿರುದ್ಧ ಮತ್ತು ಅಫಘಾನ್ ಯುದ್ಧದ ವಿರುದ್ಧ ಶಾಂತಿ ಚಳುವಳಿಗೆ ಬೆಂಬಲ ಹೆಚ್ಚುತ್ತಿದೆ. ಹೆಚ್ಚು ಹೆಚ್ಚು ಜನ ಸರ್ಕಾರ ಮತ್ತು ಮಾಧ್ಯಮಗಳ ಸುಳ್ಳನ್ನು ಅರ್ಥಮಾಡಿಕೊಳ್ಳುತ್ತಿದ್ದಾರೆ. ತೀವ್ರ ನಿರುದ್ಯೋಗ, ಆರ್ಥಿಕ ಕುಸಿತ ಹೆಚ್ಚೆಚ್ಚು ಜನರನ್ನು ಈ ದಿಕ್ಕಿನಲ್ಲಿ



ಮುಂದಿನ ಹಾದಿ?

ಕಥೆ

ಬೆಳ್ಳಿ ಪರದೆ

ಸಿನಿಮಾದ ಖ್ಯಾತಿ ಅನುಭವಿಸುವ ಹೀರೋ, ಹೀರೋಯಿನ್‌ಗಳಿಗೆ ಡ್ಯೂಪ್ ಆಗಿ ನಟಿಸುವ ನಟ-ನಟಿಯರ ಯಾತನಾಮಯ ಬದುಕಿನ ಒಳನೋಟ ಈ ಕಥೆಯ ವಸ್ತು

ಹೆಬ್ಬೆರಳು ಒತ್ತಿದಾಕ್ಷಣ ಚಿಲ್ಲನೆ ಚಿಮ್ಮಿತ್ತು ಸುಗಂಧ ದ್ರವ್ಯ. ಎದೆಯ ಸುತ್ತ ಸಿಂಪಡಿಸಿಕೊಂಡವಳು ಮತ್ತೊಮ್ಮೆ ಎಡಭುಜದ ಮೇಲೆ ಕೈಯಾಡಿಸಿದಳು. ಸೆರಗಿನ ನಿರಿಗೆಗಳನ್ನು ಅವುಚಿ ಹಿಡಿದಿದ್ದ ಪಿನ್ನು ಬಿಗಿಯಾಗಿಯೇ ಇತ್ತು. ಅಂಚನ್ನು ತಿದ್ದಿ-ತೀಡಿಕೊಳ್ಳುವಷ್ಟರಲ್ಲಿ ಪಳನಿ ಬಂದ.

"ರೆಡಿನಾ?"

"ರೆಡಿ, ಕಾಫೀ-ಟೀ?"

"ಅದೆಲ್ಲ ಏನೂ ಬೇಡ, ಮ್ಯಾಚ್‌ಬಾಕ್ಸ್ ತೊಗೊಂಬಾ; ಬೇಗ ಹೋಗ್ಬೇಕು"

"ಇವತ್ತು ಎಲ್ಲಿ?"

"ಬ್ಲೂ ಬೆಲ್ಸ್"

"ಅದೆಲ್ಲಿರೋದು?"

"ಈಗ ಅಲ್ಲಿಗೇ ಹೋಗ್ತಿವಲ್ಲ"

ಅವಳನ್ನು ನುಂಗಲೆಂಬಂತೆ ಕಾರು ಬಾಯ್ತೆರೆದುಕೊಂಡು ನಿಂತಿತ್ತು. ಡ್ರೈವರ್ ಇಂಜಿನ್ ಸುತ್ತ ಕೈಯಾಡಿಸುತ್ತ ನಿಂತಿದ್ದ.

"ಥತ್ತೇರಿಕಿ! ಇವಂದೊಂದು ಹಾಳಾದ ಕಾರು. ಒಳ್ಳೆ ಟೈಮಿಗೆ ಕಾಲು ಎತ್ತಿ ನಿಂತುಬಿಡ್ತದೆ.. ಏನಾಯ್ತಲೇ?" ಎನ್ನುತ್ತಾ ಅವಳ ಪಕ್ಕದಲ್ಲೇ ಕೂತ ಪಳನಿ.


"ವಾಹ್! ಘಮಘಮ! ಹೈಕ್ಲಾಸಾಗಿದೆ" ಎಂದ.

"ಸೆಂಟ್ ಪ್ಲೆಸೆಂಟಾಗಿದೆ ಅಲ್ವಾ?"

"ಅದಕ್ಕೇ ಹೈಕ್ಲಾಸ್ ಅಂದಿದ್ದು"

"ಥ್ಯಾಂಕ್ಸ್" ಎನ್ನುತ್ತಾ ಮುಂಗುರುಳು ತಿದ್ದಿಕೊಂಡಳು.

ಅವಳಿಗೆ ಕೇಳಿಸುವಂತೆ ಗಾಢವಾಗಿ ಆಘ್ರಾಣಿಸಿದ ಅವನು. "ದಿಸ್ ಸೆಂಟ್ ಈಸ್ ಮೇಡ್‌ಇನ್ ಫ್ರಾನ್ಸ್. ಆಮ್ ಐ ರೈಟ್?" ಎಂದು ಸ್ಟೈಲಾಗಿ ಅವಳ ಮುಖದ ಮುಂದೆ ಚಿಟಿಕಿ ಹೊಡೆದ.



ಕೆ.ಜಗದೀಶ್ ಬಳ್ಳಾರಿ

"ಸೆಂಟ್-ಪರ್ಸೆಂಟ್ ರೈಟ್" ಎಂದಳವಳು.

"ವಾರೆವ್ಹಾ! ಫೆಂಟಾಸ್ಟಿಕ್ ಡೈಲಾಗ್!..... ಯಾವ್ದಾದ್ರೂ ಪಿಕ್ಚರ್‌ಗೆ ಡೈಲಾಗ್ಸ್ ಬರೆದ್ರೆ ನೀನು ಕ್ಲಿಕ್ ಆಗೋದು ಗ್ಯಾರಂಟಿ!"

"ಈ ಕಚಡಾ ಫೀಲ್ಡ್‌ನಲ್ಲಿ ಪ್ರತಿಭೆಯೊಂದೇ ಇದ್ರೆ ಸಾಕು ಅನ್ನೋಹಾಗಿದ್ರೆ ನೀನೂ ಯಾವತ್ತೂ ಕ್ಯಾಮೆರಮನ್ ಆಗಿರಬೇಕಾಗಿತ್ತು. ಬಾಬು ಯಾವುತ್ತೊ ವಿಲನ್ ಆಗಿ ಎಸ್ಟಾಬ್ಲಿಷ್ ಆಗಬೇಕಾಗಿತ್ತು. ಸ್ಟಂಟ್ಸ್ ಸೀನ್‌ನಲ್ಲಿ ಅವರ ಬ್ಯಾಕ್ ಡ್ರೈವ್ ಎಷ್ಟು ಪವರ್‌ಫುಲ್ ಆಗಿರ್‍ತದೆ ನೋಡಿದೀಯಲ್ಲ? ಆದ್ರೆ ಅಂಥಾ ಪ್ರತಿಭೆ ಕೇವಲ ಡ್ಯೂಪ್ ಆಗಿ ಫೈಟ್ ಮಾಡೋದ್ರಲ್ಲೇ ಹಾಳಾಗಿ ಹೋಗ್ತಾಯಿದೆ. ಪ್ರಾಣವನ್ನು ಒತ್ತೆಯಿಟ್ಟು ಸ್ಟಂಟ್ಸ್ ಮಾಡೋದು - ಬಾಬು; ಆದ್ರೆ ಬೆಳಗಾಗೋದ್ರಲ್ಲಿ ಕ್ಲಿಕ್ ಆಗೋದು - ಹೀರೋ. ಅದೇ ಬಾಬು 'ಹೈಜಾಕ್-II' ಫಿಲಂ ಶೂಟಿಂಗ್‌ನಲ್ಲಿ ಕಾಲು ಮುರ್‍ಕೊಂಡು ಬಿದ್ದಾಗ ಒಬ್ರಾದ್ರೂ ಬಂದು ಅಯ್ಯೋಪಾಪ ಅಂದ್ರಾ? ಕೆಲಸ ಆಗೋವರೆಗೂ 'ಬ್ಯಾಕ್ ಡ್ರೈವ್ ಬಾಬು, ಬ್ಯಾಕ್ ಡ್ರೈವ್ ಬಾಬು' ಅಂತ ಅವರ ಸುತ್ತ ತಿರುಗ್ತಾಯಿದ್ರು ಎಲ್ಲರು.. ಉಪಕಾರ ಇಲ್ದಿರೋ ಜನ.. ಹುಂ ಇಲ್ಲಿ ಸೆಂಟಿಮೆಂಟ್ಸ್‌ಗೆ ಕೇರ್ ಮಾಡೋವ್ರು ಯಾರು?"

"ಆ ಪ್ರೊಡ್ಯೂಸರ್ ವರ್ಮಾ ಪರಿಹಾರ ಧನ ಅಂತ ಅದೆಷ್ಟೊ ಕೊಡ್ತೀನಿ ಅಂತ ಹೇಳಿದ್ನಲ್ಲ ಅವತ್ತು ಪ್ರೆಸ್ ಮೀಟ್‌ನಲ್ಲಿ?"

"ಹೇಳಿದ, ಆದ್ರೆ ಕೊಡಲಿಲ್ಲ. ದುಡ್ಡಿನ ತೊಂದರೆಯಿದೆ. ಸದ್ಯಕ್ಕೆ ಕೊಡೋಕ್ಕಾಗಲ್ಲ ಅಂದ... ಅದೇ ರಾತ್ರಿ ಮಲಗೋಕೆ ಮೂರು ಸಾವಿರ ಖರ್ಚು ಮಾಡಿದ್ದ ಅವ್ನು"

ಬಾನೆಟ್ ಮುಚ್ಚಿ ಬಂದ ಡ್ರೈವರ್ ಕಾರ್ ಸ್ಟಾರ್ಟ್ ಮಾಡಿದ.

"ಏನಿಲ್ಲ.... ಮೈನರ್ ಪ್ರಾಬ್ಲಮ್ ಸಾರ್. ಇಂಜಿನ್ ಬೇರೆ ಹೀಟಾಗಿಬಿಟ್ಟಿತ್ತು; ಅದಕ್ಕೇ ಓಪನ್ ಮಾಡಿಟ್ಟಿದ್ದೆ" ಎನ್ನುತ್ತಾ ಕನ್ನಡಿಯನ್ನು ಸರಿಪಡಿಸಿಕೊಂಡ.

'ಇಷ್ಟೊತ್ತಿಗೆ ಹೀಟಾದ್ರೆ ಹೆಂಗಲೇ?" ಎನ್ನುತ್ತಾ ಪಳನಿ ದೊಡ್ಡ ಜೋಕ್ ಕಟ್ ಮಾಡಿದವನಂತೆ ಮೈಯೆಲ್ಲ ಕುಣಿಸುತ್ತಾ ನಕ್ಕ. ಅವಳು ನಗಲಿಲ್ಲ.

"ಯಾಕೆ? ಮೂಡ್ ಸರಿಯಾಗಿಲ್ವಾ?" ಎಂದ ಪಳನಿ.

"ಹಾಗೇನಿಲ್ಲ. ನಿದ್ದೆ ಕಡಮೆಯಾಗಿದೆ ಅಷ್ಟೆ"

"ನೈಟ್ ಶಿಫ್ಟ್ ಇತ್ತಾ?"

"......"

ತಿರುವಿನಲ್ಲಿ ಕಾರ್ ತೂಗಾಡಿತಂದಾಯಿತು. ಪಳನಿ ಜೋಲಿ ತಪ್ಪಿದವನಂತೆ ವಾಲಿ ಅವಳ ಕಡೆ ಸರಿದ.

ಅವನು ನಕ್ಕಾಗೊಮ್ಮೆ ಗಪ್ಪನೆ ಹೊರಡುವ ದುರ್ವಾಸನೆ ತಾಳದೆ ಅವಳು ಕಿಟಕಿಯ ಗಾಜನ್ನು ಇಳಿಸಲು ಹ್ಯಾಂಡಲನ್ನು ತಿರುಗಿಸತೊಡಗಿದಳು. ಅದು ಸುಲಭವಾಗಿ ತಿರುಗುವ ಸ್ಥಿತಿಯಲ್ಲಿ ಇರಲಿಲ್ಲ.

"ಈ ಕಚಡಾ ಗಾಡಿ ನಿನ್ ಮಾತು ಕೇಳ್ತದಾ? ನಾನು ತಿರುಗುಸ್ತೀನಿ ಬಿಡು" ಎನ್ನುತ್ತಾ ಪಳನಿ ಕೈ ಹಾಕಿದ. ಅವಳ ತೊಡೆಗೆ ಕೈ ತಗುಲಿಸುವುದನ್ನು ಮರೆಯಲಿಲ್ಲ. ಅದು ಅನಿವಾರ್ಯವೇನೋ ಎಂಬಂತೆ ನಟಿಸುತ್ತಾ ಹ್ಯಾಂಡಲನ್ನು ಬಲವಾಗಿ ತಿರುವಿದ. ಅದು ಪಟ್ ಎಂದು ಕಿತ್ತು ಕೈಗೇ ಬಂತು.

ತಿರುಗಿ ನೋಡಿದ ಡ್ರೈವರ್ "ಏನ್ ಸಾರ್ ಟೈಟಾಗಿತ್ತಾ?" ಎಂದ.

"ಹೂಂ... ಏನ್ ಗಾಡಿ ಹಳೇದಾದ್ರೂ ಹ್ಯಾಂಡಲ್ ಮಾತ್ರ ಫುಲ್ ಟೈಟು" ಎಂದ ಪಳನಿ.

ಇಬ್ಬರೂ ಗೊಳ್ಳನೆ ನಕ್ಕರು. ಅವಳು ಮಾತ್ರ ನಗಲಿಲ್ಲ.

ದಿನನಿತ್ಯವೂ ಇಂತಹ ಸಂದರ್ಭದಲ್ಲಿ ಸಿಲುಕಿ ನಲುಗಿ ಈಗೀಗ ಈ ಶೈಲಿಯ ಮಾತುಗಳೆಲ್ಲ ಅವಳ ಪಾಲಿಗೆ ಕ್ಲೀಷೆಗಳಾಗಿವೆ. ಇತರರನ್ನು ಪುಳಕಗೊಳಿಸುವ ಆ ಶಬ್ದಗಳಾಗಲೀ, ಸ್ಪರ್ಶಗಳಾಗಲೀ - ಒಣಗದ ಗುಲಾಬಿಯ ದಳಗಳಂತೆಯೇ ಅವಳಲ್ಲಿ ಯಾವುದೇ ಬಗೆಯ ಭಾವನೆಯನ್ನು ಸ್ಫುರಿಸದೇ ಸಾಯುತ್ತವೆ.

ಮೊದಮೊದಲು ಪಳನಿ ಬಿಡುತ್ತಿದ್ದ ಸಿಗರೇಟಿನ ಹೊಗೆ ಅವನಲ್ಲಿ ನವೋಲ್ಲಾಸ ತುಂಬಿದರೆ ಇವಳಿಗೆ ಉಬ್ಬಳಿಕೆ ತರುತ್ತಿತ್ತು. ಈಗೀಗ ಅದಕ್ಕೂ ಹೊಂದಿಕೊಂಡು ಬಿಟ್ಟಿದೆ ಜೀವ. ಇಂತಹ ನಿರ್ಲಿಪ್ತ ಮಟ್ಟ ತಲುಪಿದರೇನೇ ಇಲ್ಲಿ ನಾಲ್ಕು ದಿನಗಳು ಉಳಿಯುವುದು ಸಾಧ್ಯ. ತುಕ್ಕು ಹಿಡಿದ ತಂತಿ ಕಂಪನ ಮರೆವಂತೆ, ಈ ಮನಸ್ಸು ಕಲ್ಲಾಗಿ ಸ್ಪಂದನವನ್ನು ಕಳೆದುಕೊಂಡು ಬಿಡಬೇಕು...

ಹೋಟೆಲ್ ಬ್ಲೂಬೆಲ್ಸ್.... ಕಾರು ನಿಂತಿತು.

ಲಿಫ್ಟ್‌ನಲ್ಲಿ ಎಷ್ಟನೆಯ ಮಹಡಿಯನ್ನು ತಲುಪಿದ್ದೆಂಬುದನ್ನೂ ಅವಳು ಗಮನಿಸಲಿಲ್ಲ. ಪಳನಿಯನ್ನು ಹಿಂಬಾಲಿಸುವುದಷ್ಟೇ ಅವಳ ಕೆಲಸ. ಅವಳು ಶೂಟಿಂಗ್ ಸ್ಪಾಟ್ ತಲುಪುವಷ್ಟರಲ್ಲಿ ಚಿತ್ರೀಕರಣದ ಗಜಿಬಿಜಿ ವಾತಾವರಣ ನಿರ್ಮಾಣವಾಗಿತ್ತು. ಸ್ಪಾಟ್‌ಲೈಟಿನ ಕೋನವನ್ನು



ಸರಿಪಡಿಸುವಂತೆ ಕಿರುಚುತ್ತಿದ್ದ ಡೈರೆಕ್ಟರ್ ಮುರಾರಿ ಅವಳನ್ನು ನೋಡುತ್ತಲೇ ಉರಿದು ಕೆಂಡಾಮಂಡಲವಾದ.

'ಇಷ್ಟು ಲೇಟಾ ಬರೋದು? ಎಕ್ಸ್‌ಟ್ರಾ ಆಗಿರುವಾಗ್ಲೇ ಇಷ್ಟು ಧಿಮಾಕಿದ್ರೆ. ಇನ್ನ ಕ್ಯಾಮರಾ ಮುಂದೆ ಮೂತಿ ತೋರ್‍ಸೋ ಪಾತ್ರ ಸಿಕ್ಕುಬಿಟ್ರೆ.... ದೇವ್ರೇ ಗತಿ!"

"ಇಲ್ಲ ಸಾರ್, ನಾನೇನೋ ಸಮಯಕ್ಕೆ ಸರಿಯಾಗಿ ರೆಡಿಯಾಗಿದ್ದೆ. ಆದ್ರೆ ಕಾರ್ ಬರೋದು ಲೇಟಾಯ್ತು" ಎಂದು ಹೇಳಬೇಕೆಂದೂ ಅವಳಿಗೆ ಅನ್ನಿಸಲಿಲ್ಲ. ಸುಮ್ಮನೆ ನಿಂತಳು.

ರ್‍ಯಾಪ್ ಮೂಸಿಕ್ಕಿನ ರೀತಿ ಮುರಾರಿ ಒಂದೇ ಸಮನೆ ಉಸಿರುಬಿಡದೆ ಕಿರುಚುತ್ತಿದ್ದ. ನಾಯಕಿ-ನಿರ್ದೇಶಕ-ಹಾಟ್ ಲ್ಯಾಂಡ್ ರೂಂ. ನಂಬರ್ 363.. ಹೀಗೆ ಯಾವ್ಯಾವದೋ ಲಿಂಕುಗಳನ್ನು ಜೋಡಿಸಿ ಪಚಡಿ ಮಾಡಿ ಸಿನಿ ಪತ್ರಿಕೆ ಗಾಸಿಪ್ ಪ್ರಕಟಿಸಿದ್ದು ಈತನ ರೌದ್ರಾವತಾರಕ್ಕೆ ಕಾರಣವೆಂದು ಲೈಟ್ ಬಾಯ್‌ಗಳು ನಿರ್ಧಾರಕ್ಕೆ ಬಂದಿದ್ದರು.

ಇಂತಹ ಕಥಾನಾಯಕಿ ಕ್ಷೀರಶ್ರೀಗೆ ಇವಳು ಇಂದು ಡ್ಯೂಪ್. ಕ್ಷೀರಶ್ರೀಯ ಅಂಗಸೌಷ್ಟವಕ್ಕೆ ಇವಳ ಬಾಡಿ ಸ್ಟ್ರಕ್ಚರ್ ಟ್ಯಾಲಿ ಆಗುತ್ತದೆಂದೇ ಇವಳನ್ನು ಕರೆತರಲಾಗಿತ್ತು. ಕ್ಷೀರಶ್ರೀಯನ್ನು ಮಲಗಿಸಿದ ಖಳನಾಯಕ ಅವಳ ಸೂಕ್ಷ್ಮವಾದ ಅಂಗಾಂಗಳ ಸುತ್ತ ಸಿಗರೇಟಿನಿಂದ ಚುಚ್ಚಿ ಚುಚ್ಚಿ ಹಿಂಸಿಸುವ ದೃಶ್ಯ. ಆ ಅಂಗಾಂಗಳ ನಗ್ನ ಪ್ರದರ್ಶನಕ್ಕೆ ಕ್ಷೀರಶ್ರೀ ಒಪ್ಪದೇಇದ್ದುದರಿಂದ ಈ ಡ್ಯೂಪ್ ವ್ಯವಸ್ಥೆ.

ಲೈಟ್-ಕ್ಯಾಮರಾ-ಆಕ್ಷನ್-ಕಟ್‌ಗಳ ಮಧ್ಯೆ ಹಿಂಸೆ... ಪ್ರಾಣಿಯಂತೆ ಮಲಗಿಸಿ, ನಗ್ನದೇಹದ ಮೇಲೆ ಆಕ್ರಮಣ ಮಾಡುವ ವಿಧಾನದಲ್ಲೂ ಕ್ರಿಯೇಟಿವಿಟಿ ಇರಬೇಕೆಂದು ಒದ್ದಾಡುವ ಮುರಾರಿ. ಇಲ್ಲಿ - ಹಿಂಸೆಪಡುವ ಕ್ರಿಯೆ ಕೂಡಾ ಅಭಿನಯಕ್ಕೆ ಸಂಬಂಧಿಸಿದ ಕ್ರಿಯೆ ಮಾತ್ರ. ಆದರೆ ಕ್ಯಾಮರಾ ಕಣ್ಣಿಗೆ ಕಾಣಲಾಗದ 'ಹಿಂಸೆ' ಅವಳ ಮನದಲ್ಲಡಗಿತ್ತು.

ಸಹಜವೆಂಬ ಅಭಿನಯ ಕೃತಕ ಅಭಿವ್ಯಕ್ತಿ ಅಲ್ಲವೆ?

ಯಾಂತ್ರಿಕವಾಗಿ ಹೇಳಿದಷ್ಟನ್ನು ಮಾಡಿ ಮುಗಿಸಿ ಮನೆಗೆ ಹಿಂತಿರುಗಲು ಅವಳು ತಯಾರಾದಳು. ಯಾರೂ ಅವಳ ಕಡೆ ಗಮನ ನೀಡಲಾಗದಷ್ಟು ಬ್ಯುಸಿಯಾಗಿದ್ದರು. ಸುಮ್ಮನೆ ಹೊರಗಿನ ಬೆಂಚಿನ ಮೇಲೆಯೇ ಮುದುಡಿ ಅವಳು ಕಾಯುತ್ತಾ ಕುಳಿತಳು.

ಮಧ್ಯಾಹ್ನದ ಊಟ ಮುಗಿಸಿ ಪಳನಿ ಬಂದ "ಏನು?" ಎಂದ. ಅವಳು ಸುಮ್ಮನೆ ನಿಂತಳು. "ಕಾರ್ ಬೇರೆಕಡೆ ಹೋಗಿದೆ. ಕಾಯ್ತೀಯಾ?" ಎಂದ.

"ಇಲ್ಲ, ಮನೇಲಿ ನನಗಾಗಿ ಬಾಬು ಕಾಯ್ತಿರ್‍ತಾರೆ. ಹೋಗ್ತೀನಿ"

"ಸರಿ ನಿನ್ನಿಷ್ಟ"

ಅವಳು ಹಾಗೇ ನಿಂತಳು.

"ಏನು?...... ನಾಳೆ ನಾನೇ ಇಸ್ಕೊಂಡು ಬಂದು ಕೊಡ್ತೀನಿ.ಈಗ ಪ್ರೊಡಕ್ಷನ್ ಮ್ಯಾನೇಜರ್ ಸಿಗಲ್ಲ" ಎನ್ನುತ್ತಾ ಪಳನಿ ಹೊಗೆಬಿಟ್ಟು ಬಿರಬಿರನೆ ಹೊರಟ. ಆ ಹೊಗೆ ನೋಡುತ್ತಾ ಅವಳು ಹಾಗೇ ನಿಂತಿದ್ದಳು.

ಆಕಾರವಿಲ್ಲದ ಹೊಗೆಯೊಳಗೆ ಚಿತ್ತಾರಗಳು ಹುಟ್ಟತೊಡಗಿದ್ದವು....

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH